SRI K. H. RANGANATH.—It may not be proper to go on reading the whole letter now, because it has already been passed on to the Speaker and in turn passed on to the Government. Therefore, you can raise it at the appropriate time.

SRI KAGODU THIMMAPPA.—As per the assurance, if the Minister for Health had placed the relevant papers on Monday itself, this question would not have arisen at all. Because he has failed to keep up his promise, we have no other go than to raise it on the floor of the House.

SRI K. PUTTASWAMY.—Under Rule 146 after obtaining the consent of the Speaker, the Resolution could be moved, and the discussion may be taken up at a later date in consultation with the Treasury Benches. I would like to know whether there is any difficulty to give consent for moving the resolution.

MADAM SPEAKER.—If a resolution has to be moved I will have to consider and give permission. I will let you know tommorrow.

Closure of some dailies in Bangalore.

ಶ್ರೀ ಕೋಣಂದೂರು ಲಿಂಗಪ್ಪ.—ಮಾನ್ಯ ಅಧ್ಯಕ್ಷಣೀಯವರೇ, ಕಳೆದ ವಾರ ಪ್ರಜಾಮತ ಮತ್ತು ಜನವಾಣಿ ಪತ್ರಿಕೆಯ ಮುದ್ರಣಾಲಯದವರು ಬೀಗ ಮುದ್ರೆಯನ್ನು ಹಾಕಿ ಒಂದು ವಾರವಾಯಿತು. ಕಾರ್ಮಿಕ ಮಂತ್ರಿಯವರು ಪತ್ತೇ ಇಲ್ಲಾ, ಅಲ್ಲಿಯ ಕಾರ್ಮಿಕರಿಗೆ ಉದ್ಯೋಗವನ್ನು ಒದಗಿಸಿ ಕೊಡುವ ಬಗ್ಗೆ ಗಮನ ಸೆಳೆಯುವ ಸೂಚನೆಯನ್ನು ೩೧೨ರ ಪ್ರಕಾರ ಕಳುಹಿಸಿದ್ದೆ. ಸರ್ಕಾರ ಅದರ ಬಗ್ಗೆ ಏನು ಮಾಡಿದೆಯೋ ಗೊತ್ತಿಲ್ಲ ಇಂಡಿಯನ್ ಎಕ್ಸ್‌ಪ್ರೆಸ್ ಮತ್ತು ಕನ್ನಡ ಪ್ರಭಾ ಪತ್ರಿಕೆಗಳು ಸಹ ನಮಗೆ ಬರುತ್ತಿಲ್ಲ.

ಶ್ರೀ ಎಂ. ಎಸ್. ಕೃಷ್ಣನ್.—ಮಾನ್ಯ ಮುಖ್ಯ ಮಂತ್ರಿಗಳವರೂ ಸಹ ಇದರ ಬಗ್ಗೆ ಕಳವಳವನ್ನು ವ್ಯಕ್ತಪಡಿಸಿ ಸ್ಟೇಟ್‌ಮೆಂಟ್ ಮಾಡುತ್ತೇವೆಂದು ಹೇಳಿದ್ದರು ಅಲ್ಲಿಯ ಕಾರ್ಮಿಕರು ಸ್ಟ್ರೈಕ್ ಮಾಡುತ್ತಾ ಆಗಲೇ ಕೆಲವು ಕಡೆ ೧೭ ದಿವಸವಾಯಿತು ಮತ್ತೆ ಕೆಲವು ಕಡೆ ೫[illegible] ದಿವಸವಾಯಿತು.

ಅಧ್ಯಕ್ಷರು.—ಮಾನ್ಯ ಹಣಕಾಸಿನ ಸಚಿವರಿಂದ ಈಗ ಅವರ ಬೇಡಿಕೆಯ ಮೇಲಿನ ಚರ್ಚೆಗೆ ಉತ್ತರ ಕೊಡುತ್ತಾರೆ.

Budget Estimates for 1977-78 Demands for Grants

Demand Nos. 4, 9, 12, 19, 34 *and* 59

† ಶ್ರೀ ಎಂ. ವೈ. ಘೋರ್ಪಡೆ (ಹಣಕಾಸಿನ ಶಾಖೆಯ ಮಂತ್ರಿಗಳು).—ಮಾನ್ಯ ಅಧ್ಯಕ್ಷಣೀಯವರೇ ನಿನ್ನೆ ದಿನ ನನ್ನ ಇಲಾಖೆಗೆ ಸಂಬಂಧಪಟ್ಟ ಹಾಗೆ ಮಾನ್ಯ ಸದಸ್ಯರು ಹಲವಾರು ಸಲಹೆಗಳನ್ನು ಮಾಡಿದ್ದಾರೆ. ಅದಕ್ಕೆಲ್ಲಾ ಉತ್ತರ ಕೊಡುವುದಕ್ಕಿಂತ ಮುಂಚೆ ಸಂಕ್ಷಿಪ್ತವಾಗಿ ಈ ಇಲಾಖೆಯಲ್ಲಿ ನಡೆದಿರತಕ್ಕಂಥ ಸಾಧನೆಯ ಬಗ್ಗೆ ನಾನು ಒಂದೆರಡು ಮಾತನ್ನು ಹೇಳಬೇಕಾದ್ದು ನನ್ನ ಕರ್ತವ್ಯ.

ಕಮರ್ಷಿಯಲ್ ಟ್ಯಾಕ್ಸ್ ಡಿಪಾರ್ಟ್‌ಮೆಂಟ್ ಇದು ಬಹಳ ದೊಡ್ಡ ಇಲಾಖೆ ಒಂದು ದೃಷ್ಟಿಯಿಂದ ನೋಡಿದರೆ ಸರ್ಕಾರಕ್ಕೆ ಬಹಳಷ್ಟು ಆದಾಯ ಈ ಇಲಾಖೆಯ ಮುಖಾಂತರ ಬರುತ್ತಿದೆ. ತಮಗೆಲ್ಲಾ ಗೊತ್ತಿರುವ ಹಾಗೆ ಸೆಂಟ್ರಲ್ ಸೇಲ್ಸ್ ಟ್ಯಾಕ್ಸ್. ಅಗ್ರಿಕಲ್ಚರಲ್ ಇನ್‌ಕಂಟ್ಯಾಕ್ಸ್, ಎಂಟರ್‌ಟೇನ್

ಮೆಂಟ್ ಟ್ಯಾಕ್ಸ್, ಇವತ್ತು ಪ್ರೊಫೆಷನಲ್ ಟ್ಯಾಕ್ಸ್ ಇದೆಲ್ಲವನ್ನೂ ಈ ಇಲಾಖೆಯಲ್ಲಿ ಇದರ ಬಗ್ಗೆ ಚರ್ಯೆ ಕೈಗೊಳ್ಳಬೇಕಾಗುತ್ತದೆ. ವರದಿಯಲ್ಲಿ ಹೇಳಿದ ಪ್ರಕಾರ ತೆರಿಗೆಗಳಿಂದ ಬರತಕ್ಕಂಥ ಆದಾಯ ಕಳೆದ ೪-೫ ವರ್ಷಗಳಿಂದ ಸಾಕಷ್ಟು ಹೆಚ್ಚಿದೆ ೧೯೭೦-೭೧ರಲ್ಲಿ ೫೭ ಕೋಟಿ ರೂಪಾಯಿ ಇದ್ದದ್ದು ೧೯೭೬-೭೭ರಲ್ಲಿ ೧೫೭ ಕೋಟಿ ರೂಪಾಯಿ ಆಗಿದೆ. ಸೇಲ್ಸ್ ಟ್ಯಾಕ್ಸ್ ಬಗ್ಗೆ ಪ್ರತ್ಯೇಕವಾಗಿ ಹೇಳುವುದಾದರೆ ೧೯೭೦-೭೧ರಲ್ಲಿ ೫೧ ಕೋಟಿ ರೂಪಾಯಿ ಮಾರಾಟ ತೆರಿಗೆ ಆಗಿದ್ದು ೧೯೭೬-೭೭ರಲ್ಲಿ ೧೩೪ ಕೋಟಿ ರೂಪಾಯಿ ಮತ್ತು ೧೯೭೭-೭೮ರಲ್ಲಿ ಮಾರಾಟ ತೆರಿಗೆ ೧೬೧ ಕೋಟಿ ರೂಪಾಯಿ ಆಗಿದೆ. ಇದಕ್ಕೆ ಹಲವಾರು ಕಾರಣಗಳಿವೆ

ಶ್ರೀ ಕಾಗೋಡು ತಿಮ್ಮಪ್ಪ.—ಅಡಿಷನಲ್ ತೆರಿಗೆ ವಿಷಯ ಹೇಳಿ.

ಶ್ರೀ ಎಂ. ವೈ. ಘೋರ್ಪಡೆ.—ಪ್ರತ್ಯೇಕವಾಗಿ ಹೇಳುವುದಕ್ಕೆ ಕಷ್ಟವಾಗುತ್ತದೆ. ಈ ಟ್ಯಾಕ್ಸನ್ನು ಜಾಸ್ತಿ ಮಾಡುತ್ತಾ ಬಂದಿರುವುದಕ್ಕೆ ಒಂದು ಕಾರಣ ಈ ಬೆಲೆಗಳು ಜಾಸ್ತಿಯಾಗಿದೆ. ಅದು ಕೂಡ ಒಂದು ರಿಫ್ಲೆಕ್ಷನ್ ಆಗಿರುತ್ತದೆ.

ಶ್ರೀ ಕಾಗೋಡು ತಿಮ್ಮಪ್ಪ.—ತಾವು ಆರ್ಥಿಕ ತಜ್ಞರು ಅದೆಲ್ಲವನ್ನೂ ಹೇಳಬೇಕಾಗುತ್ತದೆ.

ಶ್ರೀ ಎಂ. ವೈ. ಘೋರ್ಪಡೆ.—ಅಂಕಿ ಸಂಖ್ಯೆಗಳನ್ನು ತಮಗೆ ಕೊಟ್ಟರೆ, ಆವಾಗ ಜವಾಬ್ದಾರಿಯುತವಾಗಿ ನಾನು ಹೇಳಿರತಕ್ಕಂಥ ಮಾತು ಏನು ಎಂಬುದು ತಮಗೆ ಗೊತ್ತಾಗುತ್ತದೆ.

ಶ್ರೀ ಎಚ್. ಡಿ. ದೇವೇಗೌಡ.—ನೀವು ಒಬ್ಬರಾದರೂ ಜವಾಬ್ದಾರಿ ಇಟ್ಟುಕೊಂಡು ಹೇಳುತ್ತೀನೆಂದು ಹೇಳುತ್ತಿರುವುದರಿಂದ ನಮಗೆ ಸಮಾಧಾನವಾಗುತ್ತಿದೆ, ಬೇಜವಾಬ್ದಾರಿಯಿಂದ ಮಾತನಾಡುವವರ ಕಂಪನಿಯಲ್ಲಿ ನೀವು ಇದ್ದೀರಲ್ಲಾ ?

ಶ್ರೀ ಎಂ. ವೈ. ಘೋರ್ಪಡೆ.—೧೯೭೬-೭೭ರಲ್ಲಿ ಹೊಸ ಟ್ಯಾಕ್ಸ್ ಎಷ್ಟು ಎಂದು ವರದಿಯಲ್ಲಿ ಸ್ಪಷ್ಟವಾಗಿ ಹೇಳಿದ್ದೇವೆ. ೧೯೭೫-೭೬ರಲ್ಲಿ ನಾವು ಹಾಕಿರತಕ್ಕಂಥ ಟ್ಯಾಕ್ಸ್ ೧೨ ಕೋಟಿ ರೂಪಾಯಿ ಆದರೆ ಹಿಂದಿನ ವರ್ಷಕ್ಕೆ ಅದನ್ನು ಹೋಲಿಸಿ ನೋಡಿದರೆ ಸುಮಾರು ೨೦ ಕೋಟಿ ರೂಪಾಯಿ ಜಾಸ್ತಿಯಾಗಿದೆ. ೨೦ ಕೋಟಿಯಲ್ಲಿ ೧೨ ಕೋಟಿ ರೂಪಾಯಿ ಹೊಸದಾಗಿ ಹಾಕಿರತಕ್ಕಂಥ ಟ್ಯಾಕ್ಸ್ ಎಂದು ಇಟ್ಟುಕೊಳ್ಳಬಹುದು. ೫ ವರ್ಷದ ಅಂಕಿಸಂಖ್ಯೆಗಳನ್ನು ಹೇಳುತ್ತಾ ಪ್ರತ್ಯೇಕವಾಗಿ ವರ್ಷೇ ವರ್ಷೇ ಎಷ್ಟು ತೆರಿಗೆಗಳನ್ನು ಹಾಕಿದ್ದೇವೆಂದು ಹೇಳಬಲ್ಲೆ.

ಇನ್ನು ಇಂಕ್ರೀಜ್ ಇನ್ ಸೇಲ್ಸ್ ಟಾಕ್ಸ್‌ನ ಫಿಗರ್ಸ್ ಕೊಟ್ಟಿದ್ದೇವೆ. ಅದರ ಬಗ್ಗೆ ಕೂಡ ಮಾನ್ಯ ಸದಸ್ಯರು ಪ್ರಸ್ತಾಪ ಮಾಡಿದ್ದರು, ಅದರಲ್ಲಿ ಡಿಮ್ಯಾಂಡ್ ೧೯೭೦-೭೧ರಲ್ಲಿ ೫೨ ಕೋಟಿ ರೂಪಾಯಿ ಇದ್ದರೆ, ಬ್ಯಾಲೆನ್ಸ್ ೬.೫೮ ಕೋಟಿ ರೂಪಾಯಿ ಇದೆ. ಇದು ಎಷ್ಟು ಪರ್ಸೆಂಟೇಜ್ ಆಯಿತು ಎಂದು ಲೆಕ್ಕ ಹಾಕಿ ಹೇಳಿದರೆ ಆ ಒಂದು ಚಿತ್ರ ಎಲ್ಲರಿಗೂ ಸ್ಪಷ್ಟವಾಗಿ ಅರ್ಥವಾಗುತ್ತದೆ. ಅದು ೧೧.೩ ಪರ್ಸೆಂಟೇಜ್ ಆಗುತ್ತದೆ. ಈಗ ೧೯೭೫-೭೬ರಲ್ಲಿ ಅದೇ ರೀತಿ ಪರ್ಸೆಂಟೇಜ್ ಎಷ್ಟು. ಡಿಮ್ಯಾಂಡ್ ಮತ್ತು ಬ್ಯಾಲೆನ್ಸ್ ಎಷ್ಟು ಅಂತ ನೋಡಿದರೆ ಬ್ಯಾಲೆನ್ಸ್ ೯.೧ ಪರ್ಸೆಂಟ್‌ಗೆ ಇಳಿದಿದೆ ಅಂದರೆ ಒಟ್ಟಿನಲ್ಲಿ ಪರ್ಸೆಂಟೇಜ್, ಬ್ಯಾಲೆನ್ಸ್ ಮತ್ತು ಡಿಮ್ಯಾಂಡ್ ಕಡಿಮೆಯಾಗುತ್ತಾ ಬಂದಿದೆ ಎಂದು ಸ್ಪಷ್ಟವಾಗಿ ಹೇಳಬಹುದು. ಆಮೇಲೆ ಅದಕ್ಕಿಂತ ಮುಖ್ಯವಾಗಿ No. of assestsments to be disposed of, No. of assessments disposed of and No. of assessments pending disposal at the end of the year ಏನಿದೆ ಎಂಬುದನ್ನು ತಾವು ನೋಡಿದರೆ ಅದರ ಇಂಪಾರ್ಟೆನ್ಸ್ ತಮಗೆ ಅರ್ಥವಾಗುತ್ತದೆ. ಉದಾಹರಣೆಗೆ ೧೯೭೨-೭೩ರಲ್ಲಿ ೧,೫೨,೯೫ ನಂ. ಆಫ್ ಅಸಸ್‌ಮೆಂಟ್ಸ್ ಟು ಬಿ ಡಿಸ್ಪೋಜ್ಡ್ ಆಫ್ ಇದ್ದರೆ ಅಟ್ ದಿ ಎಂಡ್ ಆಫ್ ದಿ ಇಯರ್‌ನಲ್ಲಿ ೬೪,೦೯೮ ಇವೆ. ಅದರ ಪರ್ಸೆಂಟೇಜ್ ತೆಗೆದುಕೊಂಡರೆ ೪೧ ಪರ್ಸೆಂಟ್ ಆಗುತ್ತದೆ. ಅದೇ ರೀತಿ ೧೯೭೫-೭೬ರಲ್ಲಿ ಅಸೆಸ್‌ಮೆಂಟ್ಸ್ ಟು ಬಿ ಡಿಸ್ಪೋಜ್ಡ್ ಆಫ್ ನಿಂದ ಅಸೆಸ್‌ಮೆಂಟ್ ಪೆಂಡಿಂಗ್ ಡಿಸ್ಪೋಜ್ಡ್ ಆಫ್ ಅಟ್ ದಿ ಇಯರ್ ಎಂಡ್‌ನ ಪರ್ಸೆಂಟೇಜ್ ತೆಗೆದುಕೊಂಡರೆ ೪೧ ಪರ್ಸೆಂಟ್‌ನಿಂದ ೨೭ ಪರ್ಸೆಂಟ್‌ಗೆ ಇಳಿದಿದೆ. ಮತ್ತೆ ೧೯೭೭-೭೬ರಲ್ಲಿ ಅಸೆಸ್‌ಮೆಂಟ್ಸ್ ಪೆಂಡಿಂಗ್ ಡಿಸ್ಪೋಜ್ಡ್ ಅಟ್ ದಿ ಇಯರ್ ಎಂಡ್‌ನಲ್ಲಿ ೪೩,೫೮೪ ಇದ್ದು ಅದೇ ೩೧-೩-೧೯೭೮ರಲ್ಲಿ ೧೧ ಸಾವಿರ ಮಾತ್ರ ಉಳಿದಿದೆ. ಇದರಲ್ಲಿ ತಾವು ನೋಡುವುದಾದರೆ ೬೫ ಸಾವಿರದ ಪೈಕಿ ೩೪ ಸಾವಿರ ಇದು ೧೯೭೪ ೧೯೭೫ನೇ ವರ್ಷಕ್ಕೆ ಸಂಬಂಧಪಟ್ಟಿದ್ದು. ಅಂದರೆ ಒಂದು ವರ್ಷ ಪೆಂಡಿಂಗ್‌ನಲ್ಲಿ ಇರತಕ್ಕಂಥದ್ದನ್ನು ತಾವು ಗಮನಿಸ

ಬಹುದು. ೪೫ ಸಾವಿರದಲ್ಲಿ ೩೫ ಸಾವಿರ ಹೆಚ್ಚು ಕಡಿಮೆ ಅದೇ ವರ್ಷಕ್ಕೆ ಸಂಬಂಧಪಟ್ಟದ್ದು ತಮಗೆಲ್ಲಾ ಗೊತ್ತಿದೆ; ಅದನ್ನೆಲ್ಲಾ ಡಿಸ್ಪೋಸ್ ಆಫ್ ಮಾಡುವುದಕ್ಕೆ ೩-೪ ತಿಂಗಳು ಬೇಕಾಗುತ್ತದೆ. ಅದನ್ನೆಲ್ಲಾ ಒಟ್ಟಿಗೆ ತೆಗೆದುಕೊಂಡರೂ ಕೂಡ ೩೧-೩-೧೯೭೭ಕ್ಕೆ ೧೦ ಸಾವಿರ ಮಾತ್ರ ಪೆಂಡಿಂಗ್ ಉಳಿದಿರತಕ್ಕಂಥಗಿದ್ದುವು. ಆಮೇಲೆ ಅರಿಯರ್ಸ್ ಏನಿದೆ ಅದರ ಬಗ್ಗೆ ಹೇಳುವುದಾದರೆ ೧೯೭೬-೭೭ರಲ್ಲಿ ೧೨ ಕೋಟಿ ರೂಪಾಯಿ ಅರಿಯರ್ಸ್ ಇದೆ ಎಂಬುದನ್ನು ವರದಿಯಲ್ಲಿ ತೋರಿಸಿದ್ದೇವೆ. ಆದರಲ್ಲಿ ೬ ಕೋಟಿ ೭೯ ಲಕ್ಷ ರೂಪಾಯಿಗಳು ಮಾತ್ರ ನಿಜವಾದ ಅರಿಯರ್ಸ್ ಎಂದು ಇಟ್ಟುಕೊಳ್ಳಬೇಕು. out of Rs. 12 croees Rs. 6.79 crores of rupees are arrears ಅಂತ ನನ್ನ ವಾದ. ಏತಕ್ಕೆಂದರೆ ೩ ಕೋಟಿ ರೂಪಾಯಿಗಳಿಗೆ ಸ್ಟೇ ಆರ್ಡರ್ ಇದೆ. Amount covered by Instalment facli ities Rs. 40 lakhs ಇದೆ. Then Amount covered under Interest free loan Rs 64 lakhs ಇದೆ. ಆಮೇಲೆ ಕಲೆಕ್ಟ್ ಆದಂಥ ಅಂಕಿ ಸಂಖ್ಯೆ ಏನು ಇದೆ ಅದು ಎಷ್ಟೆಂದರೆ ೩೩ ಲಕ್ಷ ರೂಪಾಯಿ. ಅರಿಯರ್ಸ್ ಆಫ್ ಲ್ಯಾಂಡ್ ರೆವಿನ್ಯೂ ಮೂರು ಕೋಟಿ ಇಪ್ಪತ್ತೆಂಟು ಲಕ್ಷ ರೂಪಾಯಿಗಳನ್ನು ವಸೂಲಿ ಮಾಡುವುದಕ್ಕೆ ಈಗಾಗಲೇ ಕಳುಹಿಸಿಕೊಟ್ಟಿದ್ದೇವೆ. ಒಟ್ಟಿನಲ್ಲಿ ಹೇಳಬೇಕೆಂದರೆ, ಹನ್ನೆರಡು ಕೋಟಿಯಲ್ಲಿ ಅರ್ಧ ಬಾಕಿ ಎಂದು ಇಟ್ಟುಕೊಂಡರೆ, ಅದರಲ್ಲಿ ಅರ್ಧ ಅಂದರೆ, ಮೂರು ಕೋಟಿ ಇಪ್ಪತ್ತೆಂಟು ಲಕ್ಷ ರೂಪಾಯಿಗಳನ್ನು ವಸೂಲಿ ಮಾಡುವುದಕ್ಕೆ ಕಳುಹಿಸಿದ್ದೇವೆ. ಆದುದರಿಂದ ನಮ್ಮ ಇಲಾಖೆಯ ಅಧಿಕಾರಸ್ಥರು ವಸೂಲಿ ಬಗ್ಗೆ ಸಾಕಷ್ಟು ಆಸಕ್ತಿ ವಹಿಸುತ್ತಿದ್ದಾರೆ ಎನ್ನುವ ಮಾತನ್ನು ಹೇಳುತ್ತೇನೆ.

2-30 P.M.

ಅಗ್ರಿಕಲ್ಚರ್ ಇನ್‌ಕಂ ಟ್ಯಾಕ್ಸ್‌ನ ಡಿಮ್ಯಾಂಡ್ 1971-72 ರಲ್ಲಿ ಎರಡು ಕೋಟಿ ಎಂಭತ್ತ ಮೂರು ಲಕ್ಷ ರೂಪಾಯಿಗಳಿದ್ದುದು 1975-76ಕ್ಕೆ ನಾಲ್ಕು ಕೋಟಿ ಐವತ್ತೇಳು ಲಕ್ಷ ರೂಪಾಯಿಗಳಾಗಿತ್ತು. 1976—77ಕ್ಕೆ ಸುಮಾರು ನಾಲ್ಕು ಕೋಟಿ ಇಪ್ಪತ್ತೈದು ಲಕ್ಷ ಆದಾಯ ಬರುವ ನಿರೀಕ್ಷೆಯಿದೆ. ಕಾಫಿ ಬೆಲೆ ಜಾಸ್ತಿಯಾದದ್ದೇ ಇದಕ್ಕೆ ಕಾರಣವೆಂದು ನಾನು ಹೇಳುತ್ತೇನೆ. ವೃತ್ತಿ ತೆರಿಗೆ ಕುರಿತು ಕೆಲವು ಅಂಕಿ-ಸಂಖ್ಯೆಗಳನ್ನು ನಾವು ವರದಿಯಲ್ಲಿ ಕೊಟ್ಟಿದ್ದೇವೆ. ಡಿಮ್ಯಾಂಡ್ ಇನ್ ಪ್ರೊಫೆಷನಲ್ ಟ್ಯಾಕ್ಸ್ 1976-77ರಲ್ಲಿ ಮೂರು ಕೋಟಿ ನಲವತ್ತೈದು ಲಕ್ಷವಿದ್ದುದು ೧೯೭೭-೭೮ಕ್ಕೆ ನಾಲ್ಕು ಕೋಟಿ ಐವತ್ತು ಲಕ್ಷಕ್ಕೆ ಹೋಗಬಹುದೆಂದು ನಿರೀಕ್ಷೆಯಿದೆ. ಮನರಂಜನಾ ತೆರಿಗೆ ಬಗ್ಗೆಯೂ ನಾವು ವರದಿಯಲ್ಲಿ ಅಂಕಿ-ಸಂಖ್ಯೆಗಳನ್ನು ತೋರಿಸಿದ್ದೇವೆ. ೧೯೭೧—೭೨ರಲ್ಲಿ ಮೂರು ಕೋಟಿ ಎಂಬತ್ತೆರಡು ಲಕ್ಷವಿದ್ದುದು ೧೯೭೫—೭೬ಕ್ಕೆ ಎಂಟು ಕೋಟಿ ಎಪ್ಪತ್ತಾರು ಲಕ್ಷಗಳಾಯಿತು. ೧೯೭೬-೭೭ಕ್ಕೆ ಇದು ಹನ್ನೆರಡು ಕೋಟಿಯಷ್ಟಾಗಿದೆ. ಇದು ೧೯೭೭-೭೮ಕ್ಕೆ ಹದಿಮೂರು ಕೋಟಿ ಎಪ್ಪತ್ತೈದು ಲಕ್ಷ ರೂಪಾಯಿಗಳಿಗೆ ಏರಬಹುದೆಂದು ನಿರೀಕ್ಷಿಸಲಾಗಿದೆ. ತೆರಿಗೆಯನ್ನು ವಸೂಲಿಮಾಡುವುದಕ್ಕೆ ಆಗಿನ ಖರ್ಚಿನ ಪ್ರಮಾಣವನ್ನು ಗಮನಿಸಿದರೆ, ನಮ್ಮ ಇಲಾಖೆ ಯಾವರೀತಿ ದಕ್ಷತೆಯಿಂದ ಕೆಲಸ ಮಾಡುತ್ತಿದೆ ಎನ್ನುವುದನ್ನು ತಿಳಿಯಲು ಅವಕಾಶವಾಗುತ್ತದೆ. ಇದರ ಖರ್ಚಿನ ವೆಚ್ಚ ೧೯೭೧-೭೨ರಲ್ಲಿ ೨.೨ ಪರ್ಸೆಂಟ್ ಇದ್ದುದು ೧೯೭೬-೭೭ಕ್ಕೆ ೧.೭ಕ್ಕೆ ಇಳಿದಿದೆ

ಇನ್ನು ಇನ್‌ಸ್ಟಲೇಷನ್ ಆಫ್ ಬ್ರಾಡ್ಮ ಮೆಸಿನ್ಸ್ ವಿಚಾರ ಬಹಳ ಮುಖ್ಯವಾದುದು. ಬೆಂಗಳೂರು, ಮೈಸೂರು, ಚಿತ್ರದುರ್ಗ ಮತ್ತು ಧಾರವಾಡ ಕಡೆಗಳಲ್ಲಿರುವ ವೈದ್ಯಾಪ್ಯ ವೇತನದಾರರ ಹೆಸರುಗಳ ಪ್ಲೇಟುಗಳನ್ನು ಉಪಯೋಗಿಸಿ, ಅವರ ಹೆಸರು ತಪ್ಪಾಗದಂತೆ ಬಹಳ ದಕ್ಷತೆಯಿಂದ ಕೆಲಸ ಮಾಡುವುದಕ್ಕೆ ಈ ಬ್ರಾಡ್ಮ ಯಂತ್ರವನ್ನು ಉಪಯೋಗಿಸಲಾಗುತ್ತಿದೆ ಇದು ವೇತನದಾರರಿಗೆ ಅನುಕೂಲವಾಗುವುದಲ್ಲದೆ, ಕೆಲಸವೂ ಕೂಡ ತಡವಾಗಿದೆ ಜಾಗ್ರತೆಯಾಗುವುದಕ್ಕೆ ಸಹಾಯಕವಾಗಿದೆ.

ಇನ್ನು ಜೀವವಿಮಾ ಇಲಾಖೆ ಬಗ್ಗೆ ಒಂದು ಮಾತನ್ನು ಹೇಳಬೇಕಾಗಿದೆ. ಈಗಾಗಲೇ ಜೀವವಿಮೆಗೆ ಅರ್ಹರಾದ ಸುಮಾರು ಮೂರು ಲಕ್ಷ ಜನರಿದ್ದಾರೆ. ಇವರಲ್ಲಿ ಎರಡು ಲಕ್ಷದ ನಲವತ್ತೂರು ಲಕ್ಷ ಪಾಲಿಸಿದಾರರಿದ್ದಾರೆ. ಅಲ್ಲದೆ, ಈ ಮೂರು ಲಕ್ಷದ ಜನರ ಪೈಕಿ ಒಂದು ಲಕ್ಷದ ಐವತ್ತೈದು ಸಾವಿರ ಜನರು ಇದರಲ್ಲಿ ಕವರ್ ಕೂಡ ಆಗಿದ್ದಾರೆ ಅಂದರೆ, ಹೆಚ್ಚೂ ಕಡಿಮೆ ಅರ್ಧದಷ್ಟು ಜನರು ಇದರಲ್ಲಿ ಕವರ್ ಆಗಿದ್ದಾರೆ. ಇದರಿಂದ ವಾರ್ಷಿಕ ಪ್ರೀಮಿಯಂ ಮೂರು ಕೋಟಿ ರೂಪಾಯಿಗಳಷ್ಟು ಬರುತ್ತಿದೆ.

ವಿಮಾ ಇಲಾಖೆಯನ್ನು ಹೆಚ್ಚು ಬಲಪಡಿಸಬೇಕು : ಸರಕಾರಿ ನೌಕರರಿಗೆ ಇದರಿಂದ ಬಹಳ ಅನುಕೂಲವಾಗುತ್ತಿದೆ. ಈ ಇಲಾಖೆ ಬಗ್ಗೆ ನೌಕರರಿಗೆ ಅರಿವು ಮಾಡಿಸಲು ಪ್ರಚಾರ ಕಾರ್ಯ ಕೈಗೊಳ್ಳಬೇಕು. ಅಷ್ಟೇ ಅಲ್ಲದೆ. ಈ ವಿಮಾ ಇಲಾಖೆಯಲ್ಲಿ ಜಿಲ್ಲಾ ಮಟ್ಟದಲ್ಲಿ ಮತ್ತು ವಿಭಾಗ ಮಟ್ಟದಲ್ಲಿ ವ್ಯಾಪಕವಾಗಿ ಬಲಪಡಿಸಬೇಕೆನ್ನುವ ಉದ್ದೇಶ ಸರ್ಕಾರಕ್ಕಿದೆ.

ಸಣ್ಣ ಉಳಿತಾಯದ ಬಗ್ಗೆ ನಾವು ವರದಿಯಲ್ಲಿ ತಿಳಿಸಿದ್ದೇವೆ. ೧೯೭೦-೭೧ರಲ್ಲಿ ಆರು ಕೋಟಿ ಅರವತ್ತೆರಡು ಲಕ್ಷವಿದ್ದುದು ೧೯೭೩-೭೪ರಲ್ಲಿ ಹದಿನೈದು ಕೋಟಿಯಷ್ಟಾಗಿದೆ. ೧೯೭೩-೭೪ರಲ್ಲಿ ನೆಟ್ ಕಲೆಕ್ಷನ್ ೨೫.೨೫ ಕೋಟಿ ರೂಪಾಯಿಗಳಾಗಿದ್ದರೆ, ಕಳೆದ ಮೂರು ವರ್ಷಗಳಲ್ಲಿ ಒಟ್ಟು ನೆಟ್ ಕಲೆಕ್ಷನ್ ೬೨ ಕೋಟಿ ರೂಪಾಯಿಗಳಷ್ಟಾಗಿದೆ. ಸಣ್ಣ ಉಳಿತಾಯದಲ್ಲಿ ನಾವು ಪಂಚವಾರ್ಷಿಕ ಯೋಜನೆಯನ್ನಯ ಹಾಕಿಕೊಂಡಿರುವ ನೂರು ಕೋಟಿ ರೂಪಾಯಿಗಳ ಸಂಗ್ರಹಣೆಯ ಗುರಿಯ ಪ್ರಕಾರ ಕಳೆದ ಮೂರು ವರ್ಷಗಳಲ್ಲಿ ಕಾರ್ಯ ನಡೆದಿದೆ ಎನ್ನುವುದು ಇದರಿಂದ ಗೊತ್ತಾಗುತ್ತದೆ. ನೂರು ಕೋಟಿರೂಪಾಯಿಗಳ ಗುರಿಯಲ್ಲಿ ಕಳೆದ ಮೂರು ವರ್ಷದಲ್ಲ ಈಗಾಗಲೇ ಅರವತ್ತೆರಡು ಕೋಟಿ ರೂಪಾಯಿಗಳು ಇದರಲ್ಲಿ ಸಂಗ್ರಹಣೆಯಾಗಿದೆ. ಇದು ರಾಜ್ಯ ಸರ್ಕಾರಕ್ಕೆ ಬಹಳ ಸಹಾಯಕವಾದ ಕಾರ್ಯಕ್ರಮ. ಇದರಲ್ಲಿ ಮೂರರಲ್ಲಿ ಎರಡು ಭಾಗ ರಾಜ್ಯ ಸರ್ಕಾರಕ್ಕೆ ಬರುತ್ತದೆ.

ಮಾನ್ಯ ಸದಸ್ಯರನೇಕರು ಹಲವಾರು ಪ್ರಶ್ನೆಗಳನ್ನು ಎತ್ತಿದ್ದಾರೆ. ಅವರಿಗೆ ನಾನು ಪ್ರತ್ಯೇಕ ಪ್ರತ್ಯೇಕವಾಗಿ ಉತ್ತರ ಹೇಳಲು ಬಯಸುತ್ತೇನೆ. ವಿರೋಧ ಪಕ್ಷದ ನಾಯಕರಾದಿಯಾಗಿ ಎಲ್ಲ ಸದಸ್ಯರೂ. ಈ ಇಲಾಖೆಯಲ್ಲಿರುವ ಮೇಲ್ಪಟ್ಟದ ಅಧಿಕಾರಸ್ತ ಜನರು ಬಹಳ ದಕ್ಷತೆಯಿಂದ ಹಾಗೂ ಪ್ರಾಮಾಣಿಕತೆಯಿಂದ ಕೆಲಸ ಮಾಡುತ್ತಿದ್ದಾರೆ ಇದರ ಬಗ್ಗೆ ಯಾವ ಅನುಮಾನವಿಲ್ಲ ಎನ್ನುವ ಮಾತನ್ನು ಹೇಳಿದ್ದಾರೆ. ಇದನ್ನು ಕೇಳಿ ನನಗೆ ಬಹಳ ಸಂತೋಷವಾಯಿತು. ದಕ್ಷತೆಯಿಂದ ಪ್ರಾಮಾಣಿಕತೆಯಿಂದ ಕೆಲಸ ಮಾಡುವವರನ್ನು ಗುರುತಿಸಿ, ಅವರನ್ನು ದಕ್ಷತೆಯಿಂದ ಮತ್ತು ಪ್ರಾಮಾಣಿಕತೆಯಿಂದ ಕೆಲಸ ಮಾಡುತ್ತಾನೆ ಎಂದು ಹೇಳಿದರೆ, ಅವರ ಒಳ್ಳೆಯ ಪ್ರವೃತ್ತಿಯನ್ನು ನಾವು ಇನ್ನಷ್ಟು ಬೆಳೆಸಿದಂತಾಗುತ್ತದೆ. ಆದರೆ. ಕೆಳಮಟ್ಟದಲ್ಲಿ ನಾವಿನ್ನು ಸಾಕಷ್ಟು ಮಾಡಿಲ್ಲ. ಕೆಳಮಟ್ಟದಲ್ಲಿ ಭ್ರಷ್ಟಾಚಾರವನ್ನು ಸಂಪೂರ್ಣವಾಗಿ ತಡೆಗಟ್ಟುವುದಕ್ಕೆ ಸಾಧ್ಯವಾಗಿದೆ ಎಂದು ನಾನೂ ಕೂಡ ಹೇಳುವುದಿಲ್ಲ. ಕೆಳಮಟ್ಟದಲ್ಲಿಯೂ ದಕ್ಷತೆ ಹೆಚ್ಚಿಸಲಿಕ್ಕೆ ಅವಕಾಶ ಇದೆ, ಆದರೆ ಇದನ್ನು ಯಾವರೀತಿ ಮಾಡಬೇಕು ಎನ್ನುವ ವಿಚಾರದಲ್ಲಿ ಯೋಚನೆ ಮಾಡಬೇಕು. ನಾವು ಕೂಡ ಸ್ವಲ್ಪಮಟ್ಟಿಗೆ ಇದರಲ್ಲಿ ಬ್ರಷ್ಟಾಚಾರ ಮತ್ತು ಅದಕ್ಷತೆ ಏನು ಇದ್ದವು; ಇವುಗಳನ್ನು ಕಡಿಮೆ ಮಾಡುವುದಕ್ಕೆ ಪ್ರಯತ್ನ ಮಾಡಿದ್ದೇವೆ, ಮಾಡುತ್ತೇವೆ. ಇಲ್ಲದೆ ಹೋದರೆ ಇಷ್ಟೊಂದು ಆದಾಯ ಜಾಸ್ತಿಯಾಗುತ್ತಾ ಇರಲಿಲ್ಲ. ಯಾವುದೇವಿಚಾರದಲ್ಲಾಗಲೀ ಬರಹ ಮೂಲಕ ದೂರುಗಳನ್ನು ಕೊಟ್ಟರೆ ವಿಚಾರಣೆ ಮಾಡುವುದಕ್ಕೆ ಅನುಕೂಲವಾಗುತ್ತದೆ. ಗುರುತರವಾದ ದೂರು ಆಗಿದ್ದರೆ ವಿಜಿಲೆನ್ಸ್ ಕಮೀಷನ್ ಮುಖಾಂತರ ವಿಚಾರಣೆ ನಡೆಸುತ್ತೇವೆ. ಒಂದು ಪಕ್ಷ ಪ್ರೈಮಾಫೇಸಿ ಕೇಸ್ ಇದೆ ಎಂದು ಗೊತ್ತಾದರೆ ವಿಚಾರಣೆಗೆ ಅನುಕೂಲವಾಗುತ್ತದೆ. ಇದರ ಆಸಕ್ತಿಇರತಕ್ಕ ಶಾಸಕರನ್ನು ನನ್ನ ಚೇಂಬರ್‌ಗೆ ಕರೆಸಿ ಯೋಚನೆ ಮಾಡುವುದಕ್ಕೆ ಏರ್ಪಾಡು ಮಾಡುತ್ತೇನೆ. ನಾನ್ ಅಫಿಷಿಯಲ್ ಪೆಟಿಷನ್ ಕಳುಹಿಸಿಕೊಟ್ಟರೆ ದೂರುಗಳ ವಿಚಾರಣೆಗೆ ಬಹಳ ತೊಂದರೆಯಾಗುತ್ತದೆ. ದೂರು ಕಳುಹಿಸುವವರ ಮೇಲೇ ಮತ್ತೆ ದೂರು ಇರುತ್ತದೆ. ಆಡಳಿತಯಂತ್ರವನ್ನು ಡೀಮಾರಲೈಸ್ ಆಗದ ಹಾಗೆ ನೋಡಿಕೊಳ್ಳಬೇಕು. ಹಾಗೆ ಏನಾದರೂ ಸಂಧಾರಣೆ ಮಾಡುವುದಕ್ಕೆ ಸಾಧ್ಯವಿದ್ದರೆ ಸರ್ಕಾರ ಅದನ್ನು ಮಾಡುವುದಕ್ಕೆ ಸಿದ್ಧ ಎಂದು ಹೇಳುತ್ತೇನೆ. ಒಟ್ಟಿನಲ್ಲಿ ಯಾವುದೇ ವಿಚಾರದಲ್ಲಾಗಲೀ ಬರಹ ಮೂಲ ದೂರು ಕೊಡಬೇಕು. ಓರಲ್ ಕಂಪ್ಲೇಂಟ್ ಕೊಟ್ಟರೂ ಕೂಡ ವಿಚಾರಣೆ ನಡೆಸುವಾಗ ಎವಿಡೆನ್ಸ್ ಕೂಡ ಒದಗಿಸಲಾಗಿದೆ. ಇಲ್ಲದೆ ಹೋದರೆ ದೂರು ಮಾಡುತ್ತಾರೆ ಕೆಲವರು ಬೇನಾಮಿ ಅರ್ಜಿಗಳನ್ನು ಕೊಡುತ್ತಾರೆ. ಇದರ ಬಗ್ಗೆ ಎವಿಡೆನ್ಸ್ ಕೊಡಿ ಎಂದರೆ ಯಾರೂ ಕೊಡುವುದಕ್ಕೆ ಬರುವುದಿಲ್ಲ. ಇದನ್ನು ಯಾವರೀತಿ ಸರಿಪಡಿಸಬೇಕು ಎನ್ನುವ ಬಗ್ಗೆ ನೀವು ನಾವು ಕುಳಿತು ಯೋಚನೆ ಮಾಡೋಣ. ಬಿಸಿನೆಸ್ ಕಡಿಮೆ ಯಾಗುತ್ತಿರುವವರಿಗೂ ಟ್ಯಾಕ್ಸ್ ಜಾಸ್ತಿ ಹಾಕುತ್ತೀರಿ ಎಂದು ತಿಮ್ಮಪ್ಪನವರು ಹೇಳಿದರು. ಬಿಸಿನೆಸ್ ಕಡಿಮೆಯಾಗಿದ್ದರೆ ವರ್ಷೇ ವರ್ಷೇ ಪ್ರತಿಯೊಬ್ಬರಿಗೂ ಟ್ಯಾಕ್ಸ್ ಜಾಸ್ತಿಮಾಡಬೇಕು ಎಂದು ಏನೂ ಇಲ್ಲ. ಇದರ ಬಗ್ಗೆ ಯಾರಿಗೂ ಅನುಮಾನ ಬೇಡ.

ಶ್ರೀ ಕಾಗೋಡು ತಿಮ್ಮಪ್ಪ.—ನಾನು ಅದನ್ನು ತೋರಿಸುತ್ತೇನೆ. ರೆಡ್ಯೂಸ್ಡ್ ಅಸೆಸ್‌ಮೆಂಟ್ ಮಾಡಿ ಮೇಲಾಧಿಕಾರಿಗಳು ಕಡಿಮೆ ಅಸೆಸ್ ಮಾಡಿದ್ದಕ್ಕೆ ಎಕ್ಸ್‌ಪ್ಲನೇಷನ್ ಕಾಲ್‌ಫಾರ್ ಮಾಡಿರುತ್ತಾರೆ.

SRI M. Y. GHORPADE.—That is not the rule. As you know, there cannot be such instructions that every year everybody's' assessment must go up ನ್ಯಾಯವಾಗಿ ನೋಡಿದರೆ, ಇವತ್ತು ಎಕಾನಮಿ ಜಾಸ್ತಿ ಬರುತ್ತಿದೆ. ಪ್ರೈಸೆಸ್ ಜಾಸ್ತಿ ಆಗುತ್ತಿದೆ ತಕ್ಷಣ ಟ್ಯಾಕ್ಸ್ ಜಾಸ್ತಿ ಮಾಡಬೇಕೆಂದು ಯಾರು ಯಾರಿಗೂ ಹೇಳಿರುವುದಿಲ್ಲ.

ಶ್ರೀ ಎಂ. ಎಸ್. ಕೃಷ್ಣನ್.—ಬಿಸಿನೆಸ್ ಕಡಿಮೆಯಾದವರಿಗೂ ಟ್ಯಾಕ್ಸ್ ಹಾಕಿದ್ದೀರಿ. ವಸೂಲು ಮಾಡುವುದಕ್ಕೆ ಹೋಗಿ ಶಹಬಾಷ್‌ಗಿರಿ ಪಡೆದುಕೊಳ್ಳುವುದಕ್ಕಾಗಿ ಆ ರೀತಿ ಮಾಡಬಾರದು.

SRI. M.Y. GHORPADE:—If there are any isolated cases, where the tax has been levied inspite of the business going down, certainly it will be looked into by the higher authorities if the party appeals to the authority.

ಶ್ರೀ ಕಾಗೋಡು ತಿಮ್ಮಪ್ಪ.—ಕೆಲವು ಅಧಿಕಾರಿಗಳು ತಮ್ಮ ಭಯವನ್ನು ವ್ಯಕ್ತಪಡಿಸುತ್ತಾರೆ. ಏಕೆಂದರೆ, ಇದುದ್ದನ್ನು ಇದ್ದಹಾಗೆ ಮಾಡಿದರೆ ಎಕ್ಸ್‌ಪ್ಲನೇಷನ್ ಕೇಳುತ್ತಾರೆ. ೫೦೦ ರೂಪಾಯಿಗಳನ್ನು ಜಾಸ್ತಿ ಮಾಡಿ ಕಳುಹಿಸಿದರೆ ನೀವು ರೂಲ್ಸ್ ಫಾಲೋ ಮಾಡಿಲ್ಲ. ಅವ್ಯವಹಾರ ಮಾಡಿದ್ದೀರಾ ಎಂದು ಹೇಳುತ್ತಾರೆ.

SRI M. Y. GHORPADE.—It is not a very important point. I only wanted to give a clarification on minor points. ವರ್ಗಾವಣೆ ಬಗ್ಗೆ ಪ್ರಜಾಪ್ರಭುತ್ವದಲ್ಲಿ ಜನರ ಪ್ರತಿನಿಧಿಗಳು ಬಹಳ ಕಷ್ಟದಲ್ಲಿದ್ದಾರೆ, ಹಾಗೆ ಹೀಗೆ ಎಂದು ಬಂದು ಹೇಳುತ್ತಾರೆ ಸಂಬಂಧಪಟ್ಟ ಅಧಿಕಾರಿಗಳು ನಮಗೆ ನೇರವಾಗಿ ಬಂದು ಹೇಳುವುದಕ್ಕೆ ಅವಕಾಶ ಇರುವುದಿಲ್ಲ ಬಹಳ ಡಿಸರ್ವಿಂಗ್ ಕೇಸಸ್ ಇದ್ದರೆ. ಸಿಂಪಥಟಿಕ್ ಕನ್ಸಿಡರೇಷನ್ ಮಾಡುವಂತಹ ಕೇಸಸ್ ಆಗಿದ್ದರೆ ಅಂಥ ಕೇಸುಗಳನ್ನು ಪರಿಶೀಲನೆ ಮಾಡುವಂತಾದ್ದು ನನ್ನ ಇಲಾಖೆಯಲ್ಲಿ ಇರತಕ್ಕ ಧೋರಣೆ. ಪ್ರತ್ಯೇಕವಾಗಿ ಶಾಸಕರು ಹೇಳತಕ್ಕ ಕೇಸುಗಳ ಮೇಲೆ ವರ್ಗಾವಣೆ ಮಾಡಲಿಕ್ಕೆ ಹೋಗುವುದಿಲ್ಲ.

ಶ್ರೀ ಎಚ್. ಡಿ. ದೇವೇಗೌಡ.—ನಿಮ್ಮ ಇಲಾಖೆ ಬಗ್ಗೆ ಯಾವುದೇ ರೀತಿಯ ದೂರುಗಳು ಇಲ್ಲ.

ಶ್ರೀ ಎಂ. ವೈ. ಘೋರ್ಪಡೆ.—ತುಂಬಾ ವಂದನೆಗಳು. ಬಹಳಷ್ಟು ಒತ್ತಡಗಳು ನಮ್ಮ ಮೇಲೆ ಬರುತ್ತವೆ, ಆದರೂ ನಾವು ಬಹಳ ಎಚ್ಚರಿಕೆಯಿಂದ ಮಾಡಬೇಕಾಗುತ್ತದೆ.

SRI H. D. DEVE GOWDA.—Especially only one Department that is State Accounts Department ತನ್ನ ಕೆಲಸವನ್ನು ಸರಿಯಾಗಿ ಮಾಡುತ್ತಿಲ್ಲ.

ಶ್ರೀ ಎಂ. ವೈ. ಘೋರ್ಪಡೆ.—ಕೆಲವು ಮಿತಿಗಳು ಇವೆ ಆ ಮಿತಿಗಳನ್ನು ದಾಟಿದರೆ ಕೆಲವು ಅಧಿಕಾರಿಗಳು ಶಾಸಕರನ್ನು ಉಪಯೋಗಿಸಿಕೊಂಡು ಬಂದರೆ ಅವರ ಮೇಲೆ ಕಣ್ಣಿಡುವಂತೆ ಹೇಳಿದರು. ನಾನು ಆ ಮಾತನ್ನು ಒಪ್ಪಿಕೊಳ್ಳುತ್ತೇನೆ. ಆದರೆ, ಪ್ರಜಾಪ್ರಭುತ್ವದಲ್ಲಿ ಇದು ನಡೆಯುತ್ತಲೇ ಇರುತ್ತೆ. ಮಾಡಲೂ ಬೇಕಾಗುತ್ತದೆ. ತೂಕ ತಪ್ಪಿದರೆ ತಪ್ಪಾಗುತ್ತದೆ. ತೂಕ ತಪ್ಪದೆ ಹೋದರೆ ನಡೆಸಿಕೊಂಡು ಹೋಗುವುದಕ್ಕೆ ಅನುಕೂಲವಾಗುತ್ತದೆ.

ಶ್ರೀ ಎಚ್. ಡಿ. ದೇವೇಗೌಡ.—ನಾನು ಸಾಮಾನ್ಯ ಆಡಳಿತ ವಿಚಾರ ಬಂದಾಗ ಮಾತನಾಡುತ್ತೇನೆ. ಹಣಕಾಸಿನ ವಿಚಾರದಲ್ಲಿ ಸ್ವಲ್ಪ ಬಿಗಿ ಇಡಬೇಕಾಗುತ್ತದೆ. ಏಕೆಂದರೆ ಅವರ ಕೈಮೀರಿ ಹೋಗುವಂತಹ ಸಂದರ್ಭಗಳು ಬರುತ್ತವೆ. ಮೂರು ತಿಂಗಳು, ನಾಲ್ಕು ತಿಂಗಳು ಒಂದೊಂದು ಸಾರಿ ರಾಜಕೀಯ ಒತ್ತಡದಿಂದ ಅಧಿಕಾರಿಗಳನ್ನು ವರ್ಗಾವಣೆ ಮಾಡುವುದನ್ನು ಬಿಡಬೇಕು ಸರ್ಕಾರವೇ ಸಾರ್ವಜನಿಕ ಹಿತ ದೃಷ್ಟಿಯಿಂದ ವರ್ಗಮಾಡುವಾಗ ಸ್ಥಳೀಯ ಶಾಸಕರುಗಳು ಬೇಡ ಎಂದು ಹೇಳುವವರೂ ಇದ್ದಾರೆ. ಒಂದು ವಾಸ್ತವಿಕ ಉದಾಹಾರಣೆ ಬೇಕಾದರೆ ಕೊಡುತ್ತೇನೆ, ಒಬ್ಬ ಅಧಿಕಾರಿಗೆ, ನೌಕರನಿಗೆ ವರ್ಗಮಾಡಿದರೆ ಟಿ.ಎ. ಡಿ.ಎ. ಕೊಡಬೇಕಾಗುತ್ತದೆ. ಇದನ್ನು ಹಣಕಾಸಿನ ಇಲಾಖೆ ತುಂಬಬೇಕಾಗುತ್ತದೆ. ಆದುದರಿಂದ ನೀವು ಯಾವುದೇ ರೀತಿಯಲ್ಲಿ ಯಾವುದೇ ಸಂದರ್ಭದಲ್ಲಿಯೂ ಇದಕ್ಕೆ ಮಣಿಯಬಾರದು ಎಂದು ಹೇಳುತ್ತೇನೆ.

SRI M.Y. GHORPADE.—The general understanding is that normally people (officials) should not be transferred who have put in servies of less than 3 years ; two years becomes premature. These conventions are there. They should not be in a place for more than 4 or 5 years also. This is the general rule. Within this rule the Administration Department have the discretion to decide on transfers It is very difficult for the Finance Department to pull up any other Department regarding individual transfer. We can only lay broad guidelines.

SRI H.D. DEVEGOWDA.—Let there be a policy decision. If there is any lapse on the part of the officer concerned, let he be penalised.

SRI M.Y. GHORPADE.—The general guideline has been laid down: If it is less than 2 years, it becomes premature transfer and it requires the permission of the Chief Minister. That is what we have done. Inspite of that if you feel that too many premature transfers are taking place, then it is a matter to be taken up with the Chief Minister, because the general policy is quite clear.

ಅಧ್ಯಕ್ಷರೆ ಈಗ ಪ್ರೊಫೆಷನಲ್ ಟ್ಯಾಕ್ಸ್ ಬಗ್ಗೆ ಎಲ್ಲ ಸದಸ್ಯರು ಮಾತನಾಡಿದ್ದಾರೆ. ಇದರಲ್ಲಿ ಡೈರೆಕ್ಟರ್ಸ್ ಬಗ್ಗೆ ಒಂದು ಪ್ರಶ್ನೆ ಇದೆ, ಇವೊತ್ತು ಸಿಟಿಂಗ್ ಫೀಸ್ ತೆಗೆದುಕೊಳ್ಳದೇ ಇರತಕ್ಕ ಡೈರೆಕ್ಟರ್ಸ್ ಇರಬಹುದು. ಆದ್ದರಿಂದ ಇದರ ಬಗ್ಗೆ ಕಲವು ಸಲಹೆ ಇದೆ, ಷೇರು ಕ್ಯಾಪಿಟಲ್ ಟರ್ನ್ ಓವರ್ ಬೇಸಿಸ್ ಮೇಲೆ ವ್ಯತ್ಯಾಸ ಮಾಡಲಿಕ್ಕೆ ಸರಿ ಇದ್ದರೆ ಅದನ್ನು ಸರಿಪಡಿಸುತ್ತೇವೆ. ಹಾರ್ಡ್ ಕೇಸಸ್ ಬಗ್ಗೆ ಅಡ್ಮಿನಿಸ್ಟ್ರೇಷನ್ ಡಿಸ್ಕ್ರಿಷನ್ ಉಪಯೋಗಿಸಿ ವಿನಾಯ್ತಿ ಕೊಡುವಂತಾದ್ದು ಇದ್ದರೆ ವಿನಾಯ್ತಿ ಕೊಡಬೇಕಾಗುತ್ತದೆ.

I only wanted to say that under the profession tax there are two categories. One is salaried class. In this case there is no difficulty because profession tax is deducted at source As a matter of fact, it is one of the virtues of the profession tax.

So far as the professions are cencerned, this is a new tax. Whenever hardhsip is brought to our notice, we are prepared to view it sympathetically As a matter of fact, lawyers brought to my notice that there are many of them with boards. I asked them why they put the boards. It is a status symbol. They pointed out that there are many lawyers with board but with no income. They also pointed out that it takes years before they start earning. Originally exemption was given to them for two years. After discussion it was increased to 5 years and again we have made it 7 years. Even to Ayurvedic, Unani and Nature Cure doctors we have given considerable concessions. Even among doctors there are doctors and doctors. Some distinction should be made among them. So, I would very much like to find a method of distinguishing between those doctors who can pay Rs. 250 and those who cannot pay so much. Similarly, in all other professions. Take for instanee insurance agents. Some representations have been received from them. I would very much

like the professions concerned to come forward. They are in a position to tell us what their difficulties are and Government will certainly take a most sympathetic view This difficulty may arise in the case of other categories also. These things can be solved not by abolishing this tax but by removing the difficulties felt by the different professions.

Regarding industrial workers, this is a very important matter and as hon'ble Members know, even when I introduced the profession tax, I had said that we keep an open mind and that we will make marginal adjustments wherever required. We have had some experience as to how this tax has functioned. Therefore, I am in a position to make certain modifications in our scheme. Even with regard to the salaried classes let me state what the position is so that the intention of the Government may be better understood. Today there are a total number of 9.45 lakhs of employees of all categories comprising State Government Central Government, local body employees. etc. Out of this, 6.48 lakhs have salaries less than Rs. 500. So they do not come into the tax net. Therefore, deducting 6.48 lakhs from 9.45 lakhs, we are left with 2.97 lakhs who are to pay profession tax. Out of these 2.97 lakhs, as many as 1.24 lakhs are in the salary slab of Rs 500 to Rs. 600. In other words, they pay Rs. 3 per month. In the Rs. 600 to 800 salary slab there are 76 816 persons and they pay Rs. 6 per month. In the Rs. 800 to 1000 slab there are 52,929 and they pay Rs. 9 per month. In the Rs. 1000 to 1200 slab there are 22,415 people and they pay Rs. 12 per month. In the Rs. 1200 to 1500 slab there are 11,542 people and they pay Rs. 15 per month. Above Rs. 1500 slab there are 9, 307 persons and they pay Rs. 20 per month. This is our present scheme.

Therefore, percentagewise out of 9.45 lakhs persons 68% pay no tax; 13% come in the category of Rs. 500-600; 8% come in category of Rs. 600-800; 5 6'% come in the category of Rs. 800-1000; 2.4% come in the category of Rs 1000-1200; 1.2% come in the category of Rs. 1200-1500; and 1% above Rs. 1500. As things stand, the professional tax demanded from them comes to Rs. 2.32 crores. The State Government employees are included in this figure of 9.45 lakh persons and our own employees number 3,29,000. Out of this number 2,29,000 are below Rs. 500. They pay no tax. 53,000 are in the salary slab Rs. 500-600; 20,400 are in Rs. 600-800; 18,000 are in Rs. 800-1000 slab; 4,225 persons are in the slab of Rs. 1000-1200; 2,997 are in the slab of Rs. 1200-1500; and 1,132 persons are above Rs. 1,500. The tax collected from them is Rs. 67 lakhs. In other words, from the salaried classes we get 2.32 crores of which

our State Government employees pay Rs. 67 lakhs. Out of 3,29 lakh employees 2,29 lakh employees do not come under the tax net and only one lakh pay tax. This will I am sure give rough proportion of what is happening.

3-00 P.M.

SRI M.S. KRISHNAN.—By virtue of the implementation of the Pay Commission's recommendations, would not some more people go up ?

SRI M. Y. GHORPADE.—I am coming to that. As a result of the salary increase the number below Rs. 500 has gone down and the number above Rs. 500 has gone up.

The number of employees drawing less than Rs 500 before revision was 2.76 lakhs and now there are 2.29 lakhs;

Rs.	Rs,	Before revision	After revision
500 to	600	26,854	53,183
600 to	800	10,825	20,436
800 to	1000	10,382	18,0 9
1000 to	1200	827	4,225
1200 to	1500	779	2,997
Above 1500		635	1,132

The question raised was that the tax has gone up as a result of the people getting more salary. I am afraid it has gone up and what we expected to be Rs. 4 crores is now likely to be Rs 4½ crores which is good and it will go up in the years to come as salary scales go up ?

SRI M. S. KRISHNAN.—If there is price stability and salaries go up you are well within your rights to tax more. But the price stability is not there.

SRI M. Y. GHORPADE.—Let us not go to the fundamentals while discussing small matters like Professional Tax.

Our policy is to try as far as possible to lighten the burden for the relatively weaker sections. We should get a little more from those who can afford and take less from those who cannot. I do not propose to increase in rates and there is no intention to get any more from those who can afford to pay. Our tax slabs are reasonable and the burden we have put on the salaried classes who are in the higher brackets is extremely reasonable and therefore I need not be apologetic about it. They are given an opportunity to directly participate in a social welfare programme of Housing. It is not as though this sum of Rs, 4 crores gets mixed up in the total revenues of the State. That is the reason why we put the Professional Tax

and the Housing Programme is extremely well in Karnataka and all those who pay this tax can derive satisfaction. I was thinking in what manner relief should be given As a matter of fact I raised exemption limit to Rs 500 from Rs. 400 or over or even less at the time when the Bill was introduced Even then it was stated whether the Government could consider exemption up to Rs. 600.

I think Government is now in a position to consider such an idea and I am happy t announce that the Government has decided that for the first slab of Rs. 500 to Rs. 600 there will be no Professional tax from next month, *i.e.*, from July 1977. The implication is that the loss of income to Government would be of the order of Rs. 45 lakhs. Since the income from professional tax has gone up by about the same order, there will be no net fall in the anticipated income of Rs. 4 crores from the professional tax. By giving up professional tax on the slab of Rs. 500 to Rs. 600, out of about 2,24,000, as many as 1,24,000 will be out of this tax net. I hope all concerned will appreciate this gesture on the part of the Government, and more than that the thinking, the philosophy behind it is, while we all talk of socialism we also should take certain hard decisions in socialism to take the economy in the right direction We must retain always human consideration combined with clarity We should ask the organised sector to contribute a little for the benefit of the unorganised sector whose voice does not even reach Bangalore. The organised sector and the Trade Union movement must be more mindful of the unorganised sector if this country is to be taken on a socialist path which is accepted, not by a certain section of society but by all sections of society. With that spirit in view and on human considerations, I am announcing this relief for the lower sections. I feel that there should be no further discussion on professional tax because we have already formally announced a concession and under no circumstances will Government be pressurised to change its policy.

There are 1,20,000 self-employed people and they pay nearly Rs, 2 crores today.

ಶ್ರೀ ಕಾಗೋಡು ತಿಮ್ಮಪ್ಪ.—ಮಾನ್ಯ ಅಧ್ಯಕ್ಷಣಿಯವರೆ ನಾವು ಈಗಾಗಲೇ ಮಾನ್ಯ ಸಚಿವರನ್ನು ಕೇಳಿದ್ದೇವೆ, ತಹಸೀಲ್‌ದಾರರನ್ನು ಮತ್ತು ಎ.ಸಿ.ಟಿ.ಓ. ಇವರನ್ನು ಈಕ್ವೇಟ್ ಮಾಡತಕ್ಕಂಥಾದ್ದು ಎರಡನೆಯದಾಗಿ ಅಕೌಂಟ್ಸ್ ಡಿಪಾರ್ಟ್‌ಮೆಂಟ್‌ನಲ್ಲಿ ಇರತಕ್ಕಂಥ ನೌಕರರನ್ನು ಬೇರೆ ಬೇರೆ ಇಲಾಖೆಗೆ ಅಂದರೆ ಪಿ ಡಬ್ಲ್ಯೂ. ಡಿ. ಇಲಾಖೆಯಲ್ಲಿ ಕೆಲಸ ಮಾಡುತ್ತಿದ್ದರೆ ಅವರನ್ನು ನಿಯಂತ್ರಿಸಲು, ಮತ್ತು ವರ್ಗಾವಣೆಯನ್ನು ಮಾಡಲು ಕಂಟ್ರೋಲರ್ ಆಫ್ ಅಕೌಂಟ್ಸ್ ಅವರ ಮೇಲ್‌ವಿಚಾರಣೆಗೆ, ಅವರ ಜವಾಬ್ದಾರಿಗೆ ಕೊಡಬೇಕೆಂದು ಹೇಳುತ್ತೇನೆ.

SRI M. Y. GHORPADE.—Madam Speaker, I deliberately did not reply to this point. So far as the pay scales are concerned, this matter is being actively considered by the Official Pay Committee, which is still there to look into it. we will not delay matters. We

will give the officials an opportunity to represent to the Official Committee, and Government will take a fair view. The Cabinet has to decide each case. I think we should have a gentleman's agreement not to go into pay scales and salary matters especially when these matters are dealt with in a fair manner.

MADAM SPEAKER.—The question is.—

" That the respective sums not exceeding the amounts mentioned in the list of Demands be granted to Government to defray the charges which will come in course of payment during the financial year ending 31st day of March 1978 in repect of Demands Nos. 4, 9, 12 19, 31 and 59."

the motion was adopted and the sums were granted.

The motion of Demands for grants, adopted by the House are Ereproduced below:

DEMAND NO. 4—TAXES ON INCOME, PROFESSIONS SALES AND OTHER SERVICES

" That a sum not exceeding Rs. 3,42,70,000 inclusive of the sum granted 'on account' be granted to the Government to defray the charges which will come in course of payment during the financial year ending 31st day of March 1978 in respect of " Taxes on Income, Professions, Sales and other Services"

DEMAND NO. 9—MISCELLANEOUS GENERAL SERVICES

"That a sum not exceeding Rs. 2,47,07,0.0 inclusive of the sum granted 'on account' be granted to the Government to defray the charges which will come in course of payment during the financial year ending 31st day of March 1978 in respect of "Miscellaneous General Services".

DEMAND NO. 12—TREASURY AND ACCOUNTS ADMINISTRATION

"That a sum not exceeding Rs. 2,09 90.C00 inclusive of the sum granted 'on account' be granted to the Government to defray the charges which will come in course of payment during the financial year ending 31st day of March 1978 in respect of "Treasury and Accounts Administration".

DEMAND NO. 19—PENSIONS AND OTHER RETIREMENT BENEFITS

"That a sum not exceeding Rs. 22,60,00,000 inclusive of the sum granted 'on account' be granted to the Government to defray the charges which will come in course of payment during the financial year ending 31st day of March 1978 in respect of "Pensions and other Retirement Benefits".

Madam/Sir, on the recommendation of the Governor, I beg to move :

"That a sum not exceeding Rs. 7,65,55,000 inclusive of the sum granted 'on account' be granted to the Government to the charges which will come in course of payment during the financial year ending 31st day of March, 1978 in respect of "Insurance and Pensions under Social Security Schemes".

Madam/Sir, on the recommendation of the Governor, I beg to move:

"That a sum not exceeding Rs. 13,71,00,000 inclusive of the sum granted 'on account' be granted to the Government to defray defray the charges which will come in course of payment during the financial year ending 31st day of March, 1978 in respect of "Loans to Government Servants and Miscellaneous Loans".

Demand Nos. 21, 26, 27 & 32.

SRI R. GUNDU RAO (Minister for Housing and Youth Services).—Madam Speaker, on the recommendation of the Governor, I beg to move:

"That a sum not exceeding Rs. 3,77,48,000 inclusive of the sum granted 'on account' be granted to the Government to defray the charges which will come in course of payment during the financial year ending 31st day of March 1978 in respect of Demand No. 21 'Youth Services, Art and Culture."

"That a sum not exceeding Rs 10,35,00,000 inclusive of the sum granted 'on account' be granted to the Government to defray the charges which will come in course of payment during the financial year ending 31st day of March 1978 in respect of Demand No. 26 "Housing (excluding Government Residential Buildings)",

MADAM SPEAKER.—Motion moved :

"That a sum not exceeding Rs. 3,77,48,000 inclusive of the sum granted 'on account' be granted to the Government to defray the charges which will come in course of payment

during the financial year ending 31st day of March 1978 in respect of Demand No. 21 "Youth Services, Art and Culture."

The other Demand No. 26 is also deemed to have been moved.

SRI D. K. NAIKAR (Minister for Municipal Administration and Political Pensions).—Madam, on the recommendation of the Governor, I beg to move ;

"That a sum not exceeding Rs. 6,18,90,000 inclusive of the sum granted 'on account' be granted to the Government to defray the charges which will come in course of payment during the financial year ending 31st day of March 1978 in respect of Demand No. 27 "Urban Development, etc.,"

"That a sum not exceeding Rs. 65,00,000 inclusive of the sum granted 'on account' be granted to the Government to defray the charges which will come in course of payment during the financial year ending 31st day of March 1978 in respect of Demand No. 32, 'Political Pensions".

MADAM SPEAKER. —Motion moved:

"That a sum not exceeding Rs.6,18,90,000 inclusive of the sum granted 'on account' be granted to the Government to defray the charges which will come in course of payment during the financial year ending 31st day of March 1978 in respect of Demand No. 27 Urban Development etc.,"

The other Demand No. 32 is also deemed to have been moved. All the four Demands are before the House for Discussion.

† ಶ್ರೀ ಕೆ. ಪುಟ್ಟಸ್ವಾಮಿ (ಚಾಮುಂಡೇಶ್ವರಿ) —ಮಾನ್ಯ ಅಧ್ಯಕ್ಷರೇ. ಈ ಸಭೆಯ ಮುಂದಿರತಕ್ಕಂಥ ಬೇಡಿಕೆಗಳ ಪೈಕಿ ನಗರಾಭಿವೃದ್ಧಿಗೆ ಸಂಬಂಧಪಟ್ಟ ವಿಚಾರವಾಗಿ ನಾನು ಮಾತನಾಡುವುದಕ್ಕೆ ಅಪೇಕ್ಷೆಪಡುತ್ತೇನೆ. ನಾನು ನನ್ನ ಭಾಷಣವನ್ನು ಪ್ರಾರಂಭ ಮಾಡುವುದಕ್ಕೆ ಮುಂಚಿತವಾಗಿ ಈ ಖಾತೆಯ ಜವಾಬ್ದಾರಿಯನ್ನು ವಹಿಸಿಕೊಂಡಿರತಕ್ಕಂಥ ಮಾನ್ಯ ನಾಯ್ಕರ್ ರವರನ್ನು ಅಭಿನಂದಿಸಬೇಕಾಗಿದೆ. ಇವತ್ತು ಅವರೇ ನಿರ್ಮಾಣ ಮಾಡಿದಂತಹ ನಗರ ನೀರು ಸರಬರಾಜು ಮತ್ತು ಒಳಚರಂಡಿ ಯೋಜನಾ ಮಂಡಳಿಯವರು ಅವರಿಗೆ "ದೊಡ್ಡ ಸುಧಾರಕರು" (ಗ್ರೇಟ್ ರಿಫಾರ್ಮರ್) ಎಂಬ ದೊಡ್ಡ ಬಿರುದನ್ನು ಕೊಟ್ಟಿದ್ದಾರೆ. ಇದು ಇವತ್ತಿನ ಪತ್ರಿಕೆಯಲ್ಲೂ ಬಂದಿದೆ. ನಾನು ಆಲೋಚನೆ ಮಾಡಿದೆ ಅವರು ಯಾವುದರಲ್ಲಿ ಸುಧಾರಕರು ಇರಬಹುದು ಎಂದು. ಈ ಬಗ್ಗೆ ಬಹಳ ಆಲೋಚನೆ ಮಾಡಿದರೂ ಕೂಡ ಅವರು ಯಾವುದರಲ್ಲಿ ಸುಧಾರಕರು ಆಗಿದ್ದಾರೆ ಎಂಬುದು ಸಂಪೂರ್ಣವಾಗಿ ನನಗೆ ಹೊಳೆಯಲಿಲ್ಲ. ಅವರು ಒಂದರಲ್ಲಿ ಮಾತ್ರ ಸುಧಾರಣೆ ಮಾಡಿದ್ದಾರೆ

ಶ್ರೀ ಡಿ. ಕೆ. ನಾಯಕರ್. ನೀವು ಬಿರುದು ಕೊಟ್ಟವರನ್ನು ಕೇಳಿರಿ.

ಶ್ರೀ ಕೆ. ಪುಟ್ಟಸ್ವಾಮಿ.—ಬಿರುದು ತೆಗೆದುಕೊಂಡಂತಹವರನ್ನು ಕೇಳಬೇಕು. ಇತ್ತೀಚೆಗೆ ಈ ಅಧಿವೇಶನದಲ್ಲಿ ಮಾನ್ಯ ನಾಯಕರ ರವರಲ್ಲಿ ಕಂಡುಬಂದಿರತಕ್ಕಂಥ ದೊಡ್ಡ ಸುಧಾರಣೆ ಏನೆಂದರೆ ಅವರು ಬಣ್ಣ ಬಣ್ಣದ ಫುಲ್‌ಓವರ್ ಕೋಟ್ ಅನ್ನು ಹಾಕಿಕೊಂಡು ಇಲ್ಲಿಗೆ ಬರುತ್ತಾರೆ. ಆದ್ದರಿಂದ ಅವರು ಉಡುಪಿನ ವಿಚಾರದಲ್ಲಿ ದೊಡ್ಡ ಸುಧಾರಕರು ಆಗಿದ್ದಾರೆಂದು ನನಗೆ ಖಚಿತವಾಗಿದೆ. ಈ ಇಲಾಖೆಯ

ವನ್ನೂ ನೋಡಿದ್ದೇನೆ. ನಾನು ಯಾವತ್ತೂ ಕೂಡ ಇವುಗಳನ್ನು ಸೂಪರ್‌ಸೀಡ್ ಮಾಡುವುದಕ್ಕೆ ಒಪ್ಪುತ್ತಾ ಇರಲಿಲ್ಲ. ಯಾತಕ್ಕೆಂದರೆ ಆ ಮಟ್ಟದ ಆಡಳಿತವನ್ನು ಅಧಿಕಾರಿಗಳ ಮೂಲಕ ಕೊಡುವ ಶಕ್ತಿ ಇರಲಿಲ್ಲ. ಗೊತ್ತಿದ್ದೂ ಗೊತ್ತಿದ್ದು ಯಾತಕ್ಕೆ ಅಂಥ ಕೆಲಸ ಮಾಡಬೇಕು ಇತ್ತೀಚೆಗೆ ಮೈಸೂರಿನಲ್ಲಿ ಏಕೆ ಚುನಾವಣೆ ಮಾಡಲಿಲ್ಲ ಎಂದು ಕೇಳಿದರೆ ಅಲ್ಲಿ ಕಾರ್ಪೊರೇಷನ್ ಮಾಡಬೇಕಾಗಿತ್ತು. ಆ ಕಾರಣದಿಂದ ಒಂದು ಕಾನೂನನ್ನು ಮಾಡಬೇಕು, ಸಮಗ್ರವಾದ ಕಾನೂನು ಮಾಡುವುದಕ್ಕೆ ಪ್ರಯತ್ನ ಮಾಡುತ್ತಿದ್ದೇವೆ, ಸಮಗ್ರವಾದ ಕಾನೂನು ಆದಮೇಲೆ ಕಾರ್ಪೊರೇಷನ್ನಿನ ಒಂದು ಅಂತಸ್ತನ್ನು ನಿಮ್ಮ ಪುರಸಭೆಗೆ ಕೊಟ್ಟು ಚುನಾವಣೆ ಮಾಡುತ್ತೇವೆ ಎಂದು ಹೇಳುತ್ತಿದ್ದಿರಿ. ತಮ್ಮ ಅಭಿಪ್ರಾಯದಲ್ಲಿ ಕಾರ್ಪೊರೇಷನ್ನಿನ ಅಂತಸ್ತು ಎಂದರೆ ಏನೋ ಒಂದು ರೀತಿಯ ಸ್ವರ್ಗ ಎಂದು ತಿಳಿದುಕೊಂಡಿರುವಹಾಗೆ ಕಾಣುತ್ತದೆ. ನೀವು ಮಾಡಿರತಕ್ಕ ಕಾನೂನನ್ನು ಪರಿಶೀಲನೆ ಮಾಡಿದರೆ ಕಾರ್ಪೊರೇಷನ್ ಒಂದು ವರ ಕೊಟ್ಟಂತಾಗುವುದಿಲ್ಲ; ಶಾಪ ಕೊಟ್ಟಂತಾಗಿದೆ. ಹೇಗೆ ಎಂಬುದನ್ನು ನಾನು ತೋರಿಸುತ್ತೇನೆ, ನಮ್ಮ ಮಾನ್ಯ ಸಚಿವರಾದ ನಾಯ್ಕರ್ ಅವರಲ್ಲಿ ಒಂದು ಅಭಿಮಾನ ಏನು ಎಂದರೆ ತಾನು ಮಾಡುವುದೆಲ್ಲಾ ಸರಿ, ಬೇರೆಯವರು ನನ್ನ ಮುಂದೆ ಏನೂ ಇಲ್ಲ, ಅವರ ಅನುಭವಗಳು ನನಗೆ ಬೇಕಾಗಿಲ್ಲ ಎನ್ನತಕ್ಕ ಒಂದು ಸ್ವಾಭಿಮಾನ. ಯಾತಕ್ಕೆಂದರೆ ಅವರಿಗೆ ಅನುಭವ ಇಲ್ಲದೇ ಇರುವುದರಿಂದ ಬೇರೆಯವರ ಅನುಭವಗಳಿಗೂ ಸೊನ್ನೆ ಸುತ್ತುತ್ತಾರೆ. ಇವರೆಲ್ಲಾ ಪುರಸಭಾ ಸದಸ್ಯರಾಗಿದ್ದವರು, ಪುರಸಭಾ ಅಧ್ಯಕ್ಷರಾಗಿದ್ದವರು ಏನೇನೋ ಆಗಿ ಬಂದಿರುವವರು, ಇವರ ಮಾತು ಏನು ಲೆಕ್ಕ ಎಂದು ನಿಕೃಷ್ಟವಾಗಿ ಮೂಲೆಗೆ ಒತ್ತುತ್ತಿದ್ದಾರೆ ಬೇರೆಯವರಲ್ಲಿ ಕೇಳಿ ಗೊತ್ತಿಲ್ಲದ್ದನ್ನು ತಿಳಿದುಕೊಳ್ಳಬೇಕು ಎಂಬ ವಿನಯಶೀಲತೆಯನ್ನು ನಾನು ಅವರಲ್ಲಿ ಕಾಣಲಿಲ್ಲ.

ಕೆಲವಂ ಬಲ್ಲವರಿಂ ಕಲ್ತು
ಕೆಲವಂ ಮಾಳ್ಪವರಿಂ ಕಂಡು
ಕೆಲವಂ ಶಾಸ್ತ್ರಗಳಿಂ ಕೇಳುತಂ
ಕೆಲವಂ ಸುಜ್ಞಾನದಿಂ ನೋಡುತಂ

ಸರ್ವಜ್ಞನಪ್ಪಂ ನರಂ........॥ಇವೆಲ್ಲಾ ಪ್ರೈಮರಿ ಸ್ಕೂಲ್‌ಗೇ ಕೊನೆಯಾಗಿ ಹೋಯ್ತು. ಇದನೆಲ್ಲಾ ನಾವು ಓದಿದ್ದೇವೆ. ಮಾನ್ಯ ನಾಯ್ಕರ್ ಅವರು ಓದಿದ್ದಾರೋ ಇಲ್ಲವೋ ಗೊತ್ತಿಲ್ಲ, ನಮಗಂತೂ ಇತ್ತು. ನಮ್ಮ ನಾಯ್ಕರ್ ಅವರು ಬೇರೆಯವರು ಏನು ಹೇಳಿದರೂ ಕೂಡ ತಮಗೆ ತಿಳಿದಿದ್ದನ್ನು ಮಾಡುತ್ತಾರೆಯೇ ವಿನಹ ಬೇರೆಯವರ ಮಾತು ಬೇಕಾಗಿಲ್ಲ. He is a self made man. ಒಬ್ಬರ ಸಲಹೆ ಬೇಕಾಗಿಲ್ಲ, ಒಬ್ಬರ ಅನುಭವದ ಮಾತು ಬೇಕಾಗಿಲ್ಲ. ಒಂದೂ ಬೇಕಾಗಿಲ್ಲ, ಯಾರ ಆಲೋಚನೆಯೂ ಬೇಕಾಗಿಲ್ಲ, ಧೀರ್ಘ ಮಂಥನ ಕೂಡ ಬೇಕಾಗಿಲ್ಲ, ಅವರಿಗೆ ತಮಗೆ ಏನು ತೋಚುತ್ತದೋ ಹಾಗೆ ಮಾಡುತ್ತಾರೆ, ಅವರು ಪ್ರಖ್ಯಾತರಾದ ವಕೀಲರಾಗಿರಬಹುದು. ಆದರೆ ವಕೀಲರಲ್ಲಿ ಇರಬೇಕಾದ ಗುಣವನ್ನ ನಾನು ಕಾಣಲಿಲ್ಲ. ವಕೀಲರಲ್ಲಿ ಇರಬೇಕಾದ ಮುಖ್ಯಗುಣ ಎಂದರೆ ಎಲ್ಲರನ್ನೂ ಕೇಳಿ ಗೊತ್ತಿಲ್ಲದ್ದನ್ನು ತಿಳಿದುಕೊಳ್ಳುವುದು, ಏನಾದರೂ ಒಂದು ವಿಷಯದಲ್ಲಿ ಸಾಕಷ್ಟು ಮನದಟ್ಟಾಗದಿದ್ದರೆ ಅದನ್ನು ಬೇರೆಯವರಿಂದಲಾದರೂ ಹೋಗಿ ಕೇಳಿ ತಿಳಿದುಕೊಳ್ಳುವುದು. ನಾನೂ ವಕೀಲ ಮಾಡಿದ್ದೇನೆ. ನಾನು ಅಂಥ ದೊಡ್ಡ ವಕೀಲ ಎಂದು ಹೇಳಿಕೊಳ್ಳುವುದಿಲ್ಲ. ನಾನು ಯಾವುದಾದರೂ ತಿಳಿಯದೇ ಇದ್ದರೆ ಹತ್ತಾರು ಜನರಹತ್ತಿರ ಹೋಗಿ ಕೇಳಿ ತಿಳಿದುಕೊಳ್ಳಬೇಕು ಎಂಬ ಮನೋಭಾವವನ್ನು ಹೊಂದಿದ್ದೇನೆ. ಈ ಮನೋಭಾವ ಜೀವನದಲ್ಲಿ ಮುಖ್ಯವಾಗಿ ಬರಬೇಕು. ನನ್ನ ತಿಳುವಳಿಕೆಯು ಎಲ್ಲಿ ಎಷ್ಟಿದೆ ಎಂಬುದನ್ನು ತಿಳಿದುಕೊಳ್ಳುವುದು ಮುಖ್ಯ. ಒಬ್ಬ ವಕೀಲನಾದವನು ಕೋರ್ಟಿನಲ್ಲಿ ನಾನಾ ತರಹದ ವಿಚಾರಣೆಗಳನ್ನು ನಡೆಸಬೇಕಾಗುತ್ತದೆ, ಹಲವಾರು ಸಾಕ್ಷಿಗಳನ್ನು ವಿಚಾರಣೆ ಮಾಡಬೇಕಾಗುತ್ತದೆ, ಒಬ್ಬ ಡಾಕ್ಟರನ್ನು ವಿಚಾರಣೆ ಮಾಡಬೇಕಾಗುತ್ತದೆ, ಹ್ಯಾಂಡ್‌ರೈಟಿಂಗ್ ಎಕ್ಸ್‌ಪರ್ಟ್‌ಗಳನ್ನು, ಫಿಂಗರ್‌ಪ್ರಿಂಟ್ ಎಕ್ಸ್‌ಪರ್ಟ್‌ಗಳನ್ನು ವಿಚಾರಣೆ ಮಾಡಬೇಕಾಗುತ್ತದೆ, ಹೀಗೆ ನಾನಾ ತರಹ ಜನರ ವಿಚಾರಣೆಗಳನ್ನು ಮಾಡಬೇಕಾಗುತ್ತದೆ. ಆದರೆ ನಮಗೆ ಎಲ್ಲ ವಿಷಯಗಳೂ ತಿಳಿದಿರುವುದಿಲ್ಲ. ಆಗ ನಾವು ಏನು ಮಾಡುತ್ತೇವೆಂದರೆ ಗೊತ್ತಿರುವವರ ಹತ್ತಿರ ಹೋಗಿ ಈ ಸಮಸ್ಯೆಗೆ ಹೇಗೆ ಪರಿಹಾರ ಕಂಡುಹಿಡಿಯಬೇಕು ಎಂಬುದನ್ನು ತಿಳಿದುಕೊಳ್ಳುತ್ತೇವೆ. ಮಾನ್ಯ ನಾಯ್ಕರ್ ಅವರಲ್ಲಿ ಈ ಒಂದು ಕೇಳಿ ತಿಳಿದುಕೊಳ್ಳುವ ಮನೋಭಾವನೆಯನ್ನು ಕಾಣಲಿಲ್ಲ. ಈಗಲಾದರೂ ದಯವಿಟ್ಟು ಆ ಒಂದು ಮನೋಭಾವನೆಯನ್ನು ಬೆಳೆಸಿಕೊಳ್ಳುವುದು ಅಗತ್ಯ ಎಂದು ಅವರಲ್ಲಿ ಮನವಿ ಮಾಡಿಕೊಳ್ಳುತ್ತೇನೆ. ಶ್ರೀಮಾನ್

ನಾಯ್ಕರ್ ಅವರೇ ನಿಮಗೆ ದೀರ್ಘವಾದಂಥ ಭವಿಷ್ಯ ಇದೆ, ನೀವು ಕೆಲವು ವರ್ಷಗಳ ಹಿಂದೆ ನೇರವಾಗಿ ಅಸೆಂಬ್ಲಿಗೆ ಚುನಾಯಿತರಾಗಿ ಬಂದಿದ್ದೀರಿ, ಇನ್ನೂ ಬಹಳ ಕಾಲ ತಾವು ಇರಬೇಕು, ನಿಮ್ಮಿಂದ ಈ ರಾಜ್ಯಕ್ಕೆ, ದೇಶಕ್ಕೆ, ಇನ್ನೂ ಸಾಕಷ್ಟು ಸೇವೆ ಸಲ್ಲಬೇಕು ಎಂದು ನಾನು ಅಪೇಕ್ಷೆಪಡುತ್ತೇನೆ ಈ ಮಾತನ್ನು ಅವರ ಮನಸ್ಸನ್ನು ನೋಯಿಸುವುದಕ್ಕಾಗಲೀ, ಅಥವಾ ಅಲ್ಲಗಳೆಯುವುದಕ್ಕಾಗಲೀ ಹೇಳುತ್ತಿದ್ದೇನೆ ಎಂದು ತಾವ್ಯಾರೂ ಭಾವನೆ ಮಾಡಬಾರದು. ಮೊದಲನೆಯದಾಗಿ ಪ್ರಜಾಸತ್ತೆಯಲ್ಲಿ ಸೌಜನ್ಯ ಬಹಳ ಮುಖ್ಯ. ಅದಿಲ್ಲದೇ ಇದ್ದರೆ ಶೋಭಿಸುವುದಿಲ್ಲ. ವಿದ್ಯಾ ವಿನಯ ಸಂಪನ್ನ ಎಂದು ಹೇಳುತ್ತೇವೆಯೇ ಹೊರತು ಬರೀ ವಿದ್ಯಾಸಂಪನ್ನ ಎಂದು ಹೇಳುವುದಿಲ್ಲ. ಆದರೆ ಅವರಲ್ಲಿ ವಿನಯವೇ ಇಲ್ಲ ಎಂದು ನಾನು ಹೇಳುತ್ತಿಲ್ಲ. ಆಡಳಿತವನ್ನು ನಡೆಸಬೇಕಾದರೆ ಏನು ಮನೋಭೂಮಿಕೆ ಬೇಕು ಆ ಮನೋ ಭೂಮಿಕೆ ತಮ್ಮಲ್ಲಿಲ್ಲ. ಅದನ್ನು ದಯವಿಟ್ಟು ಬೆಳೆಸಿಕೊಳ್ಳಿ ಎಂದು ಹೇಳುತ್ತೇನೆ.

ಶ್ರೀ ಡಿ. ಕೆ. ನಾಯ್ಕರ್.—ನಾನು ಎಲ್ಲಕ್ಕೂ ಉತ್ತರ ಕೊಡುತ್ತೇನೆ.

ಶ್ರೀ ಬಿ. ಪುಟಸ್ವಾಮಯ್ಯ.—ನಾನು ನಿಮ್ಮ ಉತ್ತರಗಳನ್ನು ಹಿಂದೆಯೆಲ್ಲಾ ಕೇಳಿದ್ದೇನೆ.

ಶ್ರೀ ಡಿ. ಕೆ. ನಾಯ್ಕರ್.—ಮಾನ್ಯ ಪುಟ್ಟಸ್ವಾಮಯ್ಯನವರು 5 ವರ್ಷದಿಂದ ಅವರು ಸದಸ್ಯರಾಗಿ ಮಾಡಿದ ಭಾಷಣಗಳನ್ನು ಕೇಳಿದ್ದೇನೆ. ನಾನು ಪೌರಾಡಳಿತ ಮಂತ್ರಿಯಾದಾಗಿನಿಂದ ಅವರ ಭಾಷಣಗಳನ್ನು ಕೇಳುತ್ತಿದ್ದೇನೆ. ಅವರು ಈ ಸದನದ ಸದಸ್ಯರಾಗಿ, ಹಿಂದಿನ ಮಂತ್ರಿಗಳಾಗಿ ತಮ್ಮ ಅನುಭವಗಳನ್ನು ಹೇಳಿದ್ದಾರೆ. ಆಗ ಕಾಂಗ್ರೆಸ್ಸಿನಲ್ಲಿದ್ದರು, ಈಗ ವಿರೋಧಪಕ್ಷಕ್ಕೆ ಸೇರಿದ ತಕ್ಷಣ ಅವರ ಸ್ಟೈಲಿ ಬದಲಾವಣೆಯಾಗಿದೆ. ಅದಕ್ಕೆ ನಾನು ಉತ್ತರ ಕೊಡುತ್ತೇನೆ.

ಮಾನ್ಯ ಸಚಿವರು, ಕಾರ್ಪೊರೇಷನ್ ಬಿಲ್ ಮೇಲೆ ನಾನು ಏನು ಮಾತನಾಡಿದ್ದೇನೆ ಎಂಬುದನ್ನು ಬೇಕಾದರೆ ತೆಗೆದು ನೋಡಲಿ. ಅವರು ಉತ್ತರ ಹೇಳಿದ್ದು ಅಲ್ಲಿ ಇದೆ. ನಾನು ಏನು ಇದರಲ್ಲಿ ವಕೀಲಿ ಮಾಡುತ್ತಿಲ್ಲ. ನನ್ನ ಮನಸ್ಸಿನಲ್ಲಿ ಏನು ಬಂತೋ ಅದನ್ನು ಹೇಳಿದ್ದೇನೆ. ಅದನ್ನು ಅದುಮಿಟ್ಟು ಕೊಳ್ಳತಕ್ಕ ಸ್ವಭಾವ ನನಗೆ ಇಲ್ಲ. ನಾನು ಕಳೆದ ೨೭ ವರ್ಷಗಳಿಂದ ಈ ಸಭೆಯ ಸದಸ್ಯನಾಗಿದ್ದರೂ ಇವತ್ತೇ ನನ್ನ ಮೇಲೆ ಇಂತಹ ಆರೋಪಣೆ ಬಂದಿರುವುದು. ೧೯೫೨ ರಿಂದ ೧೯೭೭ ರವರೆಗೆ ನನ್ನ ವಿಚಾರ ಮಾನ್ಯ ಉಪಾಧ್ಯಕ್ಷರಿಗೆ ಗೊತ್ತಿದೆ; ಅವರು ನನ್ನ ಪಕ್ಕದಲ್ಲೇ ಕುಳಿತು ಕೊಳ್ಳುತ್ತಿದ್ದರು. ನಾನು ತಮ್ಮಿಂದ ಉತ್ತರವನ್ನು ಕಾದು ನೋಡುತ್ತೇನೆ. ನಾನು ಮಾತನಾಡಿ ನೀವು ಮಾತನಾಡುವಾಗ ತಪ್ಪಿಸಿಕೊಂಡು ಹೋಗುವ ಮನೋಭಾವ ನನಗೆ ಇಲ್ಲ. ಈ ಚರ್ಚೆಗೆ ಸಂಬಂಧಪಟ್ಟ ಹಾಗೆ ಸಭೆಯ ನಿಯಮಾವಳಿಗಳು ಏನು ಇವೆ ಅವನ್ನು ನಾನು ಮೀರುವುದಿಲ್ಲ. ಈಗ ನೀವು ಯಾವ ಯಾವ ಮುನಿಸಿಪಾಲಿಟಿಗೆ ಎಲೆಕ್ಷನ್ ಮಾಡಿದ್ದೀರಿ ? ಎಂದು ಕೇಳಬಯಸುತ್ತೇನೆ. ಬೆಳಗಾಂ ಮುನಿಸಿಪಾಲಿಟಿಗೆ ಎಲೆಕ್ಷನ್ ಮಾಡಲಾಗಿದೆ ಎಂದು ಹೇಳಿದ್ದೀರಿ. ಬಾಗಲಕೋಟೆ, ಗದಗ್, ಬೆಟಗೇರಿ, ಕಾರವಾರ, ಸಿರಸಿ ರಾಯಚೂರು, ಗುಲ್ಬರ್ಗ ಇವಕ್ಕೆಲ್ಲ ಒಂದೇ ಉತ್ತರ ಹೇಳಿದ್ದೀರಿ. ಬಿಜಾಪುರದಲ್ಲಿ ಗೊತ್ತಿಲ್ಲ. ರಾಯಚೂರು ಬಗ್ಗೆ 'The term of elected Councillors expired on 31st December 1972 and since then the Municipality is under the control of the Administrator appointed by the Government' ಎಂದು ಹೇಳಿದ್ದೀರಿ, ಅಧ್ಯಕ್ಷರೇ, ತಮ್ಮಲ್ಲಿ ಕೇಳಿಕೊಳ್ಳುತ್ತೇನೆ, ಸೂಪರ್‌ಸೆಷನ್ ಆಗಿದ್ದರೆ ಅಲ್ಲಿ ಆಡಳಿತ ಸರಿಯಾಗಿ ಇರಲಿಲ್ಲ, ಆ ಕಾರಣದಿಂದ ಆಡಳಿತವನ್ನು ಸುಧಾರಣೆ ಮಾಡಿ ಒಳ್ಳೆಯ ರೀತಿಯಲ್ಲಿ ವ್ಯವಸ್ಥೆ ಮಾಡುವುದಕ್ಕೆ ಅನುಕೂಲ ಮಾಡಿ, ಅಲ್ಲಿದ್ದ ಹೊಲಸನ್ನೆಲ್ಲ ತೊಳೆದು ಆಮೇಲೆ ಚುನಾವಣೆ ಮಾಡುತ್ತೇವೆಂದು ಹೇಳಿದ್ದರೆ ಒಪ್ಪುತ್ತಿದ್ದೆ. ಆದರೆ ಟರ್ಮ್ ಮುಗಿದು ಈಗಾಗಲೇ ನಾಲ್ಕೈದು ವರ್ಷಗಳಾಗಿದ್ದರೂ ಚುನಾವಣೆ ಮಾಡುವುದಕ್ಕಾಗಿಲ್ಲವೆ ? ತಾವು ಹೇಳಬಹುದು, ಎರಡು ವರ್ಷದಲ್ಲಿ ಎಮರ್ಜನ್ಸಿ ಬಂತು ಆದುದರಿಂದ ಚುನಾವಣೆ ನಡೆಸಲಿಲ್ಲವೆಂದು. ಆದರೆ ಅದಕ್ಕಿಂತ ಹಿಂದೆ ಏಕೆ ಮಾಡಲಿಲ್ಲ ಎಂದು ಕೇಳಬಯಸುತ್ತೇನೆ. 'The Advisory Council consisting of 15 members has also been formed' ಎಂದು ಹೇಳಿದ್ದೀರಿ. ಅಲ್ಲಿಯ ಜನತೆಗೆ ಚುನಾವಣೆ ಮಾಡುವುದಕ್ಕೆ ಯೋಗ್ಯತೆ ಇಲ್ಲ. ಇವರೇ, ಅಲ್ಲಿ ಯಾರು ಜನತೆಯ ಪ್ರತಿನಿಧಿಗಳಾಗಬಲ್ಲರು ಎಂಬುದನ್ನು ಯೋಚನೆ ಮಾಡಿ ಹಾಕಬಲ್ಲರು. ಇವರಿಗೆ ಅಷ್ಟೆಲ್ಲ ಜ್ಞಾನ, ತಿಳುವಳಿಕೆ ಉಂಟು. ಅಲ್ಲಿರತಕ್ಕ ಜನಗಳಿಗೆ ತಮಗೆ ಯೋಗ್ಯರಾದ ಪ್ರತಿನಿಧಿಗಳನ್ನು ಆರಿಸಿಕೊಳ್ಳುವುದಕ್ಕೆ ಆಗುವುದಿಲ್ಲ. ಆ ಒಂದು ವಾದವನ್ನೇ ಮುಂದುವರಿಸುವುದಾದರೆ, ಹುಬ್ಬಳ್ಳಿ ಧಾರವಾಡದ ಪ್ರತಿನಿಧಿಗಳಿಗೆ ಚುನಾವಣೆ ನಡೆಸಿ ಮಾನ್ಯ ನಾಯ್ಕರ್‌ರವರನ್ನು ನಮ್ಮ ರಾಜ್ಯದ ಪುರಸಭಾಡಳಿತ ಮಂತ್ರಿಗಳಾಗುವಂತೆ ಮಾಡಲು ಶಕ್ತಿ ಇದೆ,

ಆದರೆ ಅಲ್ಲಿ ತಮ್ಮ ಪ್ರತಿನಿಧಿಗಳನ್ನು ಚುನಾವಣೆ ಮಾಡಿಕೊಳ್ಳುವುದಕ್ಕೆ ದಕ್ಷತೆ ಇಲ್ಲ. ಜಾಣ್ಮೆ ಇಲ್ಲ ಎಂದು ಇದರ ಅರ್ಥ. ಇನ್ನು ಗುಲ್ಬರ್ಗ ಬಗ್ಗೆ 'The elected body superseded in October 1972 and administrator appointed. The same arrangement is still continued' ಎಂದು ಬಹಳ ಹೆಮ್ಮೆಯಿಂದ ಹೇಳಿದ್ದೀರಿ. ಈ ಧಾಟಿಯಲ್ಲಿ ಬರೆಯುವಾಗ, ಅವರಿಗೆ ಎಳ್ಳಷ್ಟಾದರು ಪ್ರಜ್ಞೆ ಇದ್ದಿದ್ದರೆ ನಾಚಿಕೆಯಿಂದ ಬಿಟ್ಟು ಬಿಡಬಹುದಾಗಿತ್ತು. ಮೈಸೂರು ಡಿವಿಜನ್‌ನಲ್ಲಿ ೪ ಸಿಟಿ ಮುನಿಸಿಪಾಲಿಟಿಗಳು ಮತ್ತು ೬೦ ಟೌನ್ ಮುನಿಸಿಪಾಲಿಟಿಗಳು ಇವೆ. ಹಾಸನದ ಮುನಿಸಿಪಾಲಿಟಿಗೆ ೬ ಕಿಲೋಮೀಟರ್ ದೂರದಲ್ಲಿರುವ ಹಳ್ಳಿಗಳನ್ನು ಸೇರಿಸಿದ್ದಾರೆ. ಹಾಸನದ ಪಕ್ಕದಲ್ಲಿರುವವರಿಗೆ ಬೇಕಾದ ಸೌಲಭ್ಯಗಳನ್ನು ಕೊಡುವುದಕ್ಕೆ ಆಗಿಲ್ಲ. ಸಾಕಷ್ಟು ನೀರನ್ನೊದಗಿಸುವುದಕ್ಕೆ, ಒಳಚರಂಡಿ ವ್ಯವಸ್ಥೆಯನ್ನು ಮಾಡಿಸುವುದಕ್ಕೆ ಆಗಿಲ್ಲ. ಇಂಥವರಲ್ಲಿ ೬ ಕಿಲೋಮೀಟರ್ ದೂರದಲ್ಲಿರುವ ಹಳ್ಳಿಗಳನ್ನು ಸೇರಿಸುವುದರಲ್ಲಿ ಏನು ಅರ್ಥ ಇದೆ? ಸಂದರ್ಭದಲ್ಲಿ ಡಿವಿಜನಲ್ ಕಮೀಷನರು ಒಂದು ಜಾಣ್ಮೆ ಮಾಡಿದ್ದಾರೆ. ಇಂಥ ವಿಚಾರಗಳನ್ನು ಹೇಗೆ ಸಂಗ್ರಹಿಸಿದರೋ ಏನೋ ಗೊತ್ತಿಲ್ಲ. ಅವರು ಇಂಥ ಎಷ್ಟೋ ಪಟ್ಟಣಗಳ ಪುರಸಭೆಗಳನ್ನು ತಮ್ಮ ವಶಕ್ಕೆ ತೆಗೆದುಕೊಂಡಿದ್ದಾರೆ. ಅದನ್ನು ಮಾತ್ರ ಇವರು ಇಲ್ಲಿ ಪ್ರಸ್ತಾಪಿಸಿಲ್ಲ. Unashamedly they have given that information This is sufficient certificate to tell you that you have failed in running the administration in the spirit in which it ought to have been run. ಈ ರೀತಿ ಮಾಡುತ್ತಿರುವಾಗ ನಿಮ್ಮ ಮನೋಭಾವನೆ ಹೇಗೆ ಉಳಿದಿದೆ ಎಂಬುದನ್ನು ನೋಡಬೇಕು. ಇದಕ್ಕೆ ಈ ಸಭೆಯಲ್ಲಿ ಕಾರ್ಪೊರೇಷನ್ ಆಡಳಿತದ ಅನುಭವ ಇರತಕ್ಕವರಾಗಲಿ, ಪುರಸಭೆಯ ಆಡಳಿತದ ಅನುಭವ ಇರತಕ್ಕವರಾಗಲಿ ಯಾರು, ಏನು ಹೇಳಿದರೂ ಅದು ಅವರಿಗೆ ಮುಟ್ಟಲೆ ಇಲ್ಲ ಆದರೂ ಅವರಿಗೆ ಬಲ ಇದ್ದು ಅದರ ಮೇಲೆ ಮಾಡಿದ್ದಾರೆ. ಆಗಲೂ ಕೂಡ ನಾನು ವಿರೋಧ ಮಾಡಿದ್ದೇನೆ. ಆ ಪಕ್ಷದಿಂದ ಈ ಪಕ್ಷಕ್ಕೆ ಬಂದು ಹೇಳುತ್ತಾರೆಂದು ಹೇಳಬೇಡಿ ಆಗಿನ ನನ್ನ ಕೂಗು ಗಗನಕ್ಕೆ ಮುಟ್ಟಲಿಲ್ಲ; ಈಗಲೂ ನನ್ನ ಕೂಗು ಗಗನಕ್ಕೆ ಮುಟ್ಟುತ್ತದೆಂದು ನಾನು ತಿಳಿದು ಕೊಂಡಿಲ್ಲ. ಆದರೆ ತಾವು ಮಾಡಿರುವ ಶಾಸನ ಯಾವ ಕಾಲಕ್ಕೂ ಶಾಸನ ಅಲ್ಲ ಎಂಬುದನ್ನು ತಿಳಿದುಕೊಳ್ಳಬೇಕು. ನೀವು ಬರೆದಿರತಕ್ಕ ಮಸಿ ಆರುವುದಕ್ಕೆ ಮುಂಚಿತವಾಗಿ ತಿದ್ದುಪಡಿಯಾಗಬಹುದು. ಈ ಒಂದು ಶಾಸನದ ರೀತ್ಯ ಯಾರು ಚುನಾವಣೆ ನಡೆಸುತ್ತಾರೆ? ಯಾರು ಕಾರ್ಪೊರೇಷನ್ನಿನ ಆಡಳಿತವನ್ನು ನಡೆಸುವುದಕ್ಕೆ ಸಾಧ್ಯವಾಗುತ್ತದೆ? ಆದರೆ ಇಷ್ಟು ಮಾತ್ರ ಹೇಳಬಲ್ಲೆ; ಅದೂ ತಮ್ಮ ಅವಧಿಯಲ್ಲಿ ಶಾಸನದ ರೀತ್ಯ ಚುನಾವಣೆಯನ್ನು ನಡೆಸುವುದಕ್ಕಾಗುವುದಿಲ್ಲ ಮತ್ತು ಚುನಾವಣೆಯ ತತ್ಪರಿಣಾಮದಿಂದ ಬಂದಂತಹ ಕಾರ್ಪೊರೇಷನ್ನನ್ನು ತಾವು ನೋಡುವುದಕ್ಕಾಗುವುದಿಲ್ಲ. ಹಾಗಾದರೆ, ಅದಕ್ಕೆ ಕಾರಣವೇನೆಂಬುದು ಎಲ್ಲರಿಗೂ ಗೊತ್ತಿದೆ ಇನ್ನು ಕೇವಲ ೬-೭ ತಿಂಗಳಲ್ಲಿ ಚುನಾವಣೆ ಬರುತ್ತದೆ. ಆ ಚುನಾವಣೆಯಲ್ಲಿ ಗೆದ್ದು ತಾವೇ ಅಧಿಕಾರಕ್ಕೆ ಬಂದರೂ ಕೂಡ ಈ ಒಂದು ಅವಧಿಯಲ್ಲಿ ಇದ್ದ ಹಾಗೆ ಇರುವುದಕ್ಕಾಗುವುದಿಲ್ಲ. ಆಗ ತಮ್ಮ ಮನೋಭಾವನೆ ಬೇರೆಯಾಗಬಹುದು. ಈ ಮನೋಭಾವನೆಯನ್ನಿಟ್ಟುಕೊಂಡು ಆಡಳಿತವನ್ನು ನಡೆಸುವುದಕ್ಕಾಗುವುದಿಲ್ಲ. ಬೆಂಗಳೂರು ನಗರ ಎಲ್ಲರಿಗೂ ಗೊತ್ತಿದೆ; ಇದು ಹಿಂದೊಮ್ಮೆ ಅಂದರೆ ೨೫-೩೦ ವರ್ಷಗಳ ಹಿಂದೆ ಚುನಾವಣೆಯಲ್ಲಿ ಏಕ ಸದಸ್ಯ ಕ್ಷೇತ್ರವಾಗಿತ್ತು.

ನಾನು ಮಂತ್ರಿಯಾಗಿದ್ದಾಗ ಬೆಂಗಳೂರಿನಲ್ಲಿ ದ್ವಿ ಸದಸ್ಯಕ್ಷೇತ್ರ ಒಂದಕ್ಕಿಂತ ಹೆಚ್ಚು ಮಾಡಲು ಪ್ರಯತ್ನಿಸಿದೆ. ನಗರದ ಜನ ಪ್ರತಿಷ್ಠಿತ ಜನರನ್ನು ಕೇಳಿದೆ. ಇದಕ್ಕೆ ಯಾರು ಒಪ್ಪಲಿಲ್ಲ. ಇದನ್ನು ಏಕಸದಸ್ಯ ಕ್ಷೇತ್ರವಾಗಿಬಿಟ್ಟೆ ಈಗ ತಾವು ಏನು ಮಾಡಿದ್ದೀರಿ ಎಂದರೆ, ಕನಿಷ್ಠಪಕ್ಷ ಮೂರು ಸದಸ್ಯರು ಇರಬೇಕು ಎಂದು ಮಾಡಿದ್ದೀರಿ. ಕೆಲವುಕಡೆ ಮೂರಕ್ಕಿಂತ ಹೆಚ್ಚು ಜನ ಸದಸ್ಯರು ಇರಬಹುದು ಎಂದು ಮಾಡಿದ್ದೀರಿ. ಯಾವ ಉದ್ದೇಶದಿಂದ ಮೂರು ಜನ ಇರಬಹುದು ಎಂದು ಮಾಡಿದಿರಿ? ಬೆಂಗಳೂರು ನಗರದಿಂದ ಒಂದು ಕ್ಷೇತ್ರದ ಚುನಾವಣೆಯಾಗಬೇಕಾದರೆ, ಆ ಕ್ಷೇತ್ರದ ಬಾಹುಳ್ಯ ಎಷ್ಟಾಗುತ್ತದೆ, ಆ ಕ್ಷೇತ್ರದ ಮತದಾರರು ಎಷ್ಟು ಜನ ಆಗುತ್ತಾರೆ, ಆ ಕ್ಷೇತ್ರದ ಅವಶ್ಯಕತೆಗಳನ್ನು ಸದಸ್ಯರುಗಳು ನೋಡಿಕೊಳ್ಳುವುದಕ್ಕೆ ಸಾಧ್ಯವೇ ಎನ್ನುವುದು ಬಗ್ಗೆ ತಾವು ಆಲೋಚನೆ ಮಾಡಿದ್ದೀರಾ? ಮಾಡಿದ್ದರೆ ಖಂಡಿತವಾಗಿಯೂ ಇದನ್ನು ತಾವು ಮಾಡುತ್ತಾ ಇರಲಿಲ್ಲ. ತಾವು ಆಲೋಚನಾಪರರ ತಿಳಿದವರ ಅಭಿಪ್ರಾಯ ಕೇಳಿ ಮಾಡಿದೀರಾ, ಇಲ್ಲ, ಅದಕ್ಕೆ ತಾವು ಮಾನ್ಯತೆಯನ್ನೂ ಕೊಡಲಿಲ್ಲ. ಆಗಲೂ ನಾನು ಇದು ಖಂಡಿತವಾಗಿಯೂ ಬೇಡ ಎಂದು ಹೇಳಿದೆ. ಆದರೂ ಇದನ್ನು ತಮಗೆ ಶಕ್ತಿ ಇದೆಯೆಂದು ಮಾಡಿದ್ದೀರಿ, ನಾನು ಈ ಮಾತನ್ನು ತಮ್ಮ ಮನಸ್ಸನ್ನು ಒಲಿಸಿಕೊಳ್ಳಬಲ್ಲೆ, ಪರಿವರ್ತನೆ ಮಾಡಬಲ್ಲೆ ಎನ್ನುವ ಆಶೆಯಿಂದ ಹೇಳ

ತ್ತಿಲ್ಲ. ನಾನು ಮಾತನಾಡುತ್ತಾ ಇರುವುದು ಸಭೆಯಲ್ಲಿರುವ ಸದಸ್ಯರಿಗಷ್ಟೆ ಸೀಮಿತವಾಗಿಲ್ಲ, ಅದು ಈ ಸಭೆಯ ಮೂಲಕ ರಾಜ್ಯದ ಮೂರು ಕೋಟಿ ಜನರಿಗೆ ಸಂಬಂಧಪಟ್ಟಿದು ಎಂದು ನಾನು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ತಾವು ಆಡಳಿತ ನಡೆಸತಕ್ಕವರು, ಸ್ವಲ್ಪ ವಿವೇಚನೆಯಿಂದ ಮಾಡಬೇಕಾಗಿತ್ತು, ಯಾರು ಏನು ಹೇಳಿದರೂ ಕೂಡ ಕೇಳದೆ ಧಿಕ್ಕಾರ ಮಾಡಿ ತಮಗೆ ಇಷ್ಟಬಂದಂತೆ ಆಡಳಿತ ನಡೆಸಿದರೆ ತಪ್ಪು ಆದು. ಇದರಂತೆ ಯಾರೂ ನಡೆಯುವುದಕ್ಕಾಗುವುದಿಲ್ಲ. ನಾಳೆ ಜನರ ಅಭಿಪ್ರಾಯವನ್ನು ಸರಿಯಾದ ರೀತಿಯಲ್ಲಿ ಪ್ರತಿಬಿಂಬಿಸುವಂಥ ? ಜನರೇ ಚುನಾವಣೆಯಲ್ಲಿ ಒರಬಹುದು. ತಾವು ತಮ್ಮ ಅಭಿಪ್ರಾಯವನ್ನು ಬದಲಾವಣೆ ಮಾಡಿಕೊಂಡು ತಾವೇ ಪುನಃ ಬಂದರೆ ನನಗೆ ಬಹಳ ಸಂತೋಷ. ಇದು ಯಾರಿಗೂ ಶಾಶ್ವತ ಅಲ್ಲ, ಕ್ಲೋಸ್ ಪ್ರಿಸರ್ವ್ ಅಲ್ಲ, ಆದ್ದರಿಂದ ತಾವು ಯಾವುದೋ ಪಟ್ಟಣಕ್ಕೆ ಅನ್ವಯವಾಗುವುದನ್ನು ಬೆಂಗಳೂರು ಪಟ್ಟಣಕ್ಕೆ ಅನ್ವಯವಾಗುತ್ತದೆ ಎಂದು ತಿಳಿದಿದ್ದರೆ ಅದು ಸಾಧ್ಯವಾಗುವುದಿಲ್ಲ. ಚುನಾವಣೆಯ ಅನುಭವ ಇರತಕ್ಕವರು ಯಾರೂ ಇದನ್ನು ಒಪ್ಪುವುದಿಲ್ಲ.

ಸೆಕ್ಷನ್ ೨೫ರಲ್ಲಿ ಕ್ವಾಲಿಫಿಕೇಷನ್ ಆಫ್ ಕ್ಯಾಂಡಿಡೇಟ್ಸ್ ಇದರಲ್ಲಿ ನಾನು ಒಂದು ಮಾತನ್ನು ಮಾನ್ಯ ನಾಯ್ಕರ್ ಅವರಿಗೆ ವಿನಂತಿ ಮಾಡಿಕೊಳ್ಳುತ್ತೇನೆ. ಲೋಕಸಭೆಯ ಚುನಾವಣೆಗೆ ನಿಲ್ಲಬೇಕಾದರೆ ಹುಬ್ಬಳ್ಳಿ-ಧಾರವಾಡದಿಂದ ನಿಲ್ಲಬಹುದು, ಪಂಜಾಬ್‌ನಿಂದಲೂ ನಿಲ್ಲಬಹುದು, ಪಶ್ಚಿಮಬಂಗಾಳದಿಂದಲೂ ನಿಲ್ಲಬಹುದು. ಕರ್ನಾಟಕ ರಾಜ್ಯದಲ್ಲಿ ವಿಧಾನಸಭೆಗೆ ನಿಲ್ಲಬೇಕಾದರೆ ತಾವು ಚಾಮರಾಜನಗರದಿಂದ ನಿಲ್ಲಬಹುದು, ಬೀದರ್‌ನಿಂದಲೂ ನಿಲ್ಲಬಹುದು. ನಿಮ್ಮ ಹೆಸರು ಮಾತ್ರ ಧಾರವಾಡ ಕ್ಷೇತ್ರದ ಮತದಾರರ ಪಟ್ಟಿಯಲ್ಲಿರಬೇಕು. ಆದರೆ ಈ ಪುರಸಭೆಗಳ ಚುನಾವಣೆಗೆ, ಪುರಸಭೆಯ ಕ್ಷೇತ್ರದಲ್ಲಿಯೇ ವಾಸಮಾಡಬೇಕು, ಮತ್ತು ಅವರು ಯಾವ ಭಾಗದಲ್ಲಿಯಾದರೂ ನಿಲ್ಲಲು ಅವಕಾಶವಿಲ್ಲ ಎಂದು ಮಾಡಿದ್ದೀರಿ ಇದು ಏಕೆ ? ಯಾವ ಕ್ಷೇತ್ರದಲ್ಲಿ ವಾಸ ಮಾಡುತ್ತಿದ್ದಾರೆಯೋ ಅಲ್ಲಿ ಚುನಾವಣೆಗೆ ನಿಲ್ಲಬೇಕು ಎಂದು ಇದೆ. ಇದು ಕೂಡದು,. ಯಾರಿಗೋ ಅನುಕೂಲವಾಗಲಿ ಎನ್ನುವ ಉದ್ದೇಶದಿಂದ ಇದನ್ನು ಮಾಡಿದ್ದಾರೆಂದು ನನಗೆ ತಿಳಿಯಿತು. ಒಂದು ನಗರದಲ್ಲಿ ಅವರು ಎಲ್ಲಿಯಾದರೂ ವಾಸ ಮಾಡಲಿ, ಯಾವ ಭಾಗದಿಂದಲಾದರೂ ಅವರು ಪ್ರತಿನಿಧಿಸಲಿಕ್ಕೆ ಅವಕಾಶ ಇರಬೇಕು. ಒಂದು ಭಾಗದ ಜನರ ವಿಶ್ವಾಸವನ್ನೇ ಗಳಿಸಿರಬಹುದು ಅಥವಾ ಬೇರೆ ಬೇರೆ ಭಾಗದ ಜನರ ವಿಶ್ವಾಸವನ್ನು ಅವರು ಗಳಿಸಿರಬಹುದು. ಆದ್ದರಿಂದ ಇದು ಕೂಡದು ಎಂದು ನಾನು ಹೇಳುತ್ತೇನೆ.

'As a Councillor in respect of a seat in any Division unless his name is included in the electoral roll of that division'... ನಾನು ಅವರನ್ನು ಕೇಳುತ್ತೇನೆ. ಇನ್ನು ಯಾವ ಪುರಸಭೆಯ ಕಾನೂನಿನಲ್ಲಿದೆ ? ತಾವು ಮಾಡಿದನ್ನು ಬೇರೆಯವರು ಅನುಸರಿಸಬೇಕು. ಇಂಥ ಒಂದು ಪ್ರೊಪ್ಪಂಕ್ತಿಯನ್ನು ಹಾಕುವಂತೆ ಮಾಡಬೇಕು ಎಂದು ನಾನು ಹೇಳುತ್ತೇನೆ.

ಎಲ್ಲದಕ್ಕಿಂತಲೂ ದೊಡ್ಡದಾಗಿ, ಮೈಸೂರು, ಬೆಳಗಾಂ ಮೇಲೆ ಬಹಳ ಅಭಿಮಾನ ತೋರಿಸಿ ಅದಕ್ಕೆ ದೊಡ್ಡ ಅಂತಸ್ತನ್ನು ಕೊಟ್ಟಿದಾರೆ. ತಾವು ವರ ಕೊಟ್ಟಿಲ್ಲ ಶಾಪ ಎಂದು ನಾನು ಆಗಲೇ ಹೇಳಿದ್ದೇನೆ. ಇವರು ಕೊಟ್ಟಿರತಕ್ಕ ಪುಸ್ತಕದಲ್ಲಿ ಹೇಳಿದ್ದಾರೆ. In page 5 of the Report, it has been stated as follows :

> "Government have sanctioned a sum of Rs. 138-00 lakhs to the payment of D.A. grant-in-aid to the Municipalities and notified area committees at the rates prescribed in G. O. No. LMA 68 MNY 67, dated 3rd September, 1970. Sanction was also accorded for the payment of grant-in-aid to the specific health staff at the old rates during 1976-77".

ಪುರಸಭೆಗಳಿಗೆ ತುಟ್ಟಿ ಭತ್ಯದ ಅರ್ಧಭಾಗವನ್ನು ಗ್ರ್ಯಾಂಟ್ ಇನ್ ಏಡ್ ಆಗಿ ಕೊಟ್ಟಿದ್ದಾರೆ. ಕಾರ್ಪೊರೇಷನಿಗೆ ಕೊಟ್ಟಿಲ್ಲ. ಇದು ಮೊದಲು ಮೈಸೂರಿಗೆ ಬರುತ್ತಿತ್ತು, ಬೆಳಗಾಂಗೆ ಬರುತ್ತಿತ್ತು, ಯಾವತ್ತು ಇವರು ಇವುಗಳನ್ನು ಕಾರ್ಪೊರೇಷನ್ ಎಂದು ಮೇಲಕ್ಕೆ ಎತ್ತಿದರು ಆ ದಿನದಿಂದಲೇ ಈ ಹಣ ಅವರ ಮೇಲೆ ಬಿತ್ತು. ಇದು ಇವರು ಮಾಡಿರುವ ಉಪಕಾರ,

ಇನ್ನೊಂದು ವಿಷಯ ಬೆಂಗಳೂರು ನಗರದ ನಾಗರೀಕರಿಗೆ ಈ ಒಂದು ಹೊಸ ಕಾನೂನಿನ ವ್ಯಾಪಕತೆ ಎಷ್ಟು ಎನ್ನುವುದು ಅರಿವಾಗಿರಲಿಲ್ಲ. ಬಹುಶಃ ಇದು ಕಾಲ ಕ್ರಮೇಣದಲ್ಲಿ ಆಗುತ್ತದೆ. ದೇಶದಲ್ಲಿ ಯಾವುದೇ ಒಂದು ಕಾನೂನನ್ನು ಮಾಡುವಾಗ ಈ ಸಭೆಯಲ್ಲಿ ತೀವ್ರವಾದಂಥ ಭಿನ್ನಾಭಿಪ್ರಾಯ ತಿಕ್ಕಾಟ ಇದ್ದರೂ ಕೂಡ ಸಾರ್ವಜನಿಕರು ಮಾತ್ರ ತಮಗೆ ಯಾವುದೂ ತಟ್ಟದಂತೆ ನಿರ್ಲಿಪ್ತರಾಗಿರುತ್ತಾರೆ. ವಿದ್ಯಾವಂತರು ತಿಳಿದಂಥವರು ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸುವುದಿಲ್ಲ. ಆಮೇಲೆ ಮಾಡಿದಂಥ ಕಾನೂನಿನ ಕಾವು ಮುಟ್ಟಿದಾಗ ಹೇಗೆ ಇಂಥ ಕಾನೂನು ಮಾಡಿದರು, ಇವರಿಂದ ಎಷ್ಟು ತೊಂದರೆ ಆಯಿತು ಎನ್ನುವುದನ್ನು ನೋಡುತ್ತಾರೆ. ಈ ಕಾರಣದಿಂದ ಅನೇಕವೇಳೆ ಸಭೆಯೂ ನಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸುವಾಗ ಪ್ರತಿನಿಧಿಗಳೂ ಕೂಡ ಜನ ಅಭಿಪ್ರಾಯವನ್ನು ಯಾವ ಮಟ್ಟದಲ್ಲಿ ಇದೆಯೆನ್ನುವುದನ್ನು ಹೇಳುವುದಿಲ್ಲ. ಇದರಲ್ಲಿಯೂ ಹಾಗೆಯೇ ಆಗಿದೆ. ಹಳೆಯ ಕಾರ್ಪೋರೇಷನ್ ಆಕ್ಟ್‌ನಲ್ಲಿ ಕಂದಾಯ ಮಿತಿ ಇರಬೇಕು ಎಂದು ಹೇಳುವಾಗ ನಾನು ಮಂತ್ರಿಯಾಗಿದ್ದೆ. ಇದನ್ನು ಮಾಡಿದಂಥ ಸಂದರ್ಭದಲ್ಲಿ ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಯೋಜನೆ ಇಲ್ಲಿ ಚರ್ಚೆಯಾಗಿ ಇವಕ್ಕೆ ಕಾನೂನನ್ನೆ ತಿದ್ದುಪಡಿ ಮಾಡಬೇಕಾಯಿತು. ತಿದ್ದುಪಡಿ ಮಾಡುವಾಗ ಶ್ರೀಮಾನ್ ನಾಗಣ್ಣನವರು ನಗರ ಸಭೆಯ ಮೇಯರ್ ಆಗಿದ್ದರು.

ಶ್ರೀ ಕೋಣಂದೂರು ಲಿಂಗಪ್ಪ.—ದೇಹಲಿಯಲ್ಲಿ ಕಾಲಕೋಶ ಭೂಗತವಾಯಿತು ಇಲ್ಲಿ......

ಶ್ರೀ ಕೆ. ಪುಟ್ಟಸ್ವಾಮಿ.—ಮಾನ್ಯ ಶಾಮಣ್ಣನವರು, ಅವರು ನಗರಸಭೆಯ ಭೀಷ್ಮರು, ಇಲ್ಲಿಯೇ ಇದ್ದಾರೆ.

ಅದು ಅನ್‌ಬ್ರೋಕನ್ ಪೀರಿಯಡ್‌ನಲ್ಲಿ, ಆವಾಗ ಇದೇ ಬಾಲಬ್ರೂಯಿಯಲ್ಲಿ ಮುಖ್ಯಮಂತ್ರಿಗಳ ಮುಂದೆ ಚರ್ಚೆ ಮಾಡಿ ಇದನ್ನು ಶೇಕಡಾ ೧೫ ಭಾಗಕ್ಕೆ ಮಾಡಲಾಯಿತು. ಈಪೊತ್ತು ನೀವು ಮಾಡಿರತಕ್ಕಂಥದ್ದು ಏನೆಂದರೆ ಅದನ್ನು ಇಲ್ಲಿ ಹೇಳುತ್ತೇನೆ. ಸೆಕ್ಷನ್ ೧೦೩ (೨) ರಲ್ಲಿ ಈ ರೀತಿ ಇದೆ (The Karnataka Municipal Corporations Act, 1976) :—

> "The property tax shall be levied, at such percentage, not being less than 20 percent and not m re than 25 percent"...

ಅಂತ ಮಾಡಿದ್ದೀರಿ. ಅಧ್ಯಕ್ಷರೇ, ಸಾಮಾನ್ಯವಾಗಿ ಇಂಥಾ ಶಾಸನ ಮಾಡುವಾಗ ಒಂದು ವಿಧದಲ್ಲಿ ಹೇಳುವುದಾದರೆ ಕಂದಾಯ ಹಾಕತಕ್ಕಂಥಾದ್ದರ ಬಗ್ಗೆ ಶಾಸನ ಮಾಡುವ ಅಧಿಕಾರ ಈ ಸಭೆಗೆ ಇದ್ದರೂ ಕೂಡ ಈ ಸಭೆಯ ಅಧಿಕಾರವನ್ನು ಬೇರೆ ಒಂದು ಸಂಸ್ಥೆಗೆ ಕೊಡುವಾಗ ಅದಕ್ಕೆ ಸಾಮಾನ್ಯವಾಗಿ ಗರಿಷ್ಠ ಮಿತಿಯನ್ನು ಹಾಕುತ್ತೇವೆ ಎಂದರೆ not more than 25 percent n t more than 35 percent ಅಂತ ಹೇಳುತ್ತೇವೆ. ಈ ಒಂದು ಸಂಸ್ಥೆಗೆ ಅಂದರೆ ಈ ಒಂದು ಕಾರ್ಪೋರೇಷನ್‌ಗೆ ಈ ಒಂದು ಅಧಿಕಾರ ಕೊಡುವಾಗ ತಮ್ಮ ಹಣದ ಅವಶ್ಯಕತೆಯ ಒಂದು ಆಧಾರದ ಮೇಲೆ ಎಷ್ಟು ಪ್ರಮಾಣದಲ್ಲಿ ಕರಾಯ ಹಾಕಿಕೊಳ್ಳಬೇಕು ಅನ್ನುವುದನ್ನು ಅವರಿಗೇ ಬಿಟ್ಟು ಬಿಡುತ್ತೇವೆ. ಅದಕ್ಕೆ ಬದಲಾಗಿ ಶ್ರೀಮಾನ್ ನಾಯಕರ್‌ವರ ಮುಖಂಡತ್ವದಲ್ಲಿ, ಅವರ ಮುತ್ಸದ್ದಿತನದಲ್ಲಿ ಈಗ ಆಗಿರತಕ್ಕಂಥಾದ್ದು ಏನು ಎಂದರೆ ಶೇಕಡಾ ೨೦ ಭಾಗ ಮಾಡಿದ್ದಾರೆ. ಇದರ ಕಾವು ಜನಗಳಿಗೆ ಯಾವಾಗ ತಟ್ಟುತ್ತದೆ ಎಂದರೆ ಪ್ರಾಪರ್ಟಿ ಟ್ಯಾಕ್ಸ್ ರಿವೈಸ್ ಮಾಡಿ ಡಿಮ್ಯಾಂಡ್ ನೋಟೀಸ್ ಕೊಡುತ್ತೀರಲ್ಲಾ ಆವಾಗ ಪ್ರತಿಯೊಬ್ಬ ಮಾಲೀಕನೂ ಕಣ್ಣು ತೆರೆಯುತ್ತಾನೆ. ಇದು ಏನು ಇದ್ದಕ್ಕಿದ್ದ ಹಾಗೆ ಬಂತಲ್ಲಾ ಅಂತ. ಎಷ್ಟು ಪ್ರಮಾಣದಲ್ಲಿ ಇದು ಹೆಚ್ಚಿದೆ ಅನ್ನುವುದನ್ನು ಹೇಳುತ್ತೇನೆ. ಮೊದಲು ಕಂದಾಯದಲ್ಲಿ ಹೆಲ್ತ್ ಸೆಸ್ ಮತ್ತು ಎಜುಕೇಷನ್ ಸೆಸ್ ಈ ಎರಡೂ ಸೇರಿ ೧೪ ಪರ್ಸೆಂಟ್ ಇತ್ತು. ಕಳೆದ-ವರ್ಷ ಮಾನ್ಯ ಅರ್ಥ ಸಚಿವರು ಇದನ್ನು ೨೫ ಪರ್ಸೆಂಟ್‌ಗೆ ಏರಿಸಿದರು, ಅಕ್ಷಗೆ ಇದ್ದಕ್ಕಿದ್ದ ಹಾಗೆ ೧೧ ಪರ್ಸೆಂಟ್ ಜಾಸ್ತಿ ಆಯಿತು. ಮತ್ತೆ ಲೈಬ್ರರಿ ಸೆಸ್ ಅನ್ನುವುದು ಬೇರೆ ಇತ್ತು ಅದು ಮೊದಲು ೩ ಪರ್ಸೆಂಟ್ ಇತ್ತು. ಮತ್ತೆ ಇನ್ನೊಂದು ಸೆಸ್ ಹಾಕಿದರು ಬೆಗ್ಗರ್ ರೀಲೀಫ್ ಸೆಸ್ ಅಂತ ಹಾಕಿ ಇನ್ನೂ ೩ ಪರ್ಸೆಂಟ್ ಜಾಸ್ತಿಯಾಯಿತು. ಆದರೂ ಕೂಡ ಆ ಭಿಕ್ಷುಕರಿಗೇ ನಾದರೂ ಅನುಕೂಲವಾಯಿತೇ ಅನ್ನುವುದನ್ನು ನೋಡಿದರೆ ಪುನಃ ಅವರು ಭಿಕ್ಷೆ ಬೇಡುವುದು ತಪ್ಪಿಲ್ಲ. ಇವರು ಕಂದಾಯ ಬರುವುದನ್ನು ನೋಡಿಕೊಳ್ಳುತ್ತಾರೇ ವಿನಾ ಸಾಮಾನ್ಯ ಜನರ ಯೋಗಕ್ಷೇಮ ಏನು ಅಂತ ನೋಡಿಕೊಳ್ಳುತ್ತಾ ಇಲ್ಲ. ಆ ಭಿಕ್ಷುಕರ ಕಾಟ ಇನ್ನೂ ತಪ್ಪಿಲ್ಲಾ. ಹೀಗೆ ಆ ಸೆಸ್ ಈ ಸೆಸ್ ಅಂತ ಹೇಳಿ ಈಗ ಶೇಕಡಾ ೩೧ ಪರ್ಸೆಂಟ್ ಬರುತ್ತಾ ಇದೆ:

4-00 P. M.

ಹೀಗಾಗಿ ಇದು ಮನೆ ಮಾಲೀಕರಿಗೆ ಎಷ್ಟು ಪ್ರಮಾಣದಲ್ಲಿ ಕಂದಾಯ ಆಗುತ್ತದೆ ಎಂದರೆ ಸುಮಾರು ೨೭-೨೮ ಪರ್ಸೆಂಟ್ ಆಗಬಹುದು. ನಾನು ಅಷ್ಟೊಂದು ಲೆಕ್ಕಾಚಾರ ಮಾಡಿ ಹಾಕಿಲ್ಲಾ. ಆದರೂ ಒಂದು ಅಂದಾಜು ಮೇಲೆ ಹೇಳುತ್ತಾ ಇದ್ದೇನೆ. ಮೊದಲು ಶೇಕಡಾ ೧೫ ಭಾಗ ಕೊಡುತ್ತಾ ಇದ್ದದ್ದು ಈಗ ಯಾವ ಪ್ರಮಾಣದಲ್ಲಿ ಹೋಗಿದೆ ಅನ್ನುವುದನ್ನು ಯೋಚನೆ ಮಾಡಿ. ಜನ ಎಲ್ಲಾ ಸಂಘವಾಗಿದ್ದಾರೆ, ಅವರಿಗೆ ಬೇಕಾದಷ್ಟು ಸಂಪಾದನೆ ಇದೆ ಅಂತ ಏನಾದರೂ ತಿಳಿದುಕೊಂಡಿದ್ದರೆ, ಮನೆ ಇಟ್ಟುಕೊಂಡಿರುವವರೆಲ್ಲಾ ದೊಡ್ಡ ಶ್ರೀಮಂತರೇ, ಅವರಿಗೇನೂ ತೊಂದರೆ ಇಲ್ಲಾ ಎಂದು ನಿಮ್ಮ ಭಾವನೆ ಇರಬಹುದು. ಸಾಮಾನ್ಯ ಜನರೂ ಕೂಡ ತಮ್ಮ ನೆತ್ತಿ ಮೇಲೆ ನೆರಳು ಇರಲಿ ಒಂದು ಸಣ್ಣ ಮನೆ ಕಟ್ಟಿಕೊಂಡಿದ್ದರೆ ಈಗ ಅವರಿಗೆಲ್ಲಾ ಗದಾ ಪ್ರಹಾರವಾಗಿದೆ. ಇದರ ಅವಶ್ಯಕತೆ ಇದ್ದರೆ ಮಾಡಿ. ಇಷ್ಟೇ ಅಲ್ಲ ಅವರಿಗೆ ಇನ್ನೊಂದು ರೂಪದಲ್ಲಿ ಕಂದಾಯ ಬೀಳುತ್ತದೆ. ನಮಗೆ ಅದರ ಶಾಖ ಇನ್ನೂ ತಟ್ಟಿಲ್ಲ. ಈಗ ನಾವು ಅರ್ಬನ್ ಲ್ಯಾಂಡ್ ಟ್ಯಾಕ್ಸ್ ಹಾಕಲು ಕೂಡ ಒಂದು ಶಾಸನ ಮಾಡಿದ್ದೇವೆ. ಇದಕ್ಕೆ ಮಾರ್ಕೆಟ್ ಬೆಲೆ ನಿಗದಿ ಮಾಡುತ್ತಾರೆ. ಪ್ರತಿ ೪-೫ ವರ್ಷಕ್ಕೊಮ್ಮೆ ಇದನ್ನು ಪುನರ್ವಿಮರ್ಶೆ ಮಾಡಿ ಮಾರ್ಕೆಟ್ ವ್ಯಾಲ್ಯೂ ಮೇಲೆ ಏನು ದರ ಇರುತ್ತದೋ ಆ ಒಂದು ದರದ ಮೇಲೆ ಶೇಕಡಾ ಒಂದು ರೂಪಾಯಿ ಬೀಳುತ್ತದೆ. ಮಾನ್ಯ ಅಧ್ಯಕ್ಷರ ಮೂಲಕ ಶ್ರೀಮಾನ್ ನಾಯಕರ್‌ರವರನ್ನು ವಿನಂತಿ ಮಾಡಿಕೊಳ್ಳುತ್ತೇನೆ ಜನ ಎಲ್ಲಿಗೆ ಹೋಗಬೇಕು ಅಂತ ನೀವು ಮಾಡಿದ್ದೀರಿ ? ಮನೆಗಳ ಕಂದಾಯ ಕೊಡುವುದಕ್ಕೆ ಶಕ್ತಿ ಇಲ್ಲದೆ ಅದನ್ನು ಯಾರು ಧನವಂತರು ಇದ್ದರೋ ಅವರಿಗೆ ಮಾರಿ ಅವರ ಹತ್ತಿರನೇ ಬಾಡಿಗೆದಾರರಾಗಿರಬೇಕು ಎಂಬುದು ತಮ್ಮ ಅಭಿಪ್ರಾಯವೇ ? ಯಾವುದೇ ಒಂದು ಆಡಳಿತದಲ್ಲಾಗಲಿ ಸಾಮಾನ್ಯ ಜನರು ಏನು ಬಯಸುತ್ತಾರೆ ಎಂದರೆ ಯಾವುದು ಇಲ್ಲದೇ ಇದ್ದರೂ ಕೂಡ ಒಂದು ಮನೆ ಇರಲಿ ಅಂತ ಬಯಸುತ್ತಾರೆ. ಮೊದಲು ಆ ಒಂದು ಪರಿಸ್ಥಿತಿಯಲ್ಲಿ ಜನರು ಇದ್ದರು. ಈಗ ಆ ಒಂದು ಪರಿಸ್ಥಿತಿಯಲ್ಲಿ ಇಲ್ಲ. ಈಗ ನೀವು ಹಾಕತಕ್ಕಂಥಾ ಕಂದಾಯದಿಂದ ಅವರ ಮಾಲೀಕತ್ವವನ್ನು ತಪ್ಪಿಸಿ ಮಾರುವ ಪರಿಸ್ಥಿತಿಗೆ ಬರುತ್ತಾರೆ. ಈವೊತ್ತಿನ ಪರಿಸ್ಥಿತಿ ನೋಡಿದರೆ ೫೦ ವರ್ಷದ ಹಿಂದೆ ಯಾವ ಒಂದು ಪರಿಸ್ಥಿತಿ ಇತ್ತೋ ಆ ಪರಿಸ್ಥಿತಿ ಇಲ್ಲ ಮೈಸೂರಿನಲ್ಲೇ ಆಗಲಿ, ಬೆಂಗಳೂರಿನಲ್ಲೇ ಆಗಲಿ ಅಥವಾ ತಮ್ಮ ಊರಿನ ಧಾರವಾಡದಲ್ಲೇ ಆಗಲಿ ತೆಗೆದುಕೊಳ್ಳಿ ನಾನೂ ಕೂಡ ತಮ್ಮ ಊರನ್ನು ನೋಡಿದ್ದೇನೆ. ಯಾವುದೋ ಒಂದು ಕಾಲದಲ್ಲಿ ಅವರ ಹಣಕಾಸಿನ ಸ್ಥಿತಿಗೆ ತಕ್ಕಂತೆ ಅವರು ಕೆಳಮಟ್ಟದವರಾಗಿದ್ದರೂ ಕೂಡ, ಲೋಯರ್ ಮಿಡಲ್ ಕ್ಲಾಸ್ ಜನರು ಏನು ಬಯಸುತ್ತಾ ಇದ್ದರು ಎಂದರೆ ನಾವು ಬಾಳಿಬದುಕಬೇಕು ಅನ್ನುವ ಒಂದು ಆಸೆ ಇತ್ತು ಆದುದರಿಂದ ಅವರು ಒಂದು ವಿಶಾಲವಾದ ಜಾಗವನ್ನು ತೆಗೆದುಕೊಂಡು ಅಲ್ಲಿ ಅವರ ಯೋಗ್ಯತೆಗೆ ತಕ್ಕಂತೆ ಒಂದು ಸಣ್ಣ ಮನೆಯನ್ನು ಕಟ್ಟಿಕೊಂಡು ಅವರು ವಾಸಮಾಡಿಕೊಂಡು ಬಂದಿದ್ದರು. ಈವೊತ್ತು ಅವರ ಆ ನೆಲದ ಮೇಲೆ ಈವೊತ್ತಿನ ಒಂದು ಮಾರ್ಕೆಟ್ ದರದಲ್ಲಿ ಕಂದಾಯ ಹಾಕುವುದಾದರೆ ಆ ನೆಲ ಮತ್ತು ಆ ಮನೆ ಎಲ್ಲಾ ಸೇರಿ ೨೦ ಪರ್ಸೆಂಟ್ ಬೀಳುತ್ತದೆ. ಇಷ್ಟೇ ಅಲ್ಲದೆ ಇನ್ನೂ ಕೂಡ ಆ ಸೆಸ್, ಈ ಸೆಸ್, ಅಂತ ಯಾವ್ಯಾವುದೋ ಸೆಸ್‌ಗಳು ಬರುತ್ತದೋ ನನಗಂತೂ ಗೊತ್ತಿಲ್ಲ. ಈ ಬಗ್ಗೆ ತಾವು ಯೋಚನೆ ಮಾಡಬೇಕು. ಅನೇಕರು ಕಂದಾಯ ಕೊಡಬಹುದು, ಅನೇಕರಿಗೆ ಕಂದಾಯ ಕೊಡುವುದಕ್ಕೆ ಆಗದೇ ಇರಬಹುದು, ಈ ವಿಚಾರವನ್ನು ಮಾನ್ಯ ಸದಸ್ಯರಾದಂಥಾ ಶ್ರೀಮಾನ್ ಟಿ. ಆರ್. ಶಾಮಣ್ಣನವರು ಚೆನ್ನಾಗಿ ಹೇಳಿದ್ದಾರೆ. ನನಗೆ ಅಷ್ಟೊಂದಾಗಿ ಅಂಕಿಅಂಶಗಳನ್ನು ತಿಳಿದುಕೊಳ್ಳುವುದಕ್ಕೆ ಅಷ್ಟು ಪರಿಣತನಲ್ಲ. ಯಾವುದಾದರೂ ಒಂದು ಕಾನೂನು ಮಾಡುವಾಗ ಆಲೋಚನೆ ಮಾಡಬೇಕು. ಈ ಮೆಥಡ್ ಆಫ್ ಅಸೆಸ್‌ಮೆಂಟ್‌ನಲ್ಲಿ ನಾನು ಸುಮಾರು ೧೫ ವರ್ಷದಿಂದಲೂ ಈರೀತಿ ತಿಳಿದುಕೊಂಡಿದ್ದೆ. ಯಾವನು ಮನೆ ಕಟ್ಟಿ ಬಾಡಿಗೆಗೆ ಮನೆ ಕೊಟ್ಟಿರುತ್ತಾನೋ ಅದರ ಒಂದು ರೆಂಟ್ ವ್ಯಾಲ್ಯೂ ಮೇಲೆ ಅವರು ಕಂದಾಯ ಹಾಕುತ್ತಾರೆ ಅಂತ ತಿಳಿದುಕೊಂಡಿದ್ದೆ. ಅವರು ಇನ್ನೊಬ್ಬರಿಗೆ ಎಷ್ಟು ಬಾಡಿಗೆಗೆ ಕೊಟ್ಟಿರುತ್ತಾರೋ ಅದನ್ನು ಲೆಕ್ಕ ಹಾಕಿಕೊಂಡು, ಆ ಬಾಡಿಗೆ ಮನೆಗೆ ಕಂದಾಯ ನಿಗದಿ ಮಾಡುತ್ತಿದ್ದರು ಎಲ್ಲಾ ಕಾಲದಲ್ಲೂ ಹೀಗೆ ಇತ್ತು, ಆ ಕಟ್ಟಡ ಮೇಯರ್‌ದೇ ಆಗಿರಬಹುದು, ಮುನಿಸಿಪಲ್ ಪ್ರೆಸಿಡೆಂಟರದೇ ಆಗಿರಬಹುದು, ಮುನಿಸಿಪಲ್ ಕಮೀಷನರದೇ ಆಗಿರಬಹುದು ಅಥವಾ ಪುರಸಭಾ ಸದಸ್ಯರದೇ ಆಗಿರಬಹುದು. ಆದರೆ ಅವರು ಇದರಲ್ಲಿ ಒಂದು ಆಸಕ್ತಿಯನ್ನು ತೋರಿಸುತ್ತಿದ್ದರು. ಏನೆಂದರೆ ಯಾರು ಮನೆಗಳನ್ನು ಕಟ್ಟಿಕೊಂಡು ಸ್ವಂತ ಮನೆಗಳಲ್ಲೇ ವಾಸವಾಗಿದ್ದರೆ ಅಂಥಾವರಿಗೆ

ದುಬಾರಿ ಹಾಕಬೇಡಿ ಎಂದು ಹೇಳುತ್ತಿದ್ದರು. ಒಂದು ವೇಳೆ ಅವರು ಮನೆ ಕಟ್ಟಿಕೊಂಡು ನ್ಯಾಯವಾದ ಬಾಡಿಗೆಗೆ ಏನಾದರೂ ಕೊಟ್ಟಿದ್ದರೆ ಅಂಥಾವುಗಳ ಮೇಲೆ ಎಷ್ಟಾದರೂ ಕಂದಾಯ ಹಾಕಿಕೊಳ್ಳಿ ಅನ್ನುತ್ತಿದ್ದರು. ಸ್ವಂತ ಮನೆಗಳಲ್ಲೇ ವಾಸವಾಗಿರುವವರ ಬಗ್ಗೆ ಸ್ವಲ್ಪ ಔದಾರ್ಯ ತೋರಿಸುತ್ತಿದ್ದರು. ಇದು ಉದ್ದಕ್ಕೂ ನಡೆದುಕೊಂಡು ಬಂದಿದೆ. ಈಗಲಂತೂ ನೀವು ಮಾಡಿರುವ ಈ ಒಂದು ಕಾನೂನಿನಿಂದ ಅವರು ತಪ್ಪಿಸಿಕೊಳ್ಳುವುದಕ್ಕೆ ಮಾರ್ಗವೇ ಇಲ್ಲ. ಏನು ಮಾಡಿದರೂ ಕೂಡ ಅವರು ತಪ್ಪಿಸಿಕೊಳ್ಳುವುದಕ್ಕಾಗುವುದಿಲ್ಲ. ಈ ಮೆಥಡ್ ಆಫ್ ಅಸೆಸ್‌ಮೆಂಟ್ ಬಗ್ಗೆ ಹೇಳುವುದಾದರೆ ಬಾಡಿಗೆಗೆ ಕೊಡದೇ ಇದ್ದ ಮನೆಗೆ ಏನು ಮಾಡಬೇಕು ಅಂತ ಯೋಚನೆ ಮಾಡಿ ಹಾಕಬೇಕು. ಅದು ಬಿಟ್ಟು ಪಕ್ಕದ ಮನೆಯವರು ಯಾರಾದರೂ ಬಾಡಿಗೆಗೆ ಕೊಟ್ಟಿದ್ದರೆ ಇದಕ್ಕೂ ಕೂಡ ಅದರಂತೆ ಬಾಡಿಗೆ ಹಾಕೋಣ ಅಂತ ಮಾಡಿದರೆ ಅದಕ್ಕೂ ಕೂಡ ಮಾರ್ಕೆಟ್ ದರದಂತೆ ಇಷ್ಟು ಪರ್ಸೆಂಟ್ ಅಂತ ನಿಗದಿ ಮಾಡಿದರೆ ಬಹಳ ಕಷ್ಟವಾಗುತ್ತದೆ. ನಿಮಗೆ ಒಂದು ಉದಾಹರಣೆ ಈ ಸಂದರ್ಭದಲ್ಲಿ ಹೇಳುವುದಾದರೆ ನಮ್ಮ ಮೈಸೂರಿನ ಒಂಟಿಕೊಪ್ಪಲಿನಲ್ಲಿ ಹಿಂದೆ ಯಾವುದೋ ಒಂದು ಕಾಲದಲ್ಲಿ ಚದರ ಗಜಕ್ಕೆ ಎರಡು ಅಣೆಗೂ ಒಂದು ಸೈಟನ್ನು ಕೊಟ್ಟಿದ್ದಾರೆ. ಈಗ ಅದಕ್ಕೆ ೧೫೦ ರೂಪಾಯಿ ಆಗಬಹುದು. The method of assessment is thus: The rateable value of the premises shall be deemed to be 6 per cent of the total of the estimated market value of the land at the time of assessment and the estimated cost of errecting the building at such time after deducting for depreciation a reasonable amount which shall in no case be less than 10 per cent of such cost. ಸುಮಾರು ೬-೭ ವರ್ಷದ ಹಿಂದೆ ಒಂದು ಚದರಕ್ಕೆ ೧೫೦೦-೨೦೦೦ ರೂಪಾಯಿ ಇದ್ದದ್ದು ಈಗ ೭-೮ ಸಾವಿರ ರೂಪಾಯಿ ಆಗಿದೆ. ಸದ್ಯ ಆ ಒಂದು ಲೆಕ್ಕಾಚಾರ ತೆಗೆದುಕೊಂಡು Higher than 25 per cent ಅಂತ ಹೇಳಲಿಲ್ಲವಲ್ಲ. ಹೀಗಾದರೆ ಇದರ ಪರಿಣಾಮವಾದರೂ ಏನು? ಇದರ ಅನ್ವಯ ಈಗಾಗಲೇ ರೂಲ್ಸ್‌ನ್ನು ಸಹ ಮಾಡಿದ್ದಾರೆ. ಆ ರೂಲ್ಸ್‌ನಲ್ಲಿ ಏನು ಹೇಳಿದ್ದಾರೆಂದರೆ :

"Where such statment is not filed, the owner shall lose all the right of questioning the value arrived at by the authorised officer." ಸಾಮಾನ್ಯವಾಗಿ ನಾವು ಕಂದಾಯ ಕೊಡುವವರಿಗೆ ಇದ್ಯಾವುದೂ ನಮಗೆ ಗೊತ್ತಾಗುವುದಿಲ್ಲ. ಮತ್ತು ಕೆಲವರಿಗೆ ಈ ಬಗ್ಗೆ ಯಾವಾಗ ಡಿಕ್ಲರೇಷನ್ ಕೊಡಬೇಕು, ಕೊಡದಿದ್ದರೆ ಏನಾಗುತ್ತದೆಂಬುದು ತಿಳಿದಿರುವುದಿಲ್ಲ. You are trying to thrive on ignorance and indifference of the people. ಜನರು ಸ್ಟೇಟ್‌ಮೆಂಟ್ ಕೊಡದಿದ್ದರೆ ಅವರೇ ತೀರ್ಮಾನ ಮಾಡಬಹುದು. ಒಟ್ಟಿನಲ್ಲಿ ಇವರು ಮಾಡುತ್ತಿರುವ ಕಾನೂನುಗಳು ಯಾವ ರೀತಿ ಇವೆ ಎಂದರೆ, ಈ ಕೆಲಸ ಮಾಡಲು ಎಂತಹ ಸತ್ಯವಂತರಾದಂಥ ಅಧಿಕಾರಿಗಳನ್ನು ನೇಮಕ ಮಾಡಿದರೂ ಸಹ, ಅವರಿಂದ ಮನೆಮಾಲೀಕರು ತಪ್ಪಿಸಿಕೊಳ್ಳುವುದಕ್ಕಾಗುವುದಿಲ್ಲ. ಅವರಿಗೆ ಕೊಟ್ಟಿರುವ ಒಂದು ಅಧಿಕಾರವನ್ನು ನೋಡಿದರೆ, ಜನರು ಅವರನ್ನು ಕೊಂಡುಕೊಳ್ಳದೆ ಬೇರೆ ಮಾರ್ಗವೇ ಇಲ್ಲ. ಏಕೆಂದರೆ ಅಧಿಕಾರಿಗಳು ಎಲ್ಲದಕ್ಕೂ ಮಾರ್ಕೆಟ್ ವ್ಯಾಲ್ಯೂ ಎಂದು ಹೇಳುತ್ತಾರೆ. ಅವರು ಬೇಕಾದರೆ ೨೫ ಸಾವಿರ ಎಂದು ಹೇಳಬಹುದು. ಇಲ್ಲವೇ ಒಂದು ಲಕ್ಷ ಎಂದು ಹೇಳಬಹುದು. ಸಂಬಂಧಪಟ್ಟವರು ಸರಿಯಾಗಿ ಆಸಕ್ತಿ ವಹಿಸಿದರೆ ಅಧಿಕಾರಿಗಳು ೨೫ ಸಾವಿರ ಎಂದು ಹೇಳಬಹುದು, ಇಲ್ಲದಿದ್ದರೆ ಒಂದು ಲಕ್ಷ ಎಂದು ಹೇಳುವುದಕ್ಕೂ ಅವಕಾಶವಿದೆ. ಈ ರೀತಿ ಅಧಿಕಾರ ಚಲಾವಣೆ ಮಾಡಲು ತಾವು ಇದರಲ್ಲಿ ಅವಕಾಶ ಕೊಟ್ಟಿದ್ದೀರಿ. ನಾನು ಇದನ್ನು ಊಹೆಯಿಂದ ಹೇಳುತ್ತಿದ್ದೇನೆಂದು ತಾವು ತಿಳಿದುಕೊಳ್ಳಬಾರದು. ಇಂತಹ ನಿದರ್ಶನಗಳನ್ನು ನಾನು ನಿಮಗೆ ಈಗ ಒದಗಿಸಲಾರೆ. ಆದರೆ ಇದು ಜಾರಿಗೆ ಬಂದಮೇಲೆ ತಮಗೇ ತಿಳಿಯುತ್ತದೆ. ಇಲ್ಲಿ ಅಧಿಕಾರಿಗಳಿಗೆ ವೈಯಕ್ತಿಕವಾದಂಥ ತೀರ್ಮಾನಕ್ಕೆ ಬರಲು, ವ್ಯಕ್ತಿಗತವಾದಂಥ ತೀರ್ಮಾನಕ್ಕೆ ಬರಲು ಅವಕಾಶ ಕೊಟ್ಟಿರುವುದರಿಂದ ನಾಳೆ ಇದರ ಪರಿಸ್ಥಿತಿ ಏನಾಗುತ್ತದೆಂಬುದನ್ನು ನೆನೆದುಕೊಳ್ಳುವುದಕ್ಕೇ ಭಯವಾಗುತ್ತದೆ. ಇಷ್ಟೊಂದು ಪ್ರಮಾಣದಲ್ಲಿ ಕಂದಾಯ ಕೊಡಬೇಕಾಗುತ್ತದೆ. ಇದರ ಬದಲು ಬಾಡಿಗೆ ಮನೆಯಲ್ಲಿಯೇ ನಿರಾಂತಕವಾಗಿರಬಹುದು. ಏಕೆಂದರೆ ೨೦೦ ರೂ. ಬಾಡಿಗೆ ಕೊಟ್ಟರೆ ಅಷ್ಟೇ ಕಂದಾಯ ಬೀಳುವುದರಿಂದ ಮನೆ ಮಾಲೀಕನೂ ಸುಮ್ಮನಿರುತ್ತಾನೆ. ಆದರೆ ಯಾರಾದರು ಸ್ವಂತ

ಮನೆಯಲ್ಲಿ ವಾಸ ಮಾಡುತ್ತಿದ್ದರೆ ಆಗ ಈ ಒಂದು ಮಾರ್ಕೆಟ್ ಬೆಲೆ ಪ್ರಕಾರ ಕಂದಾಯ ಕೊಡಬೇಕಾಗಿ ಬರುತ್ತದೆ. ಎಷ್ಟು ಕೊಡಬೇಕಾಗಿ ಬರುತ್ತದೆಂಬುದನ್ನು ಲೆಕ್ಕ ಹಾಕಿದರೆ, ಅದು ಯಾವ ಮಟ್ಟಕ್ಕೆ ಹೋಗಬಹುದೆಂದರೆ, ಮಾನ್ಯ ಶಿವಣ್ಣನವರು ಹೇಳುತ್ತಿದ್ದರು, ಅದರಂತೆ ಶೇಕಡಾ ನೂರು ಅಲ್ಲ, ಇನ್ನೂರು ಅಲ್ಲ, ಐನೂರು ಅಲ್ಲ, ಏಳುನೂರು ಅಲ್ಲ, ಎಂಟುನೂರು ಅಲ್ಲ, ಸಾವಿರ ಪಟ್ಟು ಮೇಲೆ ಹೋಗುವ ಸಂದರ್ಭವಿದೆ. ಹೀಗೆ ಮಾಡುವುದು ಯಾವ ಧರ್ಮ? ಅಧಿಕಾರ ನಮ್ಮ ಕೈಗೆ ಬಂದಿದೆ ಎಂದು ಯಾವ ರೀತಿಯಾದರೂ ಮಾಡುವುದಕ್ಕಾಗುವುದಿಲ್ಲ. ಇದರ ಒಂದು ಪರಿಣಾಮ ಇಂದು ನಿಮಗೆ ಕಾಣುವುದಿಲ್ಲ. ಇನ್ನು ೬ ತಿಂಗಳ ನಂತರ ಚುನಾವಣೆ ನಡೆಯುವ ಸಂದರ್ಭದಲ್ಲಿ, ಅಷ್ಟರೊಳಗೆ ಕಾರ್ಪೊರೇಷನ್ ಅವರು ಈ ಹೊಸ ಟ್ಯಾಕ್ಸನ್ನು ಕೊಡಬೇಕೆಂದು ನೋಟಿಸ್ ಜಾರಿ ಮಾಡಿದ್ದೇ ಆದರೆ ನಾವುಗಳು ಯಾರೂ ಈ ಬೆಂಗಳೂರಿನ ದಾರಿಯೊಳಗೆ ಹೋಗುವುದಕ್ಕಾಗುವುದಿಲ್ಲ. ನೀವುಗಳೂ ಸಹ ಹೋಗುವುದಕ್ಕಾಗುವುದಿಲ್ಲ. ಒಂದಾವೇಳೆ ಹೋದರೆ ನಿಮ್ಮ ಒಂದು ಆಡಳಿತ ಸರಿಯಾಗಿಲ್ಲವೆಂದು ಹೇಳುತ್ತಾರೆ. ವಿರೋಧಪಕ್ಷದವರು ಹೋದರೆ ಆಳುವ ಪಕ್ಷದವರನ್ನು ಬಗ್ಗಿಸುವುದಕ್ಕೆ ನಿಮ್ಮ ಕೈಯಲ್ಲಿ ಆಗಲಿಲ್ಲವೆಂದು ಹೇಳುತ್ತಾರೆ. ಮಾನ್ಯ ನಾಗಣ್ಣನವರು ಹೋದರೆ, ನೀವು ಅಲ್ಲಿದ್ದು ಕೊಂಡು ಏನು ಮಾಡಿದಿರಿ ಎಂದು ಕೇಳುತ್ತಾರೆ. ನಾವು ಹೇಳಿದರೂ ಅವರು ಕೇಳಲಿಲ್ಲವೆಂದು ಅವರೇನಾದರು ಹೇಳಿದರೆ, ನೀವು ನಿಮ್ಮ ಜಾಗವನ್ನು ಬಿಟ್ಟು ಬರಬೇಕಾಗಿತ್ತು ಎಂದು ಕೇಳುತ್ತಾರೆ. ನಾವು ಪ್ರಜಾಪ್ರಭುತ್ವವನ್ನು ಬೆಳೆಸಬೇಕು. ಅದು ಒಂದು ಕ್ಷೇತ್ರ. ಆ ಕ್ಷೇತ್ರದಲ್ಲಿ ಜನಾಭಿಪ್ರಾಯ ಹೇಗಿದೆ ಅನ್ನುವುದನ್ನು ತಿಳಿದು ಮಾಡಬೇಕು.

ಶ್ರೀ ಎಸ್. ಎಂ. ಶೀರ್ನಾಳಿಚಂದ್ರಶೇಖರ್.—ಯಾವ ಜನರ ಅಭಿಪ್ರಾಯ ?

ಶ್ರೀ ಕೆ. ಪುಟ್ಟಸ್ವಾಮಿ —ಅದನ್ನು ನೀವು ಹೇಳಬೇಕು.

ಶ್ರೀ ಎಸ್. ಎಂ. ಶೀರ್ನಾಳಿಚಂದ್ರಶೇಖರ್.—ನನ್ನ ಭಾಷಣದಲ್ಲಿ ಹೇಳುತ್ತೇನೆ.

ಶ್ರೀ ಕೆ. ಪುಟ್ಟಸ್ವಾಮಿ.—ನಮ್ಮ ಅಭಿಪ್ರಾಯಕ್ಕೆ ಯಾರು ಮಾರುಧ್ವನಿ ಕೊಡುತ್ತಾರೋ ಅಂತಹ ಜನರ ಅಭಿಪ್ರಾಯವನ್ನಲ್ಲ, ಯಾರು ಸುಮ್ಮನೆ ಕೂತು ಕೇಳುತ್ತಿರುತ್ತಾರೋ ಅಂತಹವರ ಅಭಿಪ್ರಾಯವನ್ನು ನಾವು ತಿಳಿದುಕೊಳ್ಳಬೇಕು. ಈ ಕಾನೂನನ್ನು ನಾಳೆ ಮೈಸೂರಿನಲ್ಲಿ ಮತ್ತು ಬೆಳಗಾಂನಲ್ಲಿ ಜಾರಿಗೆ ತಂದರೆ ಜನರು ನಮಗೆ ಕಾರ್ಪೊರೇಷನ್ ಬೇಡ, ಮುನಿಸಿಪಾಲಿಟಿಯೇ ಸಾಕು ಎಂದು ಹೇಳುತ್ತಾರೆ.

ಮಾನ್ಯ ಅಧ್ಯಕ್ಷರೇ, ಈ ಇಲಾಖೆಯ ಬಗ್ಗೆ ಕೊಟ್ಟಿರತಕ್ಕಂಥ ರಿಪೋರ್ಟಿನಲ್ಲಿ ಏನು ಅಂಕಿಅಂಶಗಳನ್ನು ಕೊಟ್ಟಿದ್ದಾರೆ, ಅದನ್ನೆಲ್ಲಾ ನಾನು ಈಗ ಹೇಳಲು ಹೋಗುವುದಿಲ್ಲ. ಏಕೆಂದರೆ ಅದು ಎಲ್ಲ ಮಾನ್ಯ ಸದಸ್ಯರಿಗೂ ಗೊತ್ತಿದೆ. ನಮ್ಮ ರಾಜ್ಯದಲ್ಲಿ ಸರ್ಕಾರದವರು ಇಪ್ಪೊಂದು ಪುರಸಭೆಗಳನ್ನು ರದ್ದು ಮಾಡಿ ಏನು ಆಡಳಿತ ನಡೆಸುತ್ತಿದ್ದಾರೆ, ಇವುಗಳ ಪೈಕಿ ಯಾವುದೂ ಸರಿಯಾಗಿ ನಡೆಯುತ್ತಿಲ್ಲವೆಂದು ನಾನು ನಿರ್ಭಯವಾಗಿ ಹೇಳುತ್ತೇನೆ. ಈ ರೀತಿ ಸ್ಥಳೀಯ ಸಂಸ್ಥೆಗಳ ಆಡಳಿತವನ್ನು ತಮ್ಮ ಕೈಗೆ ತೆಗೆದುಕೊಂಡು ನಡೆಸತಕ್ಕಂಥ ಪದ್ಧತಿಯನ್ನು ಈಗಲಾದರೂ ಕೈಬಿಡಿ ಮತ್ತು ತಮ್ಮ ಒಂದು ಧೋರಣೆಯನ್ನು ಮಾರ್ಪಾಡು ಮಾಡಿಕೊಳ್ಳಿ ಎಂದು ಹೇಳುತ್ತೇನೆ.

ಮಾನ್ಯ ಅಧ್ಯಕ್ಷರೇ, ಮೈಸೂರು ನಗರದಲ್ಲಿರತಕ್ಕಂಥ ನಗರಾಭಿವೃದ್ಧಿ ಸಮಿತಿಗೆ ಸಂಬಂಧಪಟ್ಟ ಬೇಡಿಕೆಯೂ ಇದರಲ್ಲಿ ಸೇರಿದೆ ಎಂದು ಈಗತಾನೆ ಮಾನ್ಯ ಮಂತ್ರಿಗಳು ಹೇಳಿದರು. ಈಗ ಸಧ್ಯದಲ್ಲಿ ಇದು ಮುಖ್ಯಮಂತ್ರಿಯವರ ನೇರವಾದ ಆಡಳಿತದಲ್ಲಿದೆ. ಮೈಸೂರು ನಗರದಲ್ಲಿ ಕೃಷ್ಣರಾಜೇಂದ್ರ ಸರ್ಕಲ್‌ನಿಂದ ಜಿಲ್ಲಾಧಿಕಾರಿಯವರ ಕಛೇರಿವರೆಗೆ ಒಂದು ನೇರವಾದ ರಸ್ತೆ ಮಾಡುವ ಕೆಲಸ ನಡೆದಿದೆ. ಇದು ಪ್ರಾರಂಭವಾಗಿದ್ದು ೧೯೩೭–೩೮ನೇ ಸಾಲಿನಲ್ಲಿ. ಒಂದನೇ ಹಂತದ ಕೆಲಸ, ಎರಡನೇ ಹಂತದ ಕೆಲಸ ಮುಗಿದು ಈಗ ಮೂರನೇ ಹಂತದಲ್ಲಿದೆ. ನಾಲ್ಕನೇ ಹಂತಕ್ಕೆ ಹೋಗಬೇಕಾಗಿದೆ. ೫ನೇ ಹಂತದ ಕೆಲಸಕ್ಕೆ ಎಷ್ಟು ಹಣ ಮಂಜೂರಾಗಿದೆ ಎಂಬುದನ್ನು ಇಲ್ಲಿ ಕೊಟ್ಟಿದ್ದಾರೆ. ಇದು ೫೫ ಅಡಿ ರಸ್ತೆ. ಈ ರಸ್ತೆಯ ಎರಡೂ ಕಡೆಗಳಲ್ಲಿ ಅಂಗಡಿಗಳನ್ನು ಕಟ್ಟಿಸಲಾಗುತ್ತದೆ. ಹಿಂದೆ ದಿವಂಗತ ಸುಬ್ರಹ್ಮಣ್ಯಂ ಅವರು ಸಚಿವರಾಗಿದ್ದಾಗ ಅವರು ಸ್ಥಳ ಪರಿಶೀಲನೆ ಮಾಡಿ ಒಂದು ಆರ್ಡರ್ ಮಾಡಿದ್ದರು. ಏನೆಂದರೆ ಈ ರಸ್ತೆಯಿಂದ ಯಾರು ಯಾರು ತಮ್ಮ ಮನೆಗಳನ್ನು ಕಳೆದುಕೊಳ್ಳುತ್ತಾರೆ ಅಂತಹವರಿಗೆ ಈ

ಅಂಗಡಿಗಳನ್ನು ಕೊಡಬೇಕು, ಅವರು ತೆಗೆದುಕೊಳ್ಳದಿದ್ದರೆ ಬೇರೆಯವರಿಗೆ ಕೊಡಬೇಕು ಎಂದು. ಆದರೆ ಈ ಅಂಗಡಿ ನಿವೇಶನದ ಬಗ್ಗೆ ಒಂದು ರೀತಿಯ ತಿಕ್ಕಾಟ ನಡೆದಿದೆ. ಈ ಬಗ್ಗೆ ಸರ್ಕಾರಕ್ಕೆ ಒಂದಲ್ಲ ಎರಡಲ್ಲ, ಹಲವಾರು ಸಲ ದೂರುಗಳು ಬಂದಿವೆ.

ಒಂದು ಹಂತ ಮುಗಿದರೆ, ಈ ಒಂದು ಹಂತಕ್ಕೂ ಬಹಳ ದಿವಸದಲ್ಲಿ ಮುಗಿಯಿತು. ೨-೩ನೇ ಹಂತಗಳು ಮುಗಿದರೂ ಸಾಮಾನ್ಯವಾದಂಥ ನೀತಿ ಏನು? ರಸ್ತೆ ಮಾಡಿ ಅಂಗಡಿ ನಿವೇಶನಗಳನ್ನು ಮಾಡಬೇಕೆಂದು ಕದ್ದುಬಸ್ತು ಹಾಕಿದರು. ಇದಕ್ಕೆ ಒಂದು ಪ್ರಿನ್ಸಿಪಲ್ ಇಟ್ಟುಕೊಂಡು ಅರ್ಜಿಗಳನು ಕರೆದು ಅದಕ್ಕೆ ಅರ್ಹರಾದಂಥವರಿಗೆ ಇವುಗಳನ್ನು ಕೊಡುವುದು. ಈಗ ಮಾಡಿರುವ ರೀತಿಯನ್ನು ನೋಡಿದರೆ ನಾವು ಅದನ್ನು ಪ್ರಶ್ನೆ ಮಾಡಬೇಕಾಗುತ್ತದೆ. ನನಗೆ ತಿಳಿದಂತೆ ಅಲ್ಲಿ ಸೈಟುಗಳನ್ನು ಹಲವರಿಗೆ ಕೊಡಲಾಗಿದೆ. ಇದು ಏನೋ ಎಂತೋ ವಿಚಾರ ಮಾಡಿ ಕ್ರಮ ಏನು ಅದರ ಮೇಲೆ ತೆಗೆದುಕೊಳ್ಳುವುದಕ್ಕೆ ಸಾಧ್ಯವಾಗಿದೆ ಎನ್ನುವುದನ್ನು ಸ್ವಲ್ಪ ತಿಳಿಸುವುದಕ್ಕಾಗುತ್ತದೆಯೇ? ಈ ರಸ್ತೆಗೆ ಮಾನ್ಯ ದೇವರಾಜ ಅರಸ್ ಅವರ ಹೆಸರಿನಲ್ಲಿ ಇಡಲಾಗಿದೆ. ಮಾನ್ಯ ಮುಖ್ಯ ಮಂತ್ರಿಗಳ ಹೆಸರಿನಲ್ಲಿ ಮೈಸೂರಿನಲ್ಲಿ ದೊಡ್ಡದೊಡ್ಡ ಬಡಾವಣೆಗಳನ್ನು ಮಾಡಿದರೂ ನನಗೇನೂ ಚಿಂತೆಯಿಲ್ಲ. ಆದರೆ ನನ್ನ ಒಂದು ಅಭಿಪ್ರಾಯ ಮಾತ್ರ ಖಚಿತ. ಯಾರು ಎಷ್ಟೇ ದೊಡ್ಡವರಾಗಿರಲೀ ಅವರಿಗೆ ಅರ್ಹತೆ ಇದ್ದರೂ, ಅವರು ಅಧಿಕಾರದಲ್ಲಿರುವಾಗ ಅವರ ಹೆಸರನ್ನು ಈ ರೀತಿಯಾಗಿ ಕೊಡುವುದಕ್ಕೆ ಹೋಗುವುದು ಸರಿಯಾದ ಕ್ರಮವಲ್ಲ. ಬಹುಶಃ ಮಾನ್ಯ ಮುಖ್ಯಮಂತ್ರಿಯವರೂ ಕೂಡ ಇದನ್ನು ಒಪ್ಪುತ್ತಾರೆ. ಈ ರಸ್ತೆಯಲ್ಲಿ ಮಾನ್ಯ ಜಯಚಾಮರಾಜೇಂದ್ರ ಒಡೆಯರ್ ಅವರ ಪ್ರತಿಮೆಯನ್ನು ಇಡಬೇಕೆಂದಿತು. ಈಗಾಗಲೇ ಅಲ್ಲಿ ಕೃಷ್ಣರಾಜೇಂದ್ರ ಒಡೆಯರ ಪ್ರತಿಮೆ ಇದೆ. ಜಯಚಾಮರಾಜೇಂದ್ರ ಒಡೆಯರ ಹೆಸರನ್ನು ಇದಕ್ಕೆ ಇಡಬೇಕೆಂದು ಯೋಚನೆ ಮಾಡಲಾಗಿತ್ತು. ಆದರೆ ಇಲ್ಲಿಗೆ ಮಾನ್ಯ ಮುಖ್ಯಮಂತ್ರಿಯವರ ಹೆಸರು ಹೇಗೆ ಬಂತು. ಇದನು ಯಾರು ಮಾಡಿದರು. ಅಲ್ಲಿ ಪುರಸಭೆ ಇದೆಯೇ ? ಹೆಸರಿಡುವಂಥ ಅಧಿಕಾರ ಇರುವುದು ಪುರಸಭೆಗೆ. ಇದಾದರೂ ಸರಕಾರಕ್ಕೆ ತಿಳಿದಿದೆಯೇ? ಎಂದು ನಾನು ಕೇಳುತ್ತೇನೆ. ನೀವೇ ನೇಮಕ ಮಾಡಿರತಕ್ಕ ನಗರಾಭಿವೃದ್ಧಿ ಸಮಿತಿ ಇದೆ. ನೀವೇ ನೇಮಕ ಮಾಡಿರತಕ್ಕ ಸದಸ್ಯರುಗಳನ್ನು ಒಗಗೊಂಡ ಸಮಿತಿಯವರು ನಗರದ ಮಧ್ಯ ಭಾಗದಲ್ಲಿರತಕ್ಕ ಈ ರಸ್ತೆಗೆ ಈ ರೀತಿಯಾಗಿ ಹೆಸರನ್ನು ಇಡುವುದಕ್ಕೆ ಏನು ಅಧಿಕಾರ ಇದೆ ? ಇಷ್ಟಾದರೂ ತಮಗೆ ಗೊತ್ತಾಗುತ್ತದೆಯೇ ನಾನು ವೈಯಕ್ತಿಕವಾದಂತ ವಿಚಾರಗಳನ್ನು ಪ್ರಸ್ತಾಪ ಮಾಡುವುದು ಬಹಳ ಅಪರೂಪ. ಆದರೆ ಇದು ಒಂದು ತತ್ವದ ಹಿನ್ನಲೆಯನ್ನೊಳಗೊಂಡಿರುವುದರಿಂದ ಮಾಡಬೇಕಾಗಿದೆ. ಮೈಸೂರಿನಲ್ಲಿ ದೊಡ್ಡ ಬಡಾವಣೆಗಳನ್ನು ಮಾಡುತ್ತಿದ್ದಾರೆ. ಮಾನ್ಯ ಮಂತ್ರಿಯವರ ಹೆಸರನ್ನು ಇಟ್ಟಿದ್ದರೆ ನನ್ನ ಆಕ್ಷೇಪಣೆ ಏನೂ ಇರುತ್ತಿರಲಿಲ್ಲ ಮೈಸೂರು ನಗರಕ್ಕೆ ಸೇವೆ ಸಲ್ಲಿಸಿರತಕ್ಕ ದೊಡ್ಡವರ ಹೆಸರನ್ನು ಈ ರಸ್ತೆಗೆ ಸೂಚನೆ ಮಾಡಿಲ್ಲ. ಇದು ತಮಗೆ ಗೊತ್ತಿರುವ ವಿಚಾರ. ಅಲ್ಲಿದ್ದಂಥ ಮಾನ್ಯ ಮರಿಯಪ್ಪನವರು ನಗರಸಭೆಗೆ ಹಲವಾರು ವರ್ಷಗಳಿಂದ ಸದಸ್ಯರಾಗಿದ್ದರು. ಹಳೆಯ ಮೈಸೂರು ರಾಜ್ಯದ ಲೆಜಿಸ್ಲೇಟೀವ್ ಕೌನ್ಸಿಲ್‌ನ ಉಪಾಧ್ಯಕ್ಷರಾಗಿದ್ದರು, ಅವರು ಸಲ್ಲಿಸಿರತಕ್ಕ ಸೇವೆ ಅಪಾರವಾದುದು. ಅದನ್ನು ನಾನು ತುಂಬಾ ಅಭಿಮಾನದಿಂದ ನೆನೆದುಕೊಳ್ಳುತ್ತೇನೆ. ಹಾಗೆಯೇ ಮಾನ್ಯ ದಾಸಪ್ಪನವರು. ಇನ್ನೂ ಅನೇಕರು ಇದ್ದಾರೆ. ಅವರ ಯಾರ ಹೆಸರೂ ಇವರಿಗೆ ಹಾಕಲು ಗೊತ್ತಾಗಿಲ್ಲ. ಇದಕ್ಕೆ ನಾನು ಏನು ಹೇಳಬೇಕು ತಾವು ಬೇಕಾದರೆ ತಮ್ಮ ನಗರಾಭಿವೃದ್ಧಿ ಸಮಿತಿಯ ಅಧ್ಯಕ್ಷರನ್ನು ಕೇಳಿ, ಅವರ ಅಭಿಪ್ರಾಯ ಮತ್ತು ಜನತೆಯ ಅಭಿಪ್ರಾಯ ಅಲ್ಲಿ ಏನು ಇತ್ತು ಎಂದು ತಿಳಿದುಕೊಳ್ಳಬಹುದಾಗಿತ್ತು. ನಾನು ಇನ್ನು ಹೆಚ್ಚು ಕಾಲ ಮಾತನಾಡದೆ ಇನ್ನೊಂದು ವಿಷಯವನ್ನು ಪ್ರಸ್ತಾಪಮಾಡಿ ನನ್ನ ಮಾತನ್ನು ಮುಗಿಸುತ್ತೇನೆ.

ಈ ವಿಚಾರವನ್ನು ನಾನು ಪ್ರಸ್ತಾಪ ಮಾಡದಿದ್ದರೆ ಕರ್ತವ್ಯ ಲೋಪ ಮಾಡಿದಂತಾಗುತ್ತದೆ. ನನ್ನ ದುರಾದೃಷ್ಟಕ್ಕೆ ನಾನು ಮಾನ್ಯ ಮುಖ್ಯ ಮಂತ್ರಿಯವರ ಹೆಸರನ್ನೇ ಪ್ರಸ್ತಾಪ ಮಾಡಬೇಕಾಗಿ ಬಂದಿದೆ. ಮಂಡ್ಯದಲ್ಲಿ ಜಿಲ್ಲಾ ಕಚೇರಿ ಎದುರುಗಡೆ ಇರುವ ಬಡಾವಣೆಯಲ್ಲಿ ಬಹಳ ದೊಡ್ಡ ದೊಡ್ಡ ಮನೆಗಳು ಬಂದಿವೆ. ಅದಕ್ಕೆ ಬಂದೀಗೌಡ ಬಡಾವಣೆ ಎಂದು ಕರೆಯುತ್ತಿದ್ದರು ಮಾನ್ಯ ಬಂದೀಗೌಡರು ರಾಜಕೀಯದಲ್ಲಿ ನೊಂದು ಬಹಳ ಕಷ್ಟಪಟ್ಟವರು ೧೯೩೦ರಿಂದ ಮೈಸೂರಿನ ಕಾಂಗ್ರೆಸ್ ಸಂಸ್ಥೆಯ ನಾಯಕರಾಗಿದ್ದವರು, ಅವರು ನನ್ನ ಊರಿನವರು. ಅಲ್ಲದೆ ನನ್ನ ಹತ್ತಿರದ ಬಂಧುವೂ ಹೌದು. ಮಂಡ್ಯ ಜಿಲ್ಲೆಯ ನಾಯಕರು ಬಂದೀಗೌಡ ಬಡಾವಣೆ ಎಂದು ಕರೆಯುತ್ತಿದ್ದರು. ಅದನ್ನು

ಮಾನ್ಯ ದೇವರಾಜ ಅರಸರ ಬಡಾವಣೆ ಎಂದು ಹೆಸರಿಸಿದ್ದಾರೆ. ಅವರಿಗೆ ಇನ್ನಾವ ಬಡಾವಣೆಗಳು ಇರಲಿಲ್ಲವೇ? ಆ ಜಿಲ್ಲೆಯ ಅಭಿವೃದ್ಧಿಗಾಗಿ ಅವರು ಬಹಳಷ್ಟು ಕೆಲಸ ಮಾಡಿದರು. ಅವರು ಸಲ್ಲಿಸಿರತಕ್ಕ ಸೇವೆಯನ್ನು ನೋಡಿದರೆ ನಮಗೆ ಈ ರೀತಿಯಾದುದಕ್ಕೆ ತುಂಬಾ ನೋವಾಗುತ್ತದೆ. ಅನಾವಶ್ಯಕವಾಗಿ ಯಾರೂ ಬೇರೆಯವರ ಮನಸ್ಸನ್ನು ನೋಯಿಸುವುದಕ್ಕೆ ಹೋಗಬಾರದು. ಅಧಿಕಾರದ ಹಿಂದೆ ಜನ ಓಡಾಡುತ್ತಾರೆ. ಅಧಿಕಾರ ಇಲ್ಲದಾಗ ಯಾರೂ ಕೇಳುವುದಿಲ್ಲ ಎಲ್ಲಿ ಬೆಲ್ಲ ಇದೆ ಅಲ್ಲಿ ಇರುವೆ ಬರುತ್ತವೆ. ಕಬ್ಬಿಣದ ಅಂಗಡಿಯಲ್ಲಿ ನೊಣಕ್ಕೆ ಏನು ಕೆಲಸ. ಈ ರೀತಿಯಾಗಿ ಆಗಬಾರದು. ನೀವು ಮಾಡಿದ್ದೇ ಆಖೈರು ಅಲ್ಲ ನಮ್ಮ ಕಣ್ಣೆದುರಿಗೆ ಎಷ್ಟೋ ಕೆಲಸಗಳು ಹೇಳದೆ ಕೇಳದೆ ಬದಲಾವಣೆಯಾಗುವಂಥ ಪರಿಸ್ಥಿತಿಯನ್ನು ನಾವು ನೋಡಿದ್ದೇವೆ. ನಾನು ಇದನ್ನೆಲ್ಲಾ ಹೇಳಿ ಸಭೆಯ ಕಾಲವನ್ನು ತೆಗೆದುಕೊಳ್ಳುವುದಕ್ಕೆ ಇಷ್ಟಪಡುವುದಿಲ್ಲ. ನಾನು ೨ ಗಂಟೆಗಳನ್ನು ತೆಗೆದುಕೊಂಡು ಮಾತನಾಡಿದ್ದೇನೆ. ಹಿಂದೆ ತಾವು ಯಾವರೀತಿ ಉತ್ತರ ಕೊಟ್ಟಿದ್ದೀರಿ ಎನ್ನುವುದನ್ನು ತೆಗೆದು ನೋಡಿದರೆ, ನಮಗೆ ಬೇಜಾರು ಆಗುತ್ತದೆ. ಆ ದಾಟಿಯಲ್ಲಿ ಉತ್ತರ ಕೊಡುವುದಕ್ಕೆ ಹೋಗಬೇಡಿ. ಇದನ್ನು ಹಳೆಯ ಭಾಷೆಯಲ್ಲಿ ಹೇಳುವುದಾದರೆ ಉಡಾಫೆ ಜಬಾಬು, ಈ ರೀತಿಯ ಉತ್ತರ ಕೊಡಬೇಡಿ. ತಾವು ಆ ರೀತಿಯ ಉತ್ತರ ಕೊಡುವುದಿಲ್ಲವೆಂದು ನಾನು ತಿಳಿದುಕೊಂಡಿದ್ದೇನೆ.

"Power of Government to super sede Corporation" ಇದರ ವಿಚಾರದಲ್ಲಿ ನನ್ನದೇನೂ ಅಷ್ಟು ತಕರಾರು ಇಲ್ಲ. ಸರಿಯಾಗಿ ಆಡಳಿತ ನಡೆಸದೇ ಇದ್ದಾಗ ಅದನ್ನು ತೆಗೆದುಕೊಳ್ಳಬೇಕಾಗುತ್ತದೆ. ಈ ಸಭೆಗೆ ಎಷ್ಟು ಅಧಿಕಾರ ಇರಬೇಕೋ ಅಷ್ಟೇ ಇರಬೇಕು, ಆ ಸಭೆಗೆ ಎಷ್ಟು ಅಧಿಕಾರ ಇರಬೇಕೋ ಅಷ್ಟೇ ಇರಬೇಕು, ನನ್ನ ಎದುರು ಇಲ್ಲ. ಎನ್ನುವ ಭಾವನೆ ಇರಬಾರದು,

ಶ್ರೀ ಡಿ. ಕೆ. ನಾಯ್ಕರ್.—ಆ ಭಾವನೆ ಯಾರಿಗೆ ಇದೆ ಎನ್ನುವುದನ್ನು ನಾನು ಹೇಳುತ್ತೇನೆ.

4-30 p. m.

ಶ್ರೀ ಕೆ. ಪುಟ್ಟಸ್ವಾಮಿ.—ಹೇಳಿ, ಇದರಲ್ಲಿ ಭಾಷಣ ಮಾಡುವುದಕ್ಕಿಂತ ಈ ಸೆಕ್ಷನ್‌ನ್ನು ಓದಿಬಿಡುತ್ತೇನೆ.

ಶ್ರೀ ಡಿ. ಕೆ. ನಾಯ್ಕರ್.—ಈ ಕಾನೂನು ಪಾಸ್ ಆಗುವಾಗ ಎಲ್ಲಾ ಸದಸ್ಯರು ಓದಿದ್ದಾರೆ.

ಶ್ರೀ ಕೆ. ಪುಟ್ಟಸ್ವಾಮಿ.—ಈಗ ಬೇರೆ ಅರ್ಥ ಬರಬಹುದು. ಅಗ ನಾನು ೩ ಗಂಟೆ ಮಾತನಾಡಿ ಕಂಠಶೋಷಣೆ ಮಾಡಿಕೊಂಡಿದ್ದೇನೆ.

ಶ್ರೀ ಎಂ. ಎಸ್. ಕೃಷ್ಣನ್.—ಈ ಬಿಲ್ಲು ಬಂದಾಗ ನಾವು ಸಾಕಷ್ಟು ಚರ್ಚೆ ಮಾಡಿದ್ದೇವೆ. ನಾವು ಎಷ್ಟು ಹೇಳಿದರೂ ಅವರ ಹತ್ತಿರ ಸ್ಟಾಕ್ ಉತ್ತರ ಇರುತ್ತದೆ. ಈಗ ನಿರೀಕ್ಷಣೆ ಮಾಡುವುದು ಕೂಡ ಸ್ಟಾಕ್ ಉತ್ತರವೇ.

ಶ್ರೀ ಕೆ. ಪುಟ್ಟಸ್ವಾಮಿ.—ನಾನು ಮೊದಲೇ ಹೇಳಿದ ಹಾಗೆ ನಮ್ಮ ಮಾಲೀಕರು ಹೊರಗಡೆ ಇದ್ದಾರಲ್ಲ ಅವರಿಗೆ ಗೊತ್ತಾಗಲಿ. ೧೦ ಸಾರಿ ಹೇಳಿದರೂ ಇನ್ನೊಂದು ಸಾರಿ ಹೇಳುವುದಿಲ್ಲವೇ, ಹಾಗೆ ಹೇಳೋಣ.

"Government's power to appoint an officer to take action in default, at the expense of Corporation,—(1) If within the period fixed by an order issued under section 96 any action directed under that section has not been duly taken, the Government may, by order—"

ಒಂದು ಕಾರ್ಪೊರೇಷನ್ ಕಮಿಟಿ ಮುಂದೆ ಒಂದು ಸಬ್ಜೆಕ್ಟ್ ಇದ್ದರೆ ಅದು ಅದರ ಅವಧಿಯಲ್ಲಿ ತೀರ್ಮಾನವಾಗದೇ ಉಳಿದರೆ ಅದನ್ನು ಸರ್ಕಾರ ನೇರವಾಗಿ ತರಿಸಿಕೊಂಡು ತಾವೇ ತೀರ್ಮಾನ ಮಾಡುವುದು, ಈ ಆರ್ಡರನ್ನು ಒಬೇ ಮಾಡದೇ ಹೋದರೆ ಅದಕ್ಕೆ ಆಫೀಸರನ್ನು ನೇಮಕ ಮಾಡಬೇಕು

"(a) appoint an officer of the Government to take the action so directed.

(b) fix the remuneration to be paid to him, and

(c) direct that such remuneration and the cost of taking such action shall be defrayed out of the Corporation and if necessary, that any one or more of the taxes authorised by Chapter X of this Act shall be levied or increased but not so as to exceed any maximum laid down in this Act.

(2) For the purpose of taking action directed as aforesaid, the officer appointed under sub-section (1) shall have power to make such contracts as are necessary and may exercise any of powers conferred on any municipal authority by or under this Act and specified in this behalf in the order issued under sub-section (1) and shall be entitled to protection under this Act as if he were a municipal authority.

(3) Government may, in addition to or instead of directing the leavy or increase of any of the said taxes, direct by notification that any sum or money which may in their opinion be required for giving effect to their orders be borrowed by debenture and on the security of all or any of the said taxes at such rate of interest and upon such terms as to the time of re-payment and otherwise as may be specified in the notification.

(4) The provisions of sections 154 to 165 shall, as far as may be, apply to any loan raised in pursuance of this section."

ಅವರು ಕರ್ತವ್ಯ ಲೋಪ ಮಾಡಿದರೆ, ಕರ್ತವ್ಯಚ್ಯುತಿಯಾಗಿದ್ದರೆ, ಅಪರಾಧ ಮಾಡಿದರೆ, ಸೂಪರ್‌ಸೀಡ್ ಮಾಡಿ ನೀವು ಅದನ್ನು ವಶಕ್ಕೆ ತೆಗೆದುಕೊಳ್ಳುವುದಕ್ಕೆ ನಮ್ಮ ಆಕ್ಷೇಪಣೆ ಇಲ್ಲ. ಆದರೆ ಅವರು ಇದ್ದೂ ಇಲ್ಲದಂತೆ ಮಾಡುವುದು ಯೋಗ್ಯವಲ್ಲ. ಮನೆಗೆ ಮಾಲೀಕ ಹೆಸರಿಗೆ ಮಾತ್ರ, ಬೇರೆಯವರು ಬಂದು ಮನೆಯ ವ್ಯವಹಾರ ನಡೆಸುತ್ತಾರೆ, ಸಾಲ ತರುವುದು, ಆಸ್ತಿ ಮಾರುವುದು. ಸಂಪಾದನೆ ಮಾಡುವುದು, ಏನು ಬೇಕಾದರೂ ಮಾಡಬಹುದು ಎಂದರೆ ಅದನ್ನು ಯಾರು ಒಪ್ಪುತ್ತಾರೆ. ಈ ರೀತಿ ಆಗಬಾರದು ಅವರು ಕರ್ತವ್ಯಚ್ಯುತಿ ಮಾಡಿದರೆ, ನಿಯೋಜಿತವಾದಂಥ ಕೆಲಸವನ್ನು ಮಾಡದೇಹೋದರೆ, by all means you take over the administration and rectify the master. I have no objection. But you don't want to do that. ಇಲ್ಲಿ ನೀವು ಏನು ಮಾಡಿದ್ದೀರಿ ಎಂದರೆ, ಆ ಮೇಯರ್ ಅಲ್ಲೇ ಇರಬೇಕು. ಆ ಕಮಿಷನರ್ ಅಲ್ಲೇ ಇರಬೇಕು. ಕಮಿಟಿಗಳು ಅಲ್ಲೇ ಇರಬೇಕು. ಕಾರ್ಪೊರೇಷನ್ ಅಲ್ಲೇ ಇರಬೇಕು ಆದರೆ ಅವರಿಗೆ ಯಾರಿಗೂ ಅಧಿಕಾರವಿಲ್ಲ, ನೀವು ಏನು ಬೇಕಾದರೂ ಮಾಡಬಹುದು. ಪ್ರಜಾಪ್ರಭುತ್ವಕ್ಕನುಗುಣವಾದ ಯಾವ ಸಂಸ್ಥೆಯಲ್ಲೂ ಕೂಡ ಇಂತಹ ಕಾನೂನು ಅಳವಡಿಸುವುದು ಯೋಗ್ಯವಾದುದಲ್ಲ. ಆ ರೀತಿ ನಾನು ಭಾವಿಸಿಕೊಂಡಿಲ್ಲ. ತಮ್ಮ ಭಾವನೆ ಇರಬಹುದು ಇದು ಗ್ರಂಥಸ್ಥವಾಗಿ ಯಾವ ಕಾಲಕ್ಕೂ ಜಾರಿಗೆ ಬಾರದೇ ಇರುವಂತ ಸೆಕ್ಷನ್ ಆಗಿದೆ ಈಗ ಇಲ್ಲಿ ಇರತಕ್ಕಂಥ ಸೆಕ್ಷನ್‌ಗಳು ಜಾರಿಗೆ ತರುವುದಕ್ಕೆ ಆಗದೇ ಇರುವಂತ ಸೆಕ್ಷನ್‌ಗಳು ಕೊನೆಯಲ್ಲಿ ನೀವು ಈ ಕಾರ್ಪೊರೇಷನ್ ಬಿಲ್ ತಂದು ಮೈಸೂರಿಗೂ, ಬೆಳಗಾವಿಗೂ ವರ ಕೊಟ್ಟಿದ್ದೇವೆ ಎಂದು ಹೇಳಿದರಲ್ಲಾ ಅಲ್ಲೂ ಕೂಡ ೨೦ ಪರ್ಸೆಂಟ್ ಟ್ಯಾಕ್ಸ್ ಒಂದೇ ಬರುತ್ತದೆ. ಈ ಟ್ಯಾಕ್ಸ್ ಬಂದಾಗ, ಅದರ ಹೊರೆಯನ್ನು ಹೊರುವಾಗ, ಅವರಿಗೆ ಇದುವರೆಗೆ ಬರುತ್ತಿದ್ದ ಸೌಲಭ್ಯ ತಪ್ಪಿ ಹೋದಾಗ, ಈ ಕಾರ್ಪೊರೇಷನ್‌ಗಿಂತ ನಮ್ಮ

ಮುನಿಸಿಪಾಲಿಟೀನೇ ಮೇಲಾಗಿತ್ತು ಎಂದು ಅಂದುಕೊಳ್ಳುತ್ತಾರೆ. ಈಗಲೂ ಕಾಲಮಿಂಚಿಲ್ಲ. ಈಗಲೂ ತಿದ್ದುಪಡಿ ಮಾಡುವುದಕ್ಕೆ ಅವಕಾಶವಿದೆ. ಈಗ ಚುನಾವಣೆ ಮಾಡುವುದಕ್ಕೆ ಸಂಚಿತವಾಗಿ ಇವರಲ್ಲಿ ಇನ್ನೂ ಯಾವ ಯಾವ ದೋಷಗಳಿವೆಯೋ ಅದನ್ನು ಯಾವ ಆವೇಗಕ್ಕೂ, ಉದ್ವೇಗಕ್ಕೂ ಅವಕಾಶ ಕೊಡದೆ ನಿರ್ವಿಕಾರ ಮನೋಭಾವದಿಂದ ಪುನಃ ಪರಿಶೀಲನೆ ಮಾಡಬೇಕು, ಇವರು ಮೊದಲಿಸಿ ಮಾತನಾಡಿದರು, ಇವರು ಒಂದು ಯಾವರೀತಿಯಲ್ಲಿ ಮನವರಿಕೆ ಮಾಡಿಕೊಳ್ಳಬೇಕೋ, ಆರಿಕೆ ಮಾಡಿಕೊಳ್ಳಬೇಕೋ ಆರೀತಿ ಮಾಡಿಕೊಳ್ಳಲಿಲ್ಲ, ಎನ್ನುವ ಮನೋಭಾವನೆಬಿಟ್ಟು ಈಗಲಾದರೂ ತಿದ್ದುಪಡಿಮಾಡಬೇಕು. ಮೈಸೂರು ನಗರಕ್ಕೆ ಮಾನ್ಯ ಸಚಿವರು ೩ ವರ್ಷಗಳ ಹಿಂದೆ ಬಂದಿದ್ದಾರೆ ಅನೇಕ ಸಾರಿ ಬಂದಿದ್ದಾರೆ ಅವರಿಗೆ ಸ್ವಾಗತವಿದೆ. ೩ ವರ್ಷಕ್ಕೆ ಹಿಂದೆ ಈ ಮಸೂದೆ ಈ ಸಭೆಯ ಮುಂದೆ ಬರುವುದಕ್ಕೆ ಮುಂಚೆ ಮಾನ್ಯ ಮಂತ್ರಿಗಳು ಅಲ್ಲಿಗೆ ಬಂದಿದ್ದಾಗ, ಅಲ್ಲಿ ಕೆಲವು ಜನ ಆಸಕ್ತ ಸದಸ್ಯರು ಇಲ್ಲಿ ಕಾರ್ಪೊರೇಷನ್ ಆಗಬೇಕು ಎನ್ನುವ ಮಾತನ್ನು ಹೇಳಿದರು. ಆಗ ನಾನು ಅಲ್ಲಿ ಇರಲಿಲ್ಲ, ನಾನು ಕಾರ್ಪೊರೇಷನ್ ಸೆಕ್ಷನ್‌ನ್ನು ಮೈಸೂರಿಗೆ ಮಾಡಿಬಿಡಬೇಕು ಎಂದು ಇದ್ದೇನೆ, ಒಂದು ಉನ್ನತದರ್ಜೆಯ ಮಟ್ಟಕ್ಕೆ ಏರಿಸಬೇಕೆಂದೂ ಇದ್ದೇನೆ ಎಲ್ಲದಕ್ಕೂ ಪುಟ್ಟಸ್ವಾಮಿಯವರೇ ಅಡ್ಡಿ, ಮಂತ್ರಿಗಳು ಹೇಳಿದ್ದಾರೆ. ಜಂಟಿ ಸಾಲದ ಸಮಿತಿಗೆ ಏಕೆ ಕಳುಹಿಸಬೇಕು ಎಂದು ಭಾವನೆ ವ್ಯಕ್ತಪಡಿಸಿದರು. ಇಷ್ಟೊಂದು ಸಮಗ್ರವಾದ ದೊಡ್ಡ ಕಾನೂನನ್ನು ಮಾಡುವಾಗ ವಿಧಾನ ಸಭೆ ವಿಧಾನ ಪರಿಷತ್ತಿನ ಜಂಟಿ ಸಲಹಾ ಸಮಿತಿಯ ಪರಿಶೀಲನೆಗೆ ಒಳಪಡಿಸಿದ ಕಾನೂನು ಮಾಡಿಲ್ಲ, ಅವರಿಗೆ ಪಾಪ ಅವರಿಗೆ ಇದರ ಬಗ್ಗೆ ಅನುಭವ ಇರಲಿಲ್ಲ ಎಂದು ಕಾಣುತ್ತದೆ. ಎಲ್ಲರೂ ಒಪ್ಪುತ್ತಾರೆ, ನಿಮ್ಮದೇ ತಕರಾರು ಎಂದು ಅವರು ಹೇಳಿದರು. ನಾನಂತೂ ತಕರಾರು ಮಾಡುವನೇ. ನನ್ನ ದೃಷ್ಟಿಯಲ್ಲಿ ಸಲಹಾ ಸಮಿತಿಗೆ ಹೋಗಿ ಬಂದ ಮೇಲೆ ಈ ಸಭೆಯ ಎಲ್ಲಾ ಭಾಗದ ಸದಸ್ಯರ ಒಪ್ಪಿಗೆ ಪಡೆಯತಕ್ಕಂಥ ಕಾನೂನು ಆಗಲಿಲ್ಲವಲ್ಲ ಎಂದು ನನಗೆ ವ್ಯಸನವಾಗುತ್ತದೆ. ಇವತ್ತು ಕಾರ್ಪೊರೇಷನ್ ಮಾಡುವಂತ ಒಂದು ನೆಪದಲ್ಲಿ, ಕಾರ್ಪೊರೇಷನ್ ಆಗತಕ್ಕಂಥ ಭಾಗಗಳಲ್ಲಿ ಬರುತ್ತಾ ಇದ್ದಂಥ ಸೌಲಭ್ಯಗಳನ್ನು ಮೊಟಕುಮಾಡಿ ಅಲ್ಲಿನ ಜನಗಳ ತೆರಿಗೆಯನ್ನು ಹೆಚ್ಚಿಸುವುದರಿಂದ, ಅವರು ಯಾವ ಸೌಲಭ್ಯವೂ ಇಲ್ಲದೆ ತೆರಿಗೆಯ ಹೊರೆಯನ್ನು ಹೊತ್ತು ಬಳಲಬೇಕಾದ ಪರಿಸ್ಥಿತಿ ಬಂದಿದೆ.

ಆದ್ದರಿಂದ ಅದಕ್ಕೆ ಸಂಬಂಧಪಟ್ಟ ಸೆಕ್ಷನ್‌ಗಳನ್ನಾದರೂ ತಾವು ಬಗಲಾವಣೆ ಮಾಡಿ ನಂತರ ಚುನಾವಣೆ ಮಾಡಿ. ಕರ್ನಾಟಕ ರಾಜ್ಯದಲ್ಲಿ ಬೆಂಗಳೂರು ಮತ್ತು ಹುಬ್ಬಳ್ಳಿ-ಧಾರವಾಡಗಳಲ್ಲಿರತಕ್ಕ ಎರಡೇ ಕಾರ್ಪೊರೇಷನ್‌ಗಳಲ್ಲ. ನಾವು ಅಷ್ಟೇ ಮಟ್ಟಕ್ಕೆ ಬರುತ್ತಾ ಇಲ್ಲ. ಮೈಸೂರು, ಬೆಂಗಳೂರು, ಹುಬ್ಬಳ್ಳಿ-ಧಾರವಾಡಗಳ ಜೊತೆಗೆ ಇನ್ನೂ ಬೆಳಗಾಂ, ಮಂಗಳೂರುಗಳಲ್ಲಿಯೂ ಸಹ ಶೀಘ್ರವಾಗಿ ಅದು ಬರಲಿದೆ. ಬಹುಶಃ ಅದು ಶಿವಮೊಗ್ಗದಲ್ಲಿಯೂ ಕೂಡ ಬರುತ್ತದೆ. ಬೆಂಗಳೂರು, ಧಾರವಾಡ-ಹುಬ್ಬಳ್ಳಿ ಹೀಗೆ ಎರಡು ಕಾರ್ಪೊರೇಷನ್‌ಗಳು ಆಗಿರುವಾಗ ಹರಿಹರ-ದಾವಣಗೆರೆಯಲ್ಲಿಯೂ ಏಕೆ ಕಾರ್ಪೊರೇಷನ್ ಮಾಡಬಾರದು ? ಸ್ಥಳೀಯ ಸಂಸ್ಥೆಗಳಲ್ಲಿ ಪ್ರತಿನಿಧಿಗಳಾಗಿ ಬರುವವರ ವಿಷಯದಲ್ಲಿ ನಿಮಗಿರತಕ್ಕ ಅಪನಂಬಿಕೆಯನ್ನು ಕೂಡಲೇ ತಾವು ಬಿಡಬೇಕು.

ಶ್ರೀ ಡಿ. ಕೆ. ನಾಯ್ಕರ್.—ಅಲ್ಲಿಗೆ ತಮ್ಮ ಅಭಿಪ್ರಾಯದ ಪ್ರಕಾರ ಮೈಸೂರಿನಲ್ಲಿ ಅದನ್ನು ಮಾಡಬಾರದಾಗಿತ್ತೇ ?

ಶ್ರೀ ಕೆ. ಪುಟ್ಟಸ್ವಾಮಿ.—ನಿಮಗೆ ಅಷ್ಟೇ ಗೊತ್ತಿರುವುದು ನಾನು ಅದಕ್ಕೆಲ್ಲಾ ಅಡ್ಡಿ ಬರುತ್ತೇನೆ ಆಕ್ಷೇಪಣೆ ಮಾಡುತ್ತೇನೆಂದಲ್ಲ. ಮೈಸೂರು ಒಂದೇ ಅಲ್ಲ, ಬೆಳಗಾಂ ಒಂದೇ ಅಲ್ಲ, ಇನ್ನೂ ೨—೩ ಪಟ್ಟಣಗಳಲ್ಲಿ ಕಾರ್ಪೊರೇಷನ್ನುಗಳನ್ನು ಸರ್ಕಾರ ಮಾಡಬೇಕಾಗಿದೆ ಮೈಸೂರು ನಗರಕ್ಕೆ ಕಾರ್ಪೊರೇಷನ್ ಮಾಡುವ ಕಾಲದಲ್ಲಿ ಅದರ ಮೇಲೆ ಇಲ್ಲದೇ ಇರತಕ್ಕ ಭಾರಿ ಹೊರೆಯನ್ನು ಈಗಲೇ ಹಾಕಬೇಡಿ. ಸರ್ಕಾರದ ನೌಕರರಿಗೆ ಕೊಟ್ಟಹಾಗೆ ಕಾರ್ಪೊರೇಷನ್ ನೌಕರರಿಗೂ ತುಟ್ಟಿಭತ್ಯ ಕೊಡುವುದಕ್ಕೆ ಏರ್ಪಾಡು ಮಾಡಬೇಕು.

ಶ್ರೀ ಡಿ. ಕೆ. ನಾಯ್ಕರ್.—ಮಾನ್ಯ ಸದಸ್ಯರು ನನಗೆ ತಿಳುವಳಿಕೆ ಸ್ವಲ್ಪ ಕಡಿಮೆ ಎಂದು ಭಾವಿಸಿದರೂ ಪರವಾಇಲ್ಲ. ಕಾನೂನಿನಲ್ಲಿ ಈ ರೀತಿ ಪ್ರಾವಿಷನ್ಸ್ ಮಾಡುವಾಗ ಅವರು ಅಡ್ಡಿ ಬರುತ್ತಾರೆಂದು ನಾನು ಹೇಳಿದ್ದೇನೆಂದು ಹೇಳುತ್ತಾರೆ. ಆ ವಿಷಯ ಬೇರೆ ಆದರೆ ಕಾರ್ಪೊರೇಷನ್ ಮಾಡಬೇಕಾದಾಗ ಈ ಅಡಚಣೆ ಬರುತ್ತದೆಂದು ಅವರು ಹೇಳಿರುವುದರಿಂದ ಈಗ ಕಾರ್ಪೊರೇಷನ್ ಎಲ್ಲಿಯೂ ಮಾಡಬಾರದು ಎಂಬುದು ಅವರ ಅಭಿಪ್ರಾಯವೇ ?

ಶ್ರೀ ಕೆ. ಪುಟ್ಟಸ್ವಾಮಿ.—ಮಾನ್ಯ ಮಂತ್ರಿಗಳು ಸ್ಪಷ್ಟತೆಯನ್ನು ನನ್ನಲ್ಲಿ ಕೇಳುತ್ತಾ ಇರುವುದರಿಂದ ನಾನು ಅದರ ಬಗ್ಗೆ ಸ್ಪಷ್ಟೀಕರಣ ಹೇಳಬೇಕಾಗಿದೆ. ಮಾನ್ಯ ಸ್ನೇಹಿತರಾದಂಥ ಶ್ರೀಮಾನ್ ನಾಯ್ಕರ್‌ರವರಿಗೆ ನಾನು ಮೊದಲು ಹೇಳಿದ್ದು ಸ್ಪಷ್ಟವಾಗಲಿಲ್ಲ. ನಾನು ಈಗ ಒಂದು ವಿವೇಚನೆಗೆ ಒಳಗಾಗಿದ್ದೇನೆ. ಮೈಸೂರು ನಗರ ಕಾರ್ಪೊರೇಷನ್ ಬಹಳ ಕಾಲದ ಹಿಂದೆಯೇ ಆಗಬೇಕಾಗಿತ್ತು. ನಾನು ಮಂತ್ರಿಯಾಗಿದ್ದಾಗಲೇ ಅದಕ್ಕೆ ಬೇಕಾದಂತಹ ಕಾನೂನುಗಳ ಡ್ರಾಫ್ಟ್ ಮಾಡುವುದಕ್ಕೆ ಏರ್ಪಾಡು ಮಾಡಿದ್ದೆ. ಅದಕ್ಕೆ ಪ್ರತ್ಯೇಕ ಅಧಿಕಾರಿಗಳನ್ನೂ ಸಹ ನೇಮಿಸಲಾಗಿತ್ತು. ಶ್ರೀಮಾನ್ ಆರ್ ಎಂ ಪಾಟೀಲ್‌ರವರು ಅಧಿಕಾರದಲ್ಲಿದ್ದಾಗಲೇ ಕಾನೂನುಗಳೆಲ್ಲಾ ಡ್ರಾಫ್ಟಾಗಿ ಪ್ರಿಂಟ್ ಆಗಿತ್ತು. ಅವೆಲ್ಲವೂ ಲಾ ಡಿಪಾರ್ಟ್‌ಮೆಂಟ್‌ನಲ್ಲಿಯೇ ಇವೆ. ಬೇಕಾದರೆ ಮಾನ್ಯ ಮಂತ್ರಿಗಳು ನೋಡಲಿ.

ಶ್ರೀ ಡಿ. ಬಿ. ಕಲ್‌ಮಂಕರ್.—ಹಾಗಾದರೆ ಆಗಲೇ ಏಕೆ ಮಾಡಲಿಲ್ಲ ?

ಶ್ರೀ ಡಿ. ಕೆ. ನಾಯ್ಕರ್.—ಆಗ ಅದು ಆಗಿತ್ತು ಎಂಬುದು ಬೇಡ. ಇದರ ಬಗ್ಗೆ ಮಾನ್ಯ ಸದಸ್ಯರ ಅಭಿಪ್ರಾಯ ಏನೆಂಬುದನ್ನು ಹೇಳಲಿ.

ಶ್ರೀ ಕೆ. ಪುಟ್ಟಸ್ವಾಮಿ.—ಮಾನ್ಯ ಶ್ರೀ ಕಲಮಂಕರ್ ಅವರು ಏನು ಹೇಳಿದರೋ ಅದು ನನಗೆ ಸ್ಪಷ್ಟವಾಗಲಿಲ್ಲ. ಅದಕ್ಕೆ ಬೇರೆ ಸಮಯದಲ್ಲಿ ಉತ್ತರ ಹೇಳುತ್ತೇನೆ. ನಾನು ಅಡ್ಡಗೋಡೆ ಮೇಲೆ ದೀಪವಿಟ್ಟು ಆ ಕಡೆಗೂ ಕಾಣಬೇಕು, ಈ ಕಡೆಗೂ ಕಾಣಬೇಕು ಎನ್ನುವ ಭಾವನೆಯಿಂದ ನಾನು ಮಾತನಾಡುತ್ತಿಲ್ಲ, ಇದು ನನ್ನ ಸ್ಪಷ್ಟ ಅಭಿಪ್ರಾಯ. ಮೈಸೂರು ನಗರಕ್ಕೆ ಕಾರ್ಪೊರೇಷನ್ ಬಹಳ ಹಿಂದೆಯೇ ಆಗಬೇಕಾಗಿತ್ತು, ಬಹಳ ನಿಧಾನವಾದರೂ ಈಗಲಾದರೂ ಆಯಿತು, ಸಂತೋಷ. ಇದು ಆಗುವ ಕಾಲದಲ್ಲಿ ಇದಕ್ಕೆ ಇರತಕ್ಕ ತೊಂದರೆಗಳನ್ನು ಸರ್ಕಾರ ನಿವಾರಣೆ ಮಾಡಬೇಕಾಗಿತ್ತು. ಆದರೆ ಆ ರೀತಿ ಮಾಡದೆ ಅದರ ಮೇಲೆ ಇಲ್ಲದ ಸಲ್ಲದ ಹೊರೆಗಳನ್ನು ಹೊರಿಸಬಾರದೆಂದು ನಾನು ಮೊದಲೇ ಹೇಳಿದ್ದೆ. ೧೩.೨ ಲಕ್ಷ ರೂಪಾಯಿಗಳಷ್ಟು ತುಟ್ಟಿಭತ್ಯವನ್ನು ಸಹಾಯಧನವನ್ನಾಗಿ ಪುರಸಭೆಗಳಿಗೆ ಕೊಡಿ. ಆ ರೀತಿ ಮೈಸೂರು ನಗರಕ್ಕೂ ಕೊಡಿ, ಬೆಳಗಾಂಗೂ ಕೊಡಿ. ಇದು ಸರ್ಕಾರದ ಕೈಯ್ಯಲ್ಲಿದೆ. ಅದನ್ನೇ ನಾನು ಈಗ ಸರ್ಕಾರವನ್ನು ಕೇಳುತ್ತಾ ಇರುವುದು. ಶೇಕಡ ೨೦ ಭಾಗಕ್ಕಿಂತ ಕಡಿಮೆ ಕಂದಾಯ ಹಾಕಬಾರದೆಂಬ ವಾದವನ್ನು ನೀವು ಬಿಡಿ ಏಕೆಂದರೆ ಅಲ್ಲಿಂದ ಮುಂದೆ ಆರಿಸಿಬರತಕ್ಕ ಪ್ರತಿನಿಧಿಗಳೇ ಅವರವರ ನಗರಗಳಿಗೆ ಎಷ್ಟರಮಟ್ಟಿಗೆ ಕಂದಾಯ ಹಾಕಬೇಕೆಂಬ ವಿವೇಚನೆಯನ್ನು ಇಟ್ಟುಕೊಳ್ಳುತ್ತಾರೆ. ಈ ವಿಚಾರದಲ್ಲಿ ಮಂಚನೆ ಆಗುತ್ತಿದೆಯೆಂದು ನಾನು ಹೇಳಬೇಕಾಗಿದೆ.

ಮಾನ್ಯ ಅರ್ಥಸಚಿವರು ದೀರ್ಘವಾಗಿ ಮಾತನಾಡುತ್ತಾ ಪ್ರೊಫೆಷನಲ್ ಟ್ಯಾಕ್ಸ್ ವೃತ್ತಿ ತೆರಿಗೆಯಲ್ಲಿ ರಿಲೀಫ್ ಕೊಡುತ್ತೇವೆಂದು ಹೇಳಿದರು. ಪುರಸಭೆ ಹಾಗೂ ಕಾರ್ಪೊರೇಷನ್ನಿನ ಮೂಲ ವರಮಾನವನ್ನೇ ತೆಗೆದುಕೊಂಡಿದ್ದಾರೆ. ವೃತ್ತಿ ತೆರಿಗೆ ಏನಿದೆಯೋ ಅದು ನಾಗರೀಕರಿಗನುಕೂಲಕ್ಕಾಗಿ ನಗರಸಭೆಯ ಉತ್ಪಾದನಾ ಮೂಲ. ಪೌರಸಭೆಗಳ ವರಮಾನ ಮೂಲವನ್ನು ಸರ್ಕಾರ ಕಸಿದುಕೊಂಡಿದೆ. ಇದಲ್ಲದೆ ಈಗ ಅಡ್ವರ್‌ಟೈಜ್‌ಮೆಂಟ್ ಚಾರ್ಜಸ್‌ನಿಂದ ಬರತಕ್ಕ ವರಮಾನ ಮೂಲವನ್ನು ಸರಕಾರವೇ ಕಸಿದುಕೊಳ್ಳಬಹುದು. ಇನ್ನೊಂದು ಮುಖ್ಯವಾದ ವಿಚಾರವನ್ನು ಪ್ರಸ್ತಾಪಮಾಡಿ ನನ್ನ ಭಾಷಣವನ್ನು ಮುಗಿಸುತ್ತೇನೆ ಇದು ಎಲ್ಲಾ ಪುರಸಭೆಗಳಿಗೂ ಸಂಬಂಧಪಟ್ಟದ್ದು. ಅದಕ್ಕೆ ಎಲ್ಲಾ ಕಡೆಯೂ ಒತ್ತಡ ಇದೆ. ಅದು ಆಕ್ಟ್ರಾಯಿ ಸುಂಕ ತೆಗೆದುಹಾಕಬೇಕೆಂಬುದು ಈ ಸುಂಕ ಎಲ್ಲಾ ಪುರಸಭೆಗಳಿಗೂ ಕೂಡ ಮುಖ್ಯಾದಾಯದ ಮೂಲವೆಂದು ನನಗೆ ಗೊತ್ತಿದೆ. ನಮ್ಮ ದೇಶದ ಅನೇಕ ಭಾಗಗಳಲ್ಲಿ ಈ ಸುಂಕ ಇಲ್ಲದೇ ಇರುವ ವಿಚಾರವೂ ಸಹ ಮಾನ್ಯ ಸಚಿವರಿಗೆ ಈಗಾಗಲೇ ಗೊತ್ತಿದೆ. ಅನೇಕ ಪರಿಣತರೂ ಕೂಡ ಇದು ಓಬೀರಾಯನ ಕಾಲದ ತೆರಿಗೆ; ಆದ್ದರಿಂದ ನಾಗರೀಕರಿಗೆ ಈ ತೆರಿಗೆಯಿಂದ ಬಹಳ ಕಿರುಕುಳವಾಗುತ್ತದೆ. ಈ ತೆರಿಗೆ ಕೂಡಲೇ ಹೋಗಬೇಕೆಂಬ ಅಭಿಪ್ರಾಯಪಟ್ಟಿದ್ದಾರೆ. ೧೯೭೧ರ ಆಯವ್ಯಯ ಅಧಿವೇಶನ ಸೇರಿದಾಗ ಅಂದಿನ ಹಣಕಾಸು ಸಚಿವರು ಈ ಆಕ್ಟ್ರಾಯ್ ಸುಂಕ ತೆಗೆದುಹಾಕಬೇಕು. ಅದಕ್ಕೆ ಬದಲಾಗಿ ಪುರಸಭೆಗಳಿಗೆ ಆಗತಕ್ಕ ನಷ್ಟವನ್ನು ಬೇರೆ ರೀತಿಯಲ್ಲಿ ಭರ್ತಿ ಮಾಡಲು ಬೇರೆ ಬೇರೆ ಮೂಲಗಳನ್ನು ಒದಗಿಸಿಕೊಡುವ ಒಂದು ಪರಿಸ್ಥಿತಿಗೆ ಬಂದಿದ್ದೇವೆಂದು ಭಾಷಣ ಮಾಡಿದ್ದರೂ ಅದನ್ನು ಈಗ ತೆಗೆಯುವುದು ಬಹಳ ಕಷ್ಟವಿದೆ ಎಂಬುದು ನನಗೂ ಗೊತ್ತಿದೆ. ಇಂಡಿಯಾ ಸರ್ಕಾರದವರೂ ಸಹ ಈ ವಿಚಾರದಲ್ಲಿ ಸಹಾಯಕ್ಕೆ ಬರುತ್ತದೆಂಬ ಆಶ್ವಾಸನೆಯನ್ನು ಕೊಟ್ಟಿದ್ದಾರೆ. ಅಂತೂ ಆಕ್ಟ್ರಾಯಿ ಸುಂಕವನ್ನು ರದ್ದು ಮಾಡುವುದಕ್ಕಾಗಲಿಲ್ಲ. ನಾನು ಅದರ ಬಗ್ಗೆ ಆಪಾದನೆ ಮಾಡುತ್ತಿದ್ದೇನೆಂಬ

ಭಾವನೆ ಮಾಡಬೇಡಿ. ಇವತ್ತಾದರೂ ಧೈರ್ಯಮಾಡಿ ಅದಕ್ಕೆ ಬದಲಾದಂತಹ ಒಂದು ಮೂಲವನ್ನು ಗೊತ್ತು ಮಾಡಿಕೊಂಡು ಈ ಆಕ್ಟ್ರಾಯನ್ನು ಕೂಡಲೇ ತೆಗೆಯುವುದು ಅತ್ಯಂತಾವಶ್ಯಕ. ಇದಕ್ಕಾಗಿ ಇಷ್ಟು ಕಾಲ ವಿಳಂಬವಾಗಿದ್ದರೂ ಕೂಡ ಈಗಲಾದರೂ ಆಲೋಚನೆ ಮಾಡಿದ್ದು ಒಳ್ಳೆಯದಾಯಿತು. ಆದ್ದರಿಂದ ಈಗಲೇ ಆಕ್ಟ್ರಾಯಿ ಸುಂಕವನ್ನು ವಜಾ ಮಾಡಿ ಅದಕ್ಕೆ ಬದಲಾದಂತಹ ಆದಾಯವನ್ನು ಎಲ್ಲಾ ಪುರಸಭೆಗಳಿಗೆ ಒದಗಿಸಿಕೊಡುವುದು ಒಳ್ಳೆಯದೆಂದು ನಾನು ಅಭಿಪ್ರಾಯಪಡುತ್ತೇನೆ. ನಾನು ಇನ್ನೊಮ್ಮೆ ಮಾನ್ಯ ಸಚಿವರಲ್ಲಿ ವಿನಂತಿ ಮಾಡಿಕೊಳ್ಳುವುದೇನೆಂದರೆ ಮಾನ್ಯ ಸಚಿವರ ಮನಸ್ಸನ್ನು ನೋಯಿಸಬೇಕೆಂದು ನಾನು ಮಾತನಾಡಿದ್ದೇನೆಂದು ಅವರು ಭಾವನೆ ಮಾಡಬಾರದು. ಅದಕ್ಕೆ ಸಂಬಂಧಪಟ್ಟ ಹಾಗೆ ಆಡಳಿತವನ್ನು ನಡೆಸುವಾಗ ಯಾವ ಮನೋಭಾವನೆ ಅವರಿಗೆ ಇರಬೇಕೆಂಬ ಅಭಿಲಾಷೆಯನ್ನು ಮನಸ್ಸಿನಲ್ಲಿಟ್ಟುಕೊಂಡು ನಾನು ಭಾಷಣ ಮಾಡಿದ್ದೇನೆಯೇ ವಿನಃ ಬೇರೊಂದು ಅಭಿಪ್ರಾಯದಿಂದ ನಾನು ಭಾಷಣ ಮಾಡಿಲ್ಲ. ಯಾವ ಒಂದು ಸದ್ಭಾವನೆಯಿಂದ ಈಗ ತಿದ್ದುಪಡಿಗಳನ್ನು ಮಾಡಿದ್ದಾರೋ ಅದೇ ಒಂದು ಸದ್ಭಾವನೆಯಿಂದ ನನ್ನ ಅಭಿಪ್ರಾಯಗಳನ್ನು ಪರಿಶೀಲನೆ ಮಾಡಿ ಅದರ ಬಗ್ಗೆ ಸೂಕ್ತ ಕಾರ್ಯಕ್ರಮಗಳನ್ನು ತೆಗೆದುಕೊಳ್ಳಬೇಕೆಂದು ನಾನು ಹೇಳುತ್ತೇನೆ. ಯಾವ ರೀತಿ ಕಾರ್ಯಕ್ರಮ ತಗೆದುಕೊಳ್ಳುವುದಕ್ಕೆ ಸಾಧ್ಯ ಎಂಬುದನ್ನು ತಮ್ಮ ಉತ್ತರದಲ್ಲಿ ತಿಳಿಸಬೇಕೆಂದು ನಾನು ವಿನಂತಿ ಮಾಡಿಕೊಂಡು, ನಾನು ಇಷ್ಟು ದೀರ್ಘಕಾಲ ಮಾತನಾಡುವುದಕ್ಕೆ ಅವಕಾಶ ಮಾಡಿಕೊಟ್ಟಂತಹ ಸಭಾಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

(Mr. Deputy Speaker in the Chair)

ಶ್ರೀ ಕೆ. ಆರ್. ಶ್ರೀನಿವಾಸುಲು ನಾಯುಡು (ಶಾಂತಿನಗರ).—ಸನ್ಮಾನ್ಯ ಉಪಾಧ್ಯಕ್ಷರೇ, ಈಗ ನಮ್ಮ ಸವನದ ಮುಂದೆ ಇರತಕ್ಕಂಥ ಯೋಜನೆ; ಗೃಹನಿರ್ಮಾಣ, ಹಾಗೂ ಪೌರಾಡಳಿತ ಮಂತ್ರಿಗಳು, ತಂದಿರತಕ್ಕಂಥ ಬೇಡಿಕೆಯನ್ನು ಹೃದಯಪೂರ್ವಕವಾಗಿ ಸ್ವಾಗತಿಸುತ್ತಾ, ಎರಡು ಮಾತುಗಳನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ನಮ್ಮ ಹಿರಿಯ ನಾಯಕರಾದಂತಹ ಶ್ರೀಮಾನ್ ಪುಟ್ಟಸ್ವಾಮಿಯವರು ಅವರದೇ ಆದ ಭಾಷೆಯಲ್ಲಿ ಮತ್ತು ಶೈಲಿಯಲ್ಲಿ ಕೆಲವು ವಿಷಯಗಳನ್ನು ನಮ್ಮ ಮುಂದೆ ಇಟ್ಟರು. ಇದನ್ನು ನೋಡಿ ಮತ್ತು ಕೇಳಿ ನನಗೆ ಯಾವುದೇ ತೆರಿಗೆಯನ್ನು ಹಾಕದೆ ಸರ್ಕಾರ ನಡೆಸಲು ಸಾಧ್ಯವೇ? ಅವರು ಟ್ಯಾಕ್ಸ್ ಬಗ್ಗೆ ಮಾತನಾಡುವಾಗ, ನನಗನ್ನಿಸಿತು ಇಡೀ ಭಾರತದಲ್ಲಿ ನಮ್ಮ ಟ್ಯಾಕ್ಸ್ ಸ್ಟ್ರಕ್ಚರ್ ಏನು ಇದೆ? ಅದಕ್ಕೆಲ್ಲಾ ಬಹು ಕಡಿಮೆ ಇದೆ ಎಂದು ಹೇಳಬಹುದು. ಹಣ ವಸೂಲು ಮಾಡದೆ ಯಾವುದೇ ಟೌನ್ ಮುನಿಸಿಪಾಲಿಟಿಯಾಗಲಿ, ಅಥವಾ ಸಿಟಿ ಮುನಿಸಿಪಾಲಿಟಿಯಾಗಲಿ ಕೆಲಸಮಾಡುವುದಕ್ಕೆ ಸಾಧ್ಯವಿಲ್ಲವೆಂದು ಈ ಸಂದರ್ಭದಲ್ಲಿ ಹೇಳಬಹುದು. ಎಷ್ಟು ಜನರು; ಎಷ್ಟು ಪರ್ಸೆಂಟ್ ಟ್ಯಾಕ್ಸ್ ಕೊಡುವುದಕ್ಕೆ ಸಿದ್ಧವಾಗಿದ್ದಾರೆ? ನಮ್ಮ ಬೆಂಗಳೂರು ನಗರದಲ್ಲಿ ಸುಮಾರು ೨೪ ಲಕ್ಷ ಜನರು ವಾಸವಾಗಿ ಇದ್ದಾರೆ. ಅವರ ಅಮೆನಿಟಿಗೋಸ್ಕರ ಟ್ಯಾಕ್ಸ್ ಕೊಡಬೇಕೋ ಅಥವಾ ಬೇಡವೋ? ಟ್ಯಾಕ್ಸ್ ಸ್ಟ್ರಕ್ಚರ್ ಏನು ರೂಪಿಸಿದ್ದಾರೆ ಅದು ಹುಬ್ಬಳ್ಳಿ, ಧಾರವಾಡ, ಬೆಂಗಳೂರು, ಮೈಸೂರು ಕಾರ್ಪೊರೇಷನ್ ಗಳಿಗೆ ಅನ್ವಯಿಸುತ್ತದೆ. ಅದರ ಅನುಕೂಲ, ಅನಾನುಕೂಲತೆ ಏನು ಎಂಬುದನ್ನು ನೋಡಬೇಕು. ಉದಾಹರಣೆಗೆ ಹೇಳಬೇಕೆಂದರೆ ಮೊನ್ನೆ ಹುಬ್ಬಳ್ಳಿ ನಗರಕ್ಕೆ ಒಂದು ಗ್ಲಾಸ್ ಹೌಸ್ ಬಂತು ಎಂಬುದು ಬಹು ಸಂತೋಷಕರವಾದ ಸಂಗತಿ. ದುಡ್ಡನ್ನು ವ್ಯವಸ್ಥಿತವಾಗಿ ಖರ್ಚು ಮಾಡಬೇಕಾಗುತ್ತದೆ, ಇನ್ನು ನಮ್ಮ ಬೆಂಗಳೂರು ನಗರಕ್ಕೆ ಕಾವೇರಿಯಿಂದ ನೀರನ್ನು ತಂದದ್ದಾಯಿತು ಅದಕ್ಕೆ ಸುಮಾರು ೩೫ ಕೋಟಿ ರೂಪಾಯಿಯನ್ನು ೨೭ ತಿಂಗಳಲ್ಲಿ ಖರ್ಚು ಮಾಡಬೇಕಾಗಿ ಬಂತು; ಇನ್ನು ಹುಬ್ಬಳ್ಳಿಯಲ್ಲಿ ಮಲಪ್ರಭಾ ನೀರನ್ನು ತರುವುದಕ್ಕೆ ಬಹಳ ಪ್ರಯತ್ನ ನಡೆದಿದೆ; ಕೆಲಸ ಪ್ರಾರಂಭವಾಗಿದೆ. ಈ ಕಾರ್ಯವನ್ನು ಜಾಗ್ರತೆ ಮುಗಿಸಲು ಪ್ರಯತ್ನ ಮಾಡುತ್ತಿದ್ದಾರೆ ಇದಕ್ಕೆ ಹಣ ಬೇಡವೇ? ಮುನಿಸಿಪಲ್ ಫೈನಾನ್ಸ್ ಬಗ್ಗೆ ಕೂಲಂಕುಶವಾಗಿ ಪರಿಶೀಲಿಸಲು ಒಂದು ಶ್ರೀ ಕಾರ್ಗೆಯವರ ಸಮಿತಿಯನ್ನು ನೇಮಕ ಮಾಡಿದ್ದರು

ಶ್ರೀ ಟಿ. ಆರ್. ಶಾಮಣ್ಣ.—ಮಾನ್ಯ ಶ್ರೀ ನಾಯುಡುರವರು ಯಾವುದೇ ಟ್ಯಾಕ್ಸ್ ಕೊಡುತ್ತಿದ್ದಾರೆಯೇ ?

ಶ್ರೀ ಕೆ. ಆರ್. ಶ್ರೀನಿವಾಸುಲು ನಾಯುಡು.—ನಾನು ಇದನ್ನು ಏತಕ್ಕೆ ಹೇಳುತ್ತಿದ್ದೇನೆಂದರೆ ಯಾವುದೇ ಕೆಲಸವಾಗಬೇಕು ಎಂದರೆ, ಅದಕ್ಕೆ ಹಣ ಬೇಕೇ ಬೇಕು. ಅದಕ್ಕೆ ಹಣ ಎಲ್ಲಿಂದ ಬರಬೇಕು? ನಾನು ಟ್ಯಾಕ್ಸ್ ಕೊಡಬೇಕೆಂದರೆ, ನನಗೆ ಆಸ್ತಿ ಇದ್ದರೆ ತಾನೇ ಟ್ಯಾಕ್ಸ್ ಕೊಡುವ ಪ್ರಶ್ನೆ ಏಳುವುದು ?

ಶ್ರೀ ಎಂ. ಎಸ್. ಕೃಷ್ಣನ್.—ಈಗ ಒಂದು ಮುಖ್ಯವಾದ ಪ್ರಶ್ನೆ ಬರುತ್ತಾ ಇದೆ. ಅವರು ಟ್ಯಾಕ್ಸ್ ಕೊಡದೆ ಇದ್ದರೂ ಟ್ಯಾಕ್ಸ್ ಕೊಡುವ ಜನರಿಂದ ಅವರು ಬಂದಿದ್ದೇನೆನ್ನುವುದನ್ನು ಮರೆತಿರುವ ಹಾಗೆ ಕಾಣಿಸುತ್ತದೆ? ಟ್ಯಾಕ್ಸ್ ಕೊಡದೆ ಬೆಂಗಳೂರು ವ್ಯವಹಾರ ನಡೆಯುತ್ತಿಲ್ಲ? ಅದನ್ನು ಹೊಗಳುವುದು ಸರಿಯೇ?

ಶ್ರೀ ಕೆ. ಆರ್. ಶ್ರೀನಿವಾಸುಲು ನಾಯಿಡು.— ಪ್ರತಿ ೫ ವರ್ಷಕ್ಕೊಮ್ಮೆ ಟ್ಯಾಕ್ಸ್ ರಿವೈಷ್ ಮಾಡುವುದನ್ನು ಮರೆಯಬಾರದು. ನಮ್ಮ ಬೆಂಗಳೂರು ನಗರವನ್ನು ಗಾರ್ಡನ್ ಸಿಟಿ ಮಾಡಬೇಕೆಂದು ಎಲ್ಲರ ಬಯಕೆ ಅದು ಸಾಧ್ಯವಾದಷ್ಟು ಜಾಗ್ರತೆ ಆಗಬೇಕು. ಇನ್ನು "ಮಸ್ಕಿಟೋ ನ್ಯೂಸೆನ್ಸ್" ಅದನ್ನು ಎರಾಡಿಕೇಟ್ ಮಾಡುವುದಕ್ಕೆ ಒಂದು ಸ್ಕೀಮ್‌ನ್ನು ತೆಗೆದುಕೊಳ್ಳಬೇಕು. ಇನ್ನು ಕಾರ್ಪೊರೇಷನ್ ಹೌಸಸ್ ಎಷ್ಟು ಇವೆ. ಅಲ್ಲಿ ಯಾರು ಇದ್ದಾರೆ, ಅವರುಗಳು ಹಳೆಯ ಕಾಲದ ಬಾಡಿಗೆಯನ್ನು ಕೊಡುತ್ತಿದ್ದಾರೆ. ಇದನ್ನು ಹೆಚ್ಚಿಸುವ ರೀತಿಯನ್ನು ಯೋಚನೆ ಮಾಡಬೇಕು. ಇನ್ನು ಪೂರ್ ಕ್ಲಾಸ್ ಏನು ಇದ್ದಾರೆ ಅವರಿಗೆ ಹೌಸಿಂಗ್ ಸ್ಕೀಂನ್ನು ತೆಗೆದುಕೊಂಡು ನ್ಯಾಷನಲ್ ಸ್ಕೀಂನಲ್ಲಿ ಮನೆಗಳನ್ನು ಕಟ್ಟಲು ಹಣ ಒದಗಿಸಬೇಕು. ಇದರಲ್ಲಿ ಹೌಸಿಂಗ್ ಬೋರ್ಡ್, ಹೌಸಿಂಗ್ ಕಾರ್ಪೊರೇಷನ್, ಎಲ್.ಐ.ಸಿ. ಇನ್ನು ಅನೇಕ ಸಂಘ ಸಂಸ್ಥೆಗಳು ಇವೆ. ಇವೆಲ್ಲದರ ಮೂಲಕ ಜನರಿಗೆ ಕಡಿಮೆ ದರದಲ್ಲಿ ವಸತಿಯನ್ನು ಕಟ್ಟಲು ಹೌಸಿಂಗ್ ಹಣ ಒದಗಿಸಬೇಕು. ಇದು ನ್ಯಾಷನಲ್ ಪ್ರಾಬ್ಲಮ್ ಏನು ಇದ ಅಂದರೆ ಟೌನ್ ಪ್ಲಾನಿಂಗ್ ಮತ್ತು ರೂರಲ್ ಹೌಸಿಂಗ್ ಪ್ಲಾನ್, ಅರ್ಬನ್ ಹೌಸಿಂಗ್ ಪ್ಲಾನ್, ಎಂದು ನಾನಾ ರೀತಿಯ ಹೌಸಿಂಗ್ ಪ್ಲಾನಿಂಗ್‌ಗಳು ಇವೆ ಆದ್ದರಿಂದ ಮುನಿಸಿಪಾಲಿಟೀಸ್‌ಗಳು ಸರಿಯಾಗಿ ಕೆಲಸ ಮಾಡಬೇಕು, ಎಂದರೆ ಹೌಸ್ ಟ್ಯಾಕ್ಸನ್ನು ಹಾಕಬೇಕಾಗುತ್ತದೆ. ಅದಕ್ಕೋಸ್ಕರ ಬೇಸ್ ಮ್ಯಾಪ್ಸ್ ಗ್ರಾಮಾಂತರ ಪ್ರದೇಶಗಳಲ್ಲಿ ಆಗಲಿ, ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ.

ಅಧ್ಯಕ್ಷರೇ, ಮುನಿಸಿಪಾಲಿಟಿ ಮೇಲೆ ಹೇಳಲಿಕ್ಕೆ ಅವಕಾಶವಿದೆ. ಮಾನ್ಯ ಮಂತ್ರಿಗಳು ಗಮನಕ್ಕೆ ತಂದೇ ತರಬೇಕು. ಮುನಿಸಿಪಲ್ ಅಥಾರಿಟಿಯವರು ಮೊನ್ನೆತಾನೇ ಕೆಲವು ಜಮೀನುಗಳನ್ನು ಅಕ್ವೈರ್‌ಮಾಡಿ ಕೊಂಡಿದ್ದಾರೆ. ಅದು ಹಾರ್ಟ್ ಆಫ್ ದಿ ಸಿಟಿಯಲ್ಲಿ ಇದೆ. ಇದನ್ನು ಯುಟಿಲಿಟಿ ಬಿಲ್ಡಿಂಗ್ಸ್ ಕಟ್ಟಡದ ರೀತಿಯಲ್ಲಿ, ಸರಿಯಾಗಿ ಒಂದು ಸೌಧವನ್ನು ಕಟ್ಟಿಸಬೇಕೆಂದು ಹೇಳುತ್ತೇನೆ. ಮೆಯೋಹಾಲ್ ಅನ್ನು ಆರ್ಟ್ ಗ್ಯಾಲರಿ ಅಥವಾ ಲೈಬ್ರರಿಗೆ ಕೊಡಬೇಕೆಂದು ಹೇಳುತ್ತೇನೆ. ಈಗ ಯಾವುದು ಯುಟಿಲಿಟಿ ಬಿಲ್ಡಿಂಗ್ಸ್ ಇದೆ, ಅಲ್ಲಿ ಬಹಳ ಟ್ರಾಫಿಕ್ ಆಗಿದೆ, ಮತ್ತೆ ಟ್ರಾಫಿಕ್ ಜಾಮ್ ಆಗುತ್ತದೆ. ಆದ್ದರಿಂದ ಅಲ್ಲಿ ಒಂದು 'sub-way' ಬೇಕು ಎಂದು ಕೇಳುತ್ತೇನೆ. ಮಾನ್ಯ ಮಂತ್ರಿಗಳ ಕಾಲದಲ್ಲಿ ಕಾರ್ಪೊರೇಷನ್ ಒಂದು ಉನ್ನತ ಸ್ಥಿತಿಗೆ ಬರಲಿ ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಇನ್ನು ರಾಜ್ಯ ಯುವಜನ ಮಂತ್ರಿಗಳು ತಮ್ಮ ಬೇಡಿಕೆಯನ್ನು ಇಟ್ಟಿರುತ್ತಾರೆ. ಅವರಿಗೆ ಕೊಟ್ಟ ಹಣ ಏನೇನು ಸಾಲದು. ೪೫ ಲಕ್ಷ ಯಾವುದಕ್ಕೆ ಬರುತ್ತದೆ? ನಮಗೆ ಒಂದು ಸ್ಪೋರ್ಟ್ ಕಾಂಪ್ಲೆಕ್ಸ್ ಮಾಡಬೇಕು. ಅದಕ್ಕೆ ಈಗಿನ ರೇಸ್‌ಕೋರ್ಸ್ ಏನು ಇದೆ ಅದನ್ನು ಹೊರಗಡೆ ಹಾಕಿ, ಎಂದು ಹೇಳುತ್ತಾ, ಇದ್ದರೂ ಅದು ಇನ್ನೂ ಅಲ್ಲಿಯೇ ಇದೆ ಆದ್ದರಿಂದ ಅದರ ಜಾಗದಲ್ಲಿ "ಒಂದು ಸ್ಪೋರ್ಟ್ ಕಾಂಪ್ಲೆಕ್ಸ್" ಮತ್ತು ಒಂದು ಇಂಡೋರ್ ಸ್ಟೇಡಿಯಮ್ ಕಟ್ಟಬೇಕು. ಎಂದು ಹೇಳುತ್ತೇನೆ ನಮ್ಮ ನಗರದಲ್ಲಿ ಫುಟ್‌ಬಾಲ್ ಟೆನಿಸ್ ಮತ್ತು ಕ್ರಿಕೆಟ್ ಎಲ್ಲದಕ್ಕೂ ಸ್ಟೇಡಿಯಂಗಳು ಇದೆ ಆದರೆ ಹಾಕಿ ಸ್ಟೇಡಿಯಮ್ ಮಾತ್ರ ಇಲ್ಲ. ದಯ ಮಾಡಿ ಈ ಹಾಕಿ ಸ್ಟೇಡಿಯಂ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಅಧ್ಯಕ್ಷರೇ, ಇದು ಕೇವಲ ನಗರಕ್ಕೆ ಸೀಮಿತವಾಗಬೇಕಿಲ್ಲ. ಇದು ತಾಲ್ಲೋಕು ಮತ್ತು ಡಿಸ್ಟ್ರಿಕ್ ಮಟ್ಟದಲ್ಲೂ ಸ್ಟೇಡಿಯಂಗಳು ಬರಬೇಕು. ತಾವು ಕೇಳಿರತಕ್ಕಂಥ ಹಣ ಕೇವಲ ೪೫ ಲಕ್ಷರೂಪಾಯಿ ನಮ್ಮ ರಾಜ್ಯದ ೧೭೬ ತಾಲ್ಲೋಕುಗಳಿಗೂ ಒದಗಿಸಬೇಕೆಂದು ಹೇಳುತ್ತೇನೆ. ಅನೇಕ ಸಂದರ್ಭದಲ್ಲಿ ಹಾಕಿ ಸ್ಟೇಡಿಯಂ ಬಗ್ಗೆ ಹೇಳಿದರು, ಇಲ್ಲಿಯವರೆಗೆ ಬಂದಿಲ್ಲ. ಮೊನ್ನೆತಾನೇ ಒಂದು ಅಗ್ರಿಮೆಂಟ್ ಆಗಿದೆಯೆಂದು ಕೇಳಿದ್ದೇನೆ. ಫುಟ್‌ಬಾಲ್ ಸ್ಟೇಡಿಯಂಗೆ ೫೦ ಲಕ್ಷ ಕ್ರಿಕೆಟ್ ಸ್ಟೇಡಿಯಂಗೆ ೩೦ ಲಕ್ಷ ಸಬ್ಸಿಡಿ ಮತ್ತು ೨೦ ಲಕ್ಷ ಗ್ರ್ಯಾಂಟ್ಸ್ ಕೊಟ್ಟಿದ್ದೀರಿ ಟೆನ್ನೀಸ್‌ಗೆ ೧೬ ಲಕ್ಷ ಕೊಟ್ಟಿದ್ದೀರಿ. ಆದ್ದರಿಂದ ಕನಿಷ್ಟ ಹಾಕಿ ಸ್ಟೇಡಿಯಂಗೆ ೨೫ ಲಕ್ಷ ರೂಪಾಯಿ ಕೊಡಬೇಕೆಂದು ಹೇಳುತ್ತೇನೆ. ಇಲ್ಲಿಯವರೆಗೂ ಇದರ ಬಗ್ಗೆ ಗಮನಕೊಡದೆ ಇರುವುದನ್ನು ನೋಡಿದರೆ ಬಹಳ ವಿಷಾದವೆಂದು ಹೇಳಬೇಕಾಗಿದೆ. ಇದನ್ನು ಮಾಡರನ್ ಇಂಟರ್‌ನ್ಯಾಷನಲ್ ಸ್ಟ್ಯಾಂಡರ್ಡ್ ಮಾಡಬೇಕೆಂದು ಮಾನ್ಯ ಮಂತ್ರಿಗಳನ್ನು ಕೇಳಿಕೊಂಡು ಇದರ ಬಗ್ಗೆ ತಮ್ಮ ಉತ್ತರದಲ್ಲಿ ಕನಿಷ್ಟ ೨೫ ಲಕ್ಷ ರೂಪಾಯಿ ಕೊಡುತ್ತೇವೆಂದು ಹೇಳಬಹುದು ಎಂದು ನಂಬಿದ್ದೇನೆ.

ಇವತ್ತು ನೀವು ವೃದ್ಧಾಪ್ಯ ವೇತನವನ್ನು ಏನು ಕೊಡುತ್ತಿದ್ದೀರಿ ? ಆದರೆ ಹಾಗೆಯೇ ಈ sports men ಬಡಸ್ಪೋರ್ಟ್ಸ್‌ಮೆನ್‌ಗೆ ಪೆನ್‌ಷನ್ ಕೊಡುತ್ತಿಲ್ಲ. ಹಿಂದೆ ಫುಟ್‌ಬಾಲ್‌ನಲ್ಲಿ ಚಾಂಪಿಯನ್ ಆಗಿದ್ದಂಥವರು ನಾನು ಮೊನ್ನೆ ನೋಡಿದೆ ಮುಸ್ಸಾಗಿದ್ದರೂ ಕೂಡ, ಅವರು, ಸೈಕಲ್ ಮೇಲೆ ಹೋಗುತ್ತಿದ್ದರು. ಅವರು ಈಗ ಬಹಳ ಕಷ್ಟದಲ್ಲಿದ್ದಾರೆ. ಆದರೆ ಅವರ ಹೆಸರನ್ನು ಹೇಳುವುದಿಲ್ಲ ಅವರ ಬಗ್ಗೆ ಮೊನ್ನೆ ರೇಡಿಯೋದಲ್ಲಿಯೂ ಕೂಡ ಬಂದಿತು. ಅಂಥವರಿಗೆ ತಾವು ವೃದ್ಧಾಪ್ಯ ವೇತನವನ್ನು ಕೊಡಬೇಕು. ಈಗ ನೀವು ರಾಜಕೀಯ ವಿಶ್ರಾಂತಿ ವೇತನ, ವೃದ್ಧಾಪ್ಯ ವೇತನವೆಂದು ಏನು ಕೊಡುತ್ತಿದ್ದೀರಿ ಅದೇ ರೀತಿ ಸ್ಪೋರ್ಟ್ಸ್‌ಮೆನ್‌ಗಳಿಗೂ ವೃದ್ಧಾಪ್ಯ ವೇತನವನ್ನು ಕೊಡಬೇಕೆಂದು ಈ ಸಂದರ್ಭದಲ್ಲಿ ಹೇಳಲು ಇಷ್ಟಪಡುತ್ತೇನೆ. ಜೊತೆಗೆ ತಾವು ಕೆಲವರಿಗೆ ಏನು ಸ್ಕಾಲರ್‌ಶಿಫ್ ಎಂದು ಕೊಡುತ್ತಿದ್ದೀರಿ ಅದೇ ರೀತಿ ಸ್ಪೋರ್ಟ್ಸ್‌ಮೆನ್‌ಗಳಿಗೂ ಸ್ಕಾಲರ್ ಶಿಫ್‌ನ್ನು ಮಾನ್ಯ ಯುವಜನ ಮಂತ್ರಿಗಳವರ ಕಾಲದಲ್ಲಿ ಆಗಬೇಕೆಂದು, ಕೇಳಿಕೊಳ್ಳುತ್ತೇನೆ.

5-00 P. M.

ಇನ್ನು ಮಾನ್ಯ ಯುವಜನ ಮಂತ್ರಿಗಳವರ ಕಾಲದಲ್ಲಿ ಸದರನ್ ರೀಜನಲ್ ಸ್ಪೋರ್ಟ್ಸ್ ಕೌನ್ಸಿಲ್ ಎಂಬುದನ್ನು open ಮಾಡಿದ್ದಾರೆ, ಇದು ನಿಜವಾಗಿಯೂ ಹೆಮ್ಮೆಯ ವಿಷಯ. ಆದರೆ Karnataka Sports Councilಗೆ ೯ ಲಕ್ಷ ರೂಪಾಯಿಗಳನ್ನೇನು ಕೊಟ್ಟಿದ್ದಾರೆ ಅದು ಸಾಲದು ಅದಕ್ಕೆ ೧೫ ಲಕ್ಷ ರೂಪಾಯಿಗಳನ್ನಾದರೂ ಕೊಡಬೇಕು. All work and no play make Jark a dull Boy ಎಂದು ಹೇಳಿದ ಹಾಗೇ ಬರೀ ಆಟ ಊಟಗಳಲ್ಲಿ ಕಾಲಕಳೆಯಬಾರದು ಮತ್ತು ಇನ್ನೊಂದು ಸಂತೋಷದ ವಿಷಯವೇನೆಂದರೆ ಡಿಸ್ಟ್ರಿಕ್ಟ್ ಲೆವಲ್‌ನಲ್ಲಿ ಕೂಡ ಸ್ಪೋರ್ಟ್ಸ್ ಬಗ್ಗೆ ಹೆಚ್ಚಿನ ಪ್ರಗತಿ ಆಗುತ್ತಿರುವುದನ್ನು ನಾವು ಕಾಣುತ್ತಿದ್ದೇವೆ. ಬರೀ ಬೆಂಗಳೂರು, ಮೈಸೂರು, ಹುಬ್ಬಳ್ಳಿ-ಧಾರವಾಡಗಳಲ್ಲಿ ಅಲ್ಲದೇ ಶಿವಮೊಗ್ಗ, ಗುಲ್ಬರ್ಗ, ಬೆಳಗಾಂ ಮುಂತಾದ ಮುಖ್ಯವಾದ ಎಲ್ಲಾ ಜಿಲ್ಲೆಗಳಲ್ಲೂ ಸ್ಪೋರ್ಟ್ಸ್ ಚೆನ್ನಾಗಿ ನಡೆಯುತ್ತಿದೆ. ಫುಟ್‌ಬಾಲ್‌ನಲ್ಲಿ ಆಗಲೀ, ಕ್ರಿಕೆಟ್‌ನಲ್ಲಿ ಆಗಲೀ ಇನ್ನು ಯಾವುದರಲ್ಲಿಯೇ ಆಗಲೀ ಸ್ಪೋರ್ಟ್ಸ್‌ಮೆನ್‌ಗಳನ್ನು ಸೆಲೆಕ್ಟ್ ಮಾಡುವುದರಲ್ಲಿ ಜಾತಿ ಬೇದ, ಗುಂಪುಗಾರಿಕೆ ಇದೆ ಎಂದು ಕೇಳಿಬರುತ್ತಿದೆ; ಆದು ನಿಮ್ಮ ಕಾಲದಲ್ಲಿ ಹೋಗಬೇಕೆಂದು ಹೇಳುತ್ತೇನೆ ನನಗೆ ಇನ್ನೊಂದು ಆಶ್ಚರ್ಯವಾಗುವುದೇನೆಂದರೆ ೭ ಸಾವಿರ ಗ್ರಾಮಾಂತರ ಪ್ರದೇಶಗಳಲ್ಲಿ ಮಾತ್ರ ರೂರಲ್ ಯೂತ್ ಸೆಂಟರ್‌ಗಳನ್ನು ತೆರೆದಿದ್ದೇವೆಂದು ಹೇಳಿದ್ದೀರಿ? ಆದರೆ ನಮ್ಮ ಕರ್ನಾಟಕದಲ್ಲಿ ೨೫ ಸಾವಿರ ಗ್ರಾಮಗಳಿದ್ದು ಕೇವಲ ೭. ಸಾವಿರ ಏನೇನು ಸಾಕಾಗುವುದಿಲ್ಲ ವಾದುದರಿಂದ ಅದನ್ನು ಹೆಚ್ಚಿಸಬೇಕೆಂದು ಹೇಳಲು ಇಷ್ಟಪಡುತ್ತೇನೆ.

ಇದರ ಜೊತೆಗೆ ಲಲಿತ ಅಕಾಡಮಿ, ಸಾಹಿತ್ಯ ಅಕಾಡಮಿ ಮತ್ತು ಸಂಗಿತ, ಅಕಾಡಮಿ ಏನಿದೆ ಅವುಗಳನ್ನು ರಿಕಾನ್‌ಸ್ಟಿಟ್ಯೂಟ್ ಮಾಡಬೇಕೆಂದು ಹೇಳಲು ಬಯಸುತ್ತೇನೆ. ನಮ್ಮ ಮಾನ್ಯ ಸದಸ್ಯರಾದ ಶ್ರೀ ಕೊಣಂದೂರು ಲಿಂಗಪ್ಪನವರು ಮತ್ತು ಶ್ರೀ ಕಾಗೋಡು ತಿಮ್ಮಪ್ಪನವರು ಸಾಹಿತ್ಯದ ಮೇಲೆ ಹೆಚ್ಚು ಅಭಿಮಾನವಿರತಕ್ಕಂಥವರು. ಇವತ್ತು ನಮ್ಮ ಕರ್ನಾಟಕ ಸಾಹಿತ್ಯದ ಬಗ್ಗೆ ಹೇಳಬೇಕೆಂದು ಬಹಳ ವಿಶಾದವಾಗುತ್ತದೆ. ಹಿಂದೆ ಪುರಂದರ ದಾಸರು ೧ ಕೋಟಿ ೬೦ ಲಕ್ಷ ಪದ್ಯಗಳನ್ನು ರಚನೆ ಮಾಡಿದ್ದರು. ಆದುದರಿಂದ ಇವತ್ತು ನಾವು Just to have a spiritural force in life you should revitalise it. ಏತಕ್ಕೆ ನಾನು ಈ ಮಾತನ್ನು ಹೇಳುತ್ತೇನೆ ಎಂದರೆ Spiritural form ನಮ್ಮ ಜನಗಳಲ್ಲಿ ಸ್ಪಿರಿಚ್ಯುಯಲ್ ಫೋರ್ಸ್ ಕಡಿಮೆಯಾಗುತ್ತಿದೆ ಮತ್ತು Human valuesಗೆ ಮರ್ಯಾದೆ ಇಲ್ಲ ಇವುಗಳ ಬಗೆ ಹೆಚ್ಚು ಗಮನ ಕೊಡಬೇಕು.

ಶ್ರೀ ಕಾಗೋಡು ತಿಮ್ಮಪ್ಪ.—ಸಾಯಿಬಾಬಾರವರ ಹತ್ತಿರ ಹೋದರೆ ಸ್ಪಿರಿಚ್ಯುಯಲ್ ಫೋರ್ಸ್ ಬರುತ್ತದೆ.

ಶ್ರೀ ಕೆ. ಆರ್. ಶ್ರೀನಿವಾಸಲು ನಾಯುಡು.—ತಾವು ಏನೇ ಮಾತನಾಡಿದರೂ ನಿಮ್ಮ ಮನಸ್ಸಿನಲ್ಲಿ ಹಾಗೂ ಮನೆಯಲ್ಲಿ ಹಿಂದೂ ಧರ್ಮವನ್ನೇ ಅನುಸರಿಸುತ್ತೀರಿ. ಆದರ ಬಗ್ಗೆ ಈಗ ಚರ್ಚೆ ಬೇಡ. ಆದುದರಿಂದ ಇವತ್ತು ಲಲಿತ, ಸಾಹಿತ್ಯ ಮತ್ತು ಸಂಗೀತ ಕಲೆಗಳನ್ನು ರಿ ವೈಟಲೈಜ್ ಮಾಡಿ ಎಂದು ಹೇಳಬಯಸುತ್ತೇನೆ. ಇವತ್ತಿನ ದಿವಸ ಅನೇಕ ವಿದ್ವಾಸರು ಬಡತನದಲ್ಲಿ ಸಾಯುತ್ತಿದ್ದಾರೆ. ಕೆಲವರು ಯುವಕರಾಗಿದ್ದಾಗ ಬೇಕಾದಷ್ಟು ವೈಭವದ ಜೀವನವನ್ನು ನಡೆಸಿ, ಈಗ ಕಷ್ಟದಲ್ಲಿದ್ದಾರೆ, ಅದರ ಬಗ್ಗೆ

ನಾನು ಹೇಳುವುದಕ್ಕೆ ಇಷ್ಟಪಡುವುದಿಲ್ಲ. ಆದುದರಿಂದ ಅಂಥಾ ಎಲ್ಲಾ ಕಲಾವಿದರಿಗೂ ತಮ್ಮ ಕಾಲದಲ್ಲಿ ಹೆಚ್ಚಿನ ಧನ ಸಹಾಯ ಅವರ ಮುಪ್ಪಿನ ಕಾಲದಲ್ಲಿ ಸಿಗಬೇಕು ಅವರಿಗೂ ಪೆನ್‌ಷನ್ ಕೊಡಬೇಕೆಂದು, ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ.

ಇನ್ನು ಕರ್ನಾಟಕದಲ್ಲಿ ಯಾರು ಯಾರು ಮಹಾ ಪುರುಷರು ಹುಟ್ಟಿದರೋ ಅಂಥವರ ಹೆಸರನ್ನು ರಸ್ತೆಗಳಿಗೆ ಇಡುವುದು ಉತ್ತಮ. ಈಗ ಡೆಲ್ಲಿಯಲ್ಲಿ ರಾಜ್‌ಪತ್, ಆಜಾದ್ ಮೌಲಾನ ರಸ್ತೆ, ವಲ್ಲಭಾಯಿ ಪಟೇಲ್ ರಸ್ತೆ ಹೀಗೆ ಇಟ್ಟಿದ್ದಾರೆ ಅದೇ ರೀತಿ ನಾವು ನಮ್ಮ ಕರ್ನಾಟಕದ ಮುಖ್ಯ ರಸ್ತೆಗಳಿಗೆ, ಕರ್ನಾಟಕಕ್ಕಾಗಿ ಯಾರು ಹಗಲಿರುಳು ದುಡಿದಿದ್ದಾರೆ ಅಂಥವರ ಹೆಸರು ಮುಖ್ಯ ರಸ್ತೆಗಳಿಗೆ ಇಡುವುದು ಸರಿ ಎಂದು ಹೇಳಿ ಇಷ್ಟು ಮಾತನಾಡಲು ಅವಕಾಶಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಕೆ. ಎಂ. ನಾಗಣ್ಣ (ಚಿಕ್ಕಪೇಟೆ).—ಮಾನ್ಯ ಅಧ್ಯಕ್ಷರೇ ಬೆಂಗಳೂರು ನಗರ ಕಾರ್ಪೊರೇಷನ್ ಬಗ್ಗೆ ಮಾತನಾಡಲು ನನಗೆ ಹೆಚ್ಚಿನ ಅಧಿಕಾರವಿದೆ ಎಂದು ತಿಳಿದುಕೊಂಡಿದ್ದೇನೆ. ಏತಕ್ಕೆಂದರೆ ನನಗೆ ಈಗ ೭೫ ವರ್ಷ ವಯಸ್ಸು ಆಗಿದೆ. ೭೫ ವರ್ಷಕ್ಕಿಂತ ಮೊದಲು ಬೆಂಗಳೂರು ನಗರದಲ್ಲಿ ಯಾವ ಮನೆಯಲ್ಲಿ ನಮ್ಮ ತಂದೆತಾಯಿಗಳು ಇದ್ದರೋ ಅದೇ ಮನೆಯಲ್ಲಿ ನಾನು ಹುಟ್ಟಿದವನು. ಬೇರೆ ಊರಿನಿಂದ ಬಂದವನು ಅಲ್ಲ. ಬೆಂಗಳೂರು ನಗರದ ಮುನಿಸಿಪಲ್ ಕಚೇರಿ ೧೮೬೨ರಲ್ಲಿ ಸ್ಥಾಪನೆಯಾಯಿತು. ಅವಾಗ ಹೇಗಿತ್ತು ಎಂದರೆ ಬೆಂಗಳೂರು ನಗರವನ್ನು ೮ ಡಿವಿಜನ್‌ಗಳನ್ನಾಗಿ ವಿಂಗಡಿಸಿದ್ದರು. ಅಂದರೆ ೧ ಡಿವಿಜನ್‌ಗೆ ೩ ಜನ ಚುನಾಯಿತ ಸದಸ್ಯರು ಅಲ್ಲದೇ ಸರ್ಕಾರದವರು ಕೆಲವರನ್ನು ನಾಮಿನೇಟ್ ಮಾಡಿ ಕಳುಹಿಸುತ್ತಿದ್ದರು. ಅಂದರೆ ಒಟ್ಟು ೩೦ ಜನ ಸದಸ್ಯರು ಅಲ್ಲಿ ಇದ್ದರು. ಚುನಾಯಿತ ಸದಸ್ಯರು ಎಂದರೆ ವಯಸ್ಕರ ಮತದಾನ ಪದ್ಧತಿಯಲ್ಲ. ಕಂದಾಯದಾರರು ಮತ್ತು ಗ್ರಾಜ್ಯುಯೇಟ್ಸ್ ಅವರನ್ನು ಚುನಾಯಿತರನ್ನಾಗಿ ಮಾಡುತ್ತಿದ್ದರೇ ವಿನಹ: ಈಗಿನ ಹಾಗೆ ಗುಡಿಸಲಿನಲ್ಲಿರುವವರು, ಅವರು ಇವರೂ ಎಲ್ಲಾ ಚುನಾವಣೆಯಲ್ಲಿ ಮತದಾನ ಮಾಡುವುದಕ್ಕೆ ಅವಕಾಶವಿರಲಿಲ್ಲ. ನಾವು ಆಗ ಇದ್ದ ಮನೆಗೆ ಕಂದಾಯ ಎಷ್ಟಿತ್ತು ಎಂದರೆ ೬ ರೂಪಾಯಿಗಳು ಮಾತ್ರ ವರ್ಷಕ್ಕೊಂದು ಸಾರಿ ಕಂದಾಯವನ್ನು ವಸೂಲಿ ಮಾಡಲು ಶಾನುಭೋಗರು ಬರುತ್ತಿದ್ದರು ಆಗ ನಾವು ಅವರಿಗೆ ಬಹುಮಾನ ಏನು ಕೊಡುತ್ತಿದ್ದೆವು ಎಂದರೆ ಒಂದು ತೆಂಗಿನಕಾಯಿ ಕೊಡುತ್ತಿದ್ದೆವು. ಆಗ ಒಂದು ತೆಂಗಿನಕಾಯಿಗೆ ೮ ಕಾಸು ಬೆಲೆ. ಅದನ್ನು ಅವರು ಬಹಳ ಸಂತೋಷದಿಂದ ತೆಗೆದುಕೊಂಡು ಹೋಗುತ್ತಿದ್ದರು. ಆ ಮೇಲೆ ೧೯೧೮ನೇ ಇಸವಿಯಲ್ಲಿ ಮನೆಗಳಿಗೆ ಕೊಳಾಯಿ ಹಾಕಬೇಕಾಗಿ ಬಂದಾಗ ೧೨½ ರೂಪಾಯಿ ಕಂದಾಯ ಕೊಡುವವರಿಗೆ ಕೊಳಾಯಿ ಹಾಕಿಸಿಕೊಳ್ಳುವುದಕ್ಕೆ ಅವಕಾಶವಿತ್ತು. ಆಗ ನಾವು ಮುನಿಸಿಪಲ್ ಸದಸ್ಯರ ಹತ್ತಿರ ಹೋಗಿ ಹನ್ನೆರಡೂ ವರೆ ರೂಪಾಯಿ ಕಂದಾಯ ಕೊಡುತ್ತೇವೆ ನಮಗೂ ಕೊಳಾಯಿ ಹಾಕಿಸಿಕೊಡಿ ಎಂದು ಹಾಕಿಸಿಕೊಂಡೆವು. ಅದಕ್ಕೆ ನಾವು ಇವತ್ತು ಕಂದಾಯ ಏನು ಕೊಡುತ್ತಿದ್ದೇವೆ ಎಂದರೆ ೧೬೦ ಕೊಡುತ್ತಿದ್ದೇವೆ. ನಮ್ಮ ಮನೆಗೆ ಹಿಂದಿನ ಲೆಕ್ಕದ ಪ್ರಕಾರ ನಮ್ಮ ಶ್ರೀ ಡಿ. ಕೆ. ನಾಯ್ಕರ್‌ರವರು ಹಾಕಿರುವ ಪದ್ಧತಿಯ ಪ್ರಕಾರ ನಾವು ಈಗ ೭೦೦ ರೂಪಾಯಿ ಕೊಡಬೇಕಾಗಿ ಬರುತ್ತದೆ. ಇದು ತಪ್ಪು. ಹಿಂದಿನ ಪದ್ಧತಿ ಏನಿತ್ತು ಎಂದರೆ ಬಾಡಿಗೆ ಏನಿದೆ ಆದರ ಆಧಾರದ ಮೇಲೆ ಮತ್ತು ಸ್ವಂತ ಮನೆಯವರಿಗಾದರೆ ಸ್ವಲ್ಪ ರಿಯಾಯಿತಿ ಎಂದು ಪದ್ಧತಿ ಇತ್ತು ಆದರಂತೆ ನಡೆದುಕೊಂಡು ಬರುತ್ತಿತ್ತು.

ಆದರೆ, ಈಗ ಸ್ವಂತ ಮನೆಗಳಿಗೆ ಹೆಚ್ಚು ಕಂದಾಯವನ್ನು ಹಾಕಬೇಕೆಂದು ಮಾಡಿದ್ದಾರೆ, ೧೯೩೫ನೇ ಇಸವಿಯಲ್ಲಿ ಬೆಂಗಳೂರಿನ ನಾಲ್ಕನೇ ವಿಭಾಗದ ಸದಸ್ಯನಾಗಿ ನಾನು ಬೆಂಗಳೂರು ಮುನಿಸಿಪಾಲಿಟಿಗೆ ಮೊದಲಬಾರಿಗೆ ಚುನಾಯಿತನಾದೆ ಆಗ ನಮಗೇನೂ ಅಲ್ಲಿ ಕೆಲಸವಿರಲಿಲ್ಲ. ಈಗಿನ ಸದಸ್ಯರು ಮಧ್ಯಾಹ್ನ ಮೂರು ಗಂಟೆಯಿಂದ ಆರು ಗಂಟೆಯವರೆಗೆ ಅಧಿಕಾರಿಗಳ ಮುಂದೆ ಕುಳಿತುಕೊಂಡು ಆ ಕೆಲಸ ಈ ಕೆಲಸ ಮಾಡಿಸಿಕೊಳ್ಳುತ್ತಿರುತ್ತಾರೆ. ಆದರೆ, ಅಂದು ನಾವು ಸಭೆಯೊಳಗೆ ಜನಗಳ ಕಷ್ಟ ಸುಖಗಳನ್ನು ನಿವೇದಿಸಿಕೊಳ್ಳುತ್ತಿದ್ದೆವು. ಇಷ್ಟೇ ನಮಗೆಂದು ಇದ್ದ ಕೆಲಸ. ವಾರಕ್ಕೆ ಒಂದು ಸಾರಿ ಅಧಿಕಾರಿಗಳನ್ನು ಊರಿನ ಸುತ್ತಲೂ ಕರೆದುಕೊಂಡು ಬಂದು, ಜನರ ಕಷ್ಟಗಳನ್ನು ಅವರ ಮುಂದೆ ನಿವೇದಿಸಿ, ಅವುಗಳನ್ನು ಪರಿಹಾರ ಮಾಡುವುದಕ್ಕೆ ನಾವು ಪ್ರಯತ್ನ ಮಾಡುತ್ತಿದ್ದೆವು. ಆಗ ದಿವಾನರಾಗಿದ್ದ ದಿವಂಗತ ಸರ್ ಮಿರ್ಜಾ ಇಸ್ಮಾಯಿಲ್ ಸಾಹೇಬರು ವಾರಕ್ಕೆ ಒಂದು ಸಾರಿ ಕುದುರೆಯ ಮೇಲೆ ಬಂದು ನಗರದ ಎಲ್ಲಾ ವಿಭಾಗಗಳಿಗೂ ಭೇಟಿ ಕೊಡುತ್ತಿದ್ದರು. ಆಗ ನಾವು ಜನಗಳ ಕಷ್ಟಗಳನ್ನು ನಿವೇದಿಸಿಕೊಂಡರೆ ಅವರು ತಕ್ಷಣ ಸಂಬಂಧಪಟ್ಟ ಇಂಜಿನಿಯರ್ ಅಥವಾ ಅಧಿಕಾರಿಗಳಿಗೆ ಅದನ್ನು ತಿಳಿಸಿ ಜನಗಳಿಗೆ ಅನುಕೂಲ ಮಾಡಿಕೊಡಬೇಕೆಂದು ತಿಳಿಸುತ್ತಿದ್ದರು. ಅಷ್ಟೇ ಅಲ್ಲದೆ, ಅವರು ಹೇಳಿದ ಕೆಲಸ ಮಾಡಿದ ಬಗ್ಗೆ ಆ ಅಧಿಕಾರಿ ಎಂಟು

ದಿವಸದೊಳಗಾಗಿ ಅವರಿಗೆ ವರದಿ ಮಾಡಬೇಕಾಗಿತ್ತು. ಇಲ್ಲದಿದ್ದರೆ, ಅಧಿಕಾರಿಗಳ ಮೇಲೆ ಕ್ರಮ ಜರುಗಿಸುವ ಬಿಗಿಯನ್ನು ಅವರು ಇಟ್ಟುಕೊಂಡಿದ್ದರು. ಅಂಥ ಕಾಲದಲ್ಲಿ ನಾನು ಬೆಂಗಳೂರು ಮುನಿಸಿಪಾಲಿಟಿಯ ಸದಸ್ಯನಾಗಿದ್ದೆ. ೧೯೪೮-೪೯ರಲ್ಲಿ ಬೆಂಗಳೂರು ಮುನಿಸಿಪಾಲಿಟಿಗೆ ಶ್ರೀಮಾನ್ ಸುಬ್ಬರಾಮ ಶೆಟ್ಟರು ಅಧ್ಯಕ್ಷರಾಗಿದ್ದರು. ಅನಂತರ ಅವರು ಪೌರಾಡಳಿತ ಖಾತೆಯ ಮಂತ್ರಿಗಳೂ ಆದರು. ಆಗ ಅವರು ಬೆಂಗಳೂರು ಮುನಿಸಿಪಾಲಿಟಿಯನ್ನು ಕಾರ್ಪೊರೇಷನ್ ಆಗಿ ಪರಿವರ್ತನೆ ಮಾಡಿದರು. ಪುನಃ ನಾನು ೧೯೬೨ರಲ್ಲಿ ಸದಸ್ಯನಾದೆ. ಆಗ ಬರೀ ಅಲ್ಲಿ ಕಾಂಗ್ರೆಸ್ಸಿನವರೇ ಇರುತ್ತಿದ್ದರು. ಬೇರೆ ಯಾರು ಬರುವುದಕ್ಕೂ ಅವರು ಅವಕಾಶ ಕೊಡುತ್ತಿರಲಿಲ್ಲ. ಕಾಂಗ್ರೆಸ್ ಎಂದರೆ ಸಾಕು, ಆಗ ಜನ ಹುಚ್ಚುಚ್ಚಾಗಿ ಹೆಬ್ಬೆಟ್ಟು ಒತ್ತುತ್ತಿದ್ದರು. ಅಂಥ ಸಂದರ್ಭದಲ್ಲಿ ದಿವಂಗತ ಶ್ರೀ ಟಿ. ಸುಬ್ರಮಣ್ಯಂ ಅವರ ಅಧ್ಯಕ್ಷತೆಯಲ್ಲಿ ಬೆಂಗಳೂರು ನಗರದಲ್ಲಿ ಪೌರ ಸಮಿತಿ ಸಂಸ್ಥೆಯನ್ನು ಸ್ಥಾಪನೆ ಮಾಡಿ, ಅದರ ಪರವಾಗಿ ನಾವು ಬೆಂಗಳೂರು ನಗರ ಕಾರ್ಪೊರೇಷನ್ನಿನ ಚುನಾವಣೆಯಲ್ಲಿ ಸ್ಪರ್ಧಿಸಿದೆವು. ಆಗ ಪೌರ ಸಮಿತಿ ಬಹುಮತ ಗಳಿಸಿತು; ಕಾಂಗ್ರೆಸ್ ಬರಲಿಲ್ಲ. ೧೯೬೨ರಲ್ಲಿ ಮೊದಲ ಬಾರಿಗೆ ನನ್ನನ್ನು ಬೆಂಗಳೂರು ನಗರ ಕಾರ್ಪೊರೇಷನ್ನಿನ ಮೇಯರ್ ಆಗಿ ಪೌರ ಸಮಿತಿ ಪಕ್ಷದಿಂದ ಆರಿಸಿದರು. ನಾವು ಚುನಾವಣೆಗೆ ಮುನ್ನ, ಇರುವ ಹದಿನೈದು ಪರ್ಸೆಂಟ್ ಕಂದಾಯವನ್ನು ಹತ್ತು ಪರ್ಸೆಂಟ್‌ಗೆ ಇಳಿಸುತ್ತೇವೆ ಸೈಕಲ್ ತೆರಿಗೆಯನ್ನು ರದ್ದು ಮಾಡುತ್ತೇವೆ ಎಂದು ಜನಗಳಿಗೆ ಆಶ್ವಾಸನೆ ಕೊಟ್ಟಿದ್ದೆವು. ಅದರಂತೆ ನಾವು ಅಧಿಕಾರಕ್ಕೆ ಬಂದ ತಕ್ಷಣ ಹದಿನೈದು ಪರ್ಸೆಂಟ್ ಇದ್ದ ಕಂದಾಯವನ್ನು ಹತ್ತು ಪರ್ಸೆಂಟ್‌ಗೆ ಇಳಿಸಿದೆವು. ಹೀಗೆ ಮಾಡಿ ಎರಡು ವರ್ಷ ಆಡಳಿತ ನಡೆಸಿದರೂ ಅಂದು ನಮಗೇನೂ ಕಾರ್ಪೊರೇಷನ್ನಿನಲ್ಲಿ ಹಣದ ಅಭಾವ ಕಂಡುಬರಲಿಲ್ಲ. ಆಗಿನ ಸರ್ಕಾರದವರು, ಈಗ ಕೊಡುತ್ತಿರುವ ಮೋಟಾರ್ ವೆಹಿಕಲ್ ಟ್ಯಾಕ್ಸ್‌ಗಿಂತಲೂ ಕಡಿಮೆ ಕೊಡುತ್ತಿದ್ದರು. ಹಣದ ಅಭಾವವಿಲ್ಲದೆ ಹಾಗೆಯೇ ಕಾರ್ಪೊರೇಷನ್ ಅಂದು ನಡೆದುಕೊಂಡು ಬರುತ್ತಿತ್ತು. ೧೯೬೪ರಲ್ಲಿ ನನ್ನ ಅವಧಿ ಮುಗಿದು ಹೋಯಿತು. ಅನಂತರ, ಶ್ರೀಯುತ ತಿಮ್ಮರಾಯಗೌಡರು ೧೯೬೪ರಲ್ಲಿ ಕಾಂಗ್ರೆಸ್ ಪಕ್ಷದ ಪರಿಯಿಂದ ಮೇಯರ್ ಆಗಿ ಬಂದರು. ಅವರ ಅವಧಿಯ ಅಂತ್ಯದಲ್ಲಿ ಅಂದರೆ, ೧೯೬೭ನೇ ಇಸವಿಯಲ್ಲಿ ರಾಜ್ಯ ವಿಧಾನ ಸಭೆಗೆ ಚುನಾವಣೆಗಳು ನಡೆಯಬೇಕಾಗಿತ್ತು. ಆಗ ಸರ್ಕಾರ, ಪೌರಸಮಿತಿಯವರು ಬೆಂಗಳೂರಿನಲ್ಲಿ ಬಹಳ ಬಲವಾಗಿದ್ದಾರೆ, ಅವರು ಜನಗಳಿಗೆ ಒಳ್ಳೆಯ ಕೆಲಸ ಮಾಡಿದ್ದಾರೆ; ಅವರು ಇಲ್ಲೂ ಅಧಿಕಾರಕ್ಕೆ ಬಂದುಬಿಡಬಹುದೆಂದು ಪಿತೂರಿ ಮಾಡಿ, ಇಂಥಿಂಥ ಕಾರ್ಯಕ್ರಮಗಳು ಫೇಲ್ ಆಗಿವೆ, ಆದುದರಿಂದ ಕಾರ್ಪೊರೇಷನ್‌ನ್ನು ಏತಕ್ಕೆ ರದ್ದು ಮಾಡಬಾರದು ಎಂದು ಒಂದು ನೋಟಿಸನ್ನು ಜಾರಿ ಮಾಡಿದರು. ಕಾಂಗ್ರೆಸ್‌ನವರೇ ಆದ ಶ್ರೀಮಾನ್ ತಿಮ್ಮರಾಯಿ ಗೌಡರು ಮೇಯರ್ ಆಗಿದ್ದಾಗ ಸರ್ಕಾರ ಈ ನೋಟಿಸನ್ನು ಜಾರಿ ಮಾಡಿತು. ನಮಗೆ ಹದಿನಾರು ಪಾಯಿಂಟ್‌ಗಳನ್ನು ಹಾಕಿದ್ದರು. ಆದಕ್ಕೆ ನಾವು ಸರಿಯಾದ ಜವಾಬು ಕೊಟ್ಟಿದ್ದರಿಂದ ನಾವು ಯಾವ ಹಿಡಿತಕ್ಕೂ ಸಿಕ್ಕಲಿಲ್ಲ. ಆಗ ಪೌರಾಡಳಿತ ಸಚಿವರಾಗಿದ್ದ ಶ್ರೀಮಾನ್ ಆರ್. ಎಂ. ಪಾಟೀಲರು ಪೌರಸಭೆಯನ್ನು ರದ್ದು ಮಾಡಿ, ಅದನ್ನು ಸರ್ಕಾರದ ವಶಕ್ಕೆ ತೆಗೆದುಕೊಂಡರು. ಆಗ ನಾವು ಅವರ ಮೇಲೆ ಚಳವಳಿ ನಡೆಸಿದೆವು. ಆರ್. ಎಂ. ಪಾಟೀಲರು ಬೆಂಗಳೂರಿನಲ್ಲಿ ಎಲ್ಲೇ ಬಂದರೂ ಬಿಡುವುದಿಲ್ಲ, ಕಪ್ಪು ಬಾವುಟ ಎತ್ತುತ್ತೇವೆ ಎಂದು ಘೋಷಿಸಿದೆವು. ಆರ್. ಎಂ. ಪಾಟೀಲರು ಬೆಂಗಳೂರಿಗೆ ಬಂದರೆ, ಅವರ ಸುತ್ತಲೂ ಪೋಲಿಸರ ಬಂದೋಬಸ್ತು ಇರುತ್ತಿತ್ತು. ಆದರೂ, ನಾವು ಕಪ್ಪು ಬಾವುಟ ಹಿಡಿದು, ಅವರ ನೀತಿಗೆ ವಿರೋಧ ವ್ಯಕ್ತಪಡಿಸುತ್ತಿದ್ದೆವು. ಆಗ ಸರ್ಕಾರದವರು ನಗರ ಸಭೆಯ ಅನುಮತಿ ಇಲ್ಲದೆ ಹತ್ತು ಪರ್ಸೆಂಟ್ ಇದ್ದ ಕಂದಾಯವನ್ನು ಮತ್ತೆ ಹದಿನೈದು ಪರ್ಸೆಂಟ್‌ಗೆ ಏರಿಸಿದರು. ಇದರಿಂದ, ಇತರ ಅನೇಕ ಸೆಸ್‌ಗಳು ಸೇರಿ ಒಟ್ಟು ಅದು ೧೮ ಪರ್ಸೆಂಟ್‌ಗೆ ಆಗುತ್ತಿತ್ತು. ಆಗ ನಾವು ಅವರನ್ನು ಸುಮ್ಮನೆ ಬಿಡಲಿಲ್ಲ, ಅವರು ಯಾವ ಸಭೆಗೆ ಬಂದರೂ ಕಪ್ಪುಬಾವುಟ ಪ್ರದರ್ಶನ ಮಾಡಿ, ಸಿಕ್ಕ್ಯಾಪಟ್ಟೆ ಗಲಾಟೆ ಮಾಡುತ್ತಿದ್ದೆವು.

ಶ್ರೀ ಡಿ. ಕೆ. ನಾಯ್ಕರ್.—ಆಗ ಶ್ರೀಮಾನ್ ಪುಟ್ಟಸ್ವಾಮಿಯವರಿರಲಿಲ್ಲವೆ ?

ಶ್ರೀ ಕೆ. ಎಂ. ನಾಗಣ್ಣ.—ಇರಲಿಲ್ಲ, ಪುಟ್ಟಸ್ವಾಮಿಯವರು ಈ ಖಾತೆಯಲ್ಲಿದ್ದಾಗ ಬೆಂಗಳೂರು ನಗರ ನೀರು ಸರಬರಾಜಿನ ವ್ಯವಸ್ಥೆಗಾಗಿ ವಿಶ್ವಬ್ಯಾಂಕಿನಿಂದ ಮೂವತ್ತು ಸಾವಿರ ರೂಪಾಯಿ ಸಾಲ ತರುತ್ತೇವೆ, ಆದುದರಿಂದ ನೀರಿನ ತೆರಿಗೆ ಹಾಕಬೇಕೆಂದು ಹೇಳಿದರು. ಆಗ ನಾವು ಬೆಂಗಳೂರು ಜನತೆಯ ಮೇಲೆ ನೀರಿನ ಕಂದಾಯವನ್ನು ಹೇರಬೇಡಿ. ನಿಮಗೆ ಮೂವತ್ತು ಸಾವಿರ ರೂಪಾಯಿ ಬೇಕಾದರೆ, ಈಗಿರುವ ಸೈಟುಗಳನ್ನು ಮಾರಿದರೆ ಬರುತ್ತದೆ ಎಂದು ನಾವು ಹೇಳಿದೆವು.

ಆದರೆ, ಈಗ ಸರ್ಕಾರದವರು ಪ್ರಾಪರ್ಟಿ ಟ್ಯಾಕ್ಸನ್ನು ಹೆಚ್ಚು ಮಾಡುತ್ತಿದ್ದಾರೆ. ತಾವು ಬಹುಮತದಲ್ಲಿರುವುದರಿಂದ ಈಗಾಗಲೇ ಇದಕ್ಕೆ ನಮ್ಮ ಅನುಮತಿಯನ್ನು ತೆಗೆದು ಕೊಂಡುಬಿಟ್ಟಿದಿರಿ. ೨೦ ಪರ್ಸೆಂಟ್ ಟ್ಯಾಕ್ಸ್ ಹಾಕಿರುವುದರಿದ. ಎಲ್ಲಾ ಸೆಸ್ ಸೇರಿ ಒಟ್ಟು ೨೭ ಪರ್ಸೆಂಟ್ ಆಗುತ್ತದೆ. ೧೪ ಪರ್ಸೆಂಟ್ ತೆರಿಗೆಯಿದ್ದಾಗ ನಾವು, ಪೌರ ಸಮಿತಿಯವರು, ಆಡಳಿತವನ್ನು ಚೆನ್ನಾಗಿ ನಡೆಸುತ್ತಿದ್ದೆವು ಆದರೆ, ಈಗ ಅದು ೨೭ ಪರ್ಸೆಂಟ್ ಆಗಿದೆ. ಈಗಿನ ಸರ್ಕಾರದವರು ನಾವು ಬೆಂಗಳೂರು ನಗರವನು ಅಭಿವೃದ್ಧಿ ಮಾಡಿದ್ದೇವೆಂದು ಹೇಳಬಹುದು. ಆದರೆ ತಾವು ಅಭಿವೃದ್ಧಿ ಮಾಡಿಲ್ಲ. ನಾವಿದ್ದಾಗಲೇ ಆಡಳಿತ ಚೆನ್ನಾಗಿತ್ತು. ತಾವು ಈಗ ಮಾಡುತ್ತಿರುವ ಆಡಳಿತ ವೈಖರಿಗೆ ನಾನೊಂದು ಶಹಭಾಷ್‌ಗಿರಿ ಕೊಡುತ್ತೇನೆ. ೧೯೬೮ರ ನೇ ಇಸವಿಯಲ್ಲಿ ನ್ಯೂ ಕಲಾಸಿಪಾಳ್ಯಂ ಬಡಾವಣೆಯನ್ನು ಬಹಿರಂಗ ಹರಾಜು ಹಾಕಿದರು. ಆಗ ಅಲ್ಲಿ ಒಂದು ದೊಡ್ಡ ಮೋರಿ ಹರಿಯುತ್ತಿತ್ತು, ಊರಿನ ಕಚಡಾ ಎಲ್ಲಾ ಅದರಲ್ಲಿ ಹೋಗುತ್ತಿತು. ಆಗ ಶ್ರೀ ಎಸ್. ನಾರಾಯಣರಾಯರು ಕಮಿಷನರಾಗಿದ್ದರು, ನಾನು ಸದಸ್ಯನಾಗಿದ್ದೆ. ಆಗ ನಾನು ಕಾರ್ಪೊರೇಷನ್ನಿನ ಮೇಲಿನ ಅಭಿಮಾನದಿಂದ, ಜನಗಳಿಗೆ ಒಳ್ಳೆಯದಾಗಲೀ ಎನ್ನುವ ಉದ್ದೇಶದಿಂದ ಹರಾಜಿನಲ್ಲಿ ಭಾಗವಹಿಸಿ, ಹೆಚ್ಚು ಹೆಚ್ಚಾಗಿ ಕೂಗುತ್ತಿದೆ ಆಗ ಶ್ರೀ ಎಸ್. ನಾರಾಯಣರಾಯರು ಅಲ್ಲಿ ಹರಿಯುತ್ತಿದ್ದ ಮೋರಿಯನ್ನು ಮುಚ್ಚಿಸುತ್ತೇವೆ, ವಾಸನೆ ಬರದ ಹಾಗೆ ವ್ಯವಸ್ಥೆ ಮಾಡುತ್ತೇವೆ ಎಂದು ಆಶ್ವಾಸನೆ ಕೊಟ್ಟಿದ್ದರು. ನಾರಾಯಣರಾಯರೂ ಅವರ ಅಧಿಕಾರವಧಿಯಲ್ಲಿ ಆ ಮೋರಿ ಬಗ್ಗೆ ಏನೂ ಮಾಡಲಿಲ್ಲ, ಅವರ ನಂತರ ಬಂದವರೂ ಏನೂ ಮಾಡಲಿಲ್ಲ. ಆಶ್ವಾಸನೆ ಹಾಗೆಯೇ ಉಳಿಯಿತು ಈಗಿನ ಸರ್ಕಾರ ಆ ಮೋರಿಯ ಮೇಲೆ, ಅಂದರೆ, ಶಿವಾಜಿ ಚಲನಚಿತ್ರಮಂದಿರದ ಬಳಿ ಹಾಗೂ ಹೈದರಾಬಾದ್ ಬ್ಯಾಂಕಿನ ಪಕ್ಕದಲ್ಲಿ ಒಂದು ಕಟ್ಟಡವನ್ನು ಕಟ್ಟುವುದಕ್ಕೆ ಲೈಸನ್ಸ್ ಕೊಟ್ಟಿದ್ದಾರೆ. ಅಲ್ಲಿ, ಮೋರಿಯ ಮೇಲೆ ಕಟ್ಟಡವನ್ನು ಕಟ್ಟುವುದಕ್ಕೆ ಮಂಜೂರಾತಿ ಕೊಡಬೇಕೇ ಬೇಡವೆ ಎಂದು ವಿಚಾರ ಮಾಡುವ ವಿವೇಚನೆಯಾದರೂ ಇವರಿಗೆ ಬೇಡವೆ?

ಶ್ರೀ ಕೋಣಂದೂರು ಲಿಂಗಪ್ಪ.—ಸೇತುವೆ ಮೇಲೆ ಮನೆ ಕಟ್ಟುವುದಕ್ಕೂ ಕೊಡುತ್ತಾರೆ.

ಶ್ರೀ ಕೆ.ಎಂ. ನಾಗಣ್ಣ.—ಆ ಕಟ್ಟಡಕ್ಕೆ ವರ್ಷಕ್ಕೆ ಮೂರು ಸಾವಿರ ರೂಪಾಯಿ ಬಾಡಿಗೆಯ ಮೇಲೆ ಮೂವತ್ತು ವರ್ಷಗಳಿಗೆ ಕೊಟ್ಟಿದ್ದಾರೆ. ಸ್ವಲ್ಪ ನೋಟ್ ಮಾಡಿಕೊಳ್ಳಿ, ಮೂರು ಸಾವಿರ ರೂಪಾಯಿಗೆ ಆ ಜಾಗವನ್ನು ಲೀಸ್‌ಗೆ ಕೊಟ್ಟಿದ್ದೀರಿ ಇವತ್ತು ಆ ಜಾಗವನ್ನು ೩೦ ವರ್ಷಗಳ ಲೀಸ್‌ಗೆ ಕೊಟ್ಟಿದ್ದೀರಿ ಇವತ್ತು ಒಂದು ತಿಂಗಳಿಗೆ ಒಂದು ಅಂಗಡಿಗೆ ೬ ಸಾವಿರ ರೂಪಾಯಿ ಬಾಡಿಗೆ ಬಿದ್ದಿದೆ. ೧೯೮೦ನೇ ಇಸವಿಗೆ ತಿಂಗಳಿಗೆ ೧೨ ಸಾವಿರ ರೂಪಾಯಿ ಬರುತ್ತದೆ. ಏಕೆಂದರೆ ರೂಪಾಯಿ ಬೆಲೆ ಕಡಿಮೆಯಾಗುತ್ತದೆ, ನೀವು ಮಾಡಿರತಕ್ಕ ಒಳ್ಳೆಯ ಕೆಲಸಗಳಲಿ ಇದೊಂದು ಒಳ್ಳೆಯ ಕೆಲಸ, ನೀವು ಅಂದರೆ ಸರ್ಕಾರ ಮೋರಿ ಮೇಲೆ ಮನೆ ಕಟ್ಟಲಿಕ್ಕೆ ಅವಕಾಶ ಕೊಟ್ಟಿದ್ದೀರಿ, ಹಿಂದೆ ಇದ್ದ ಕಮೀಷನರ್‌ವರು ಮೋರಿ ಮುಚ್ಚುತ್ತೇವೆ ಎನ್ನುವ ಆಶ್ವಾಸನೆಯನ್ನು ಕೊಟ್ಟಿದ್ದರು. ಪಕ್ಕದಲ್ಲಿ ನನ್ನದು ಒಂದು ಸೈಟು ಇದೆ, ನೀವು ವರ್ಷಕ್ಕೆ ಮೂರು ಸಾವಿರ ರೂಪಾಯಿಗೆ ಕೊಟ್ಟಿದ್ದೀರಿ, ಅವನಿಗೆ ತಿಂಗಳಿಗೆ ೬ ಸಾವಿರ ರೂಪಾಯಿ ಆದಾಯ ಬರುತ್ತದೆ, ಇದು ನಿಮ್ಮ ಆಡಳಿತದ ವೈಖರಿ.

ಶ್ರೀ ಹೆಚ್. ಡಿ. ದೇವೇಗೌಡ.—ನಿಮ್ಮ ಕಾಲಾವಧಿಯಲ್ಲಿ ಬೆಂಗಳೂರಿನಲ್ಲಿರತಕ್ಕ ಖಾಲಿ ಜಾಗಗಳನ್ನು ಬೆಂಗಳೂರು ಡವೆಲಪ್‌ಮೆಂಟ್ ಅಥಾರಿಟಿಯವರು, ಅಂದರೆ ನಿಮ್ಮ ಅಥಾರಿಟಿಯವರು ಎಷ್ಟೆಷ್ಟು ವರ್ಷಗಳಿಗೆ ಎಷ್ಟೆಷ್ಟು ಲೀಸ್‌ಗೆ ಕೊಟ್ಟಿದ್ದೀರಿ? ಯಾರು ಯಾರಿಗೆ ಕೊಟ್ಟಿದ್ದೀರಿ? ಎನ್ನುವ ಬಗ್ಗೆ ಒಂದು ಪಟ್ಟಿಯನ್ನು ಸಭೆಯ ಮುಂದೆ ಇಡಬೇಕೆಂದು ಹೇಳುತ್ತೇನೆ ಹನುಮಂತಯ್ಯ ಡಬಲ್ ರೋಡಿನಲ್ಲಿ ಖಾಲಿ ಜಾಗಗಳಲ್ಲಿ ಇವತ್ತು ಬಹಳ ಸುಂದರವಾದ ಕಟ್ಟಡಗಳು ಬರುತ್ತಿವೆ. ಕಾರ್ಪೊರೇಷನ್ ಅಡ್ಮಿನಿಸ್ಟ್ರೇಟರ್‌ಗೆ ಎಕ್ಸ್‌ಟೆನ್‌ಷನ್ ಬೇಕು. ಲೈಫ್‌ನಲ್ಲಿ ಎಕ್ಸ್‌ಟೆನ್‌ಷನ್ ಸಿಕ್ಕಿದರೆ ಒಳ್ಳೆಯ ಕೆಲಸ ಮಾಡುತ್ತಾರೆಂದು ಈ ರೀತಿ ಮಾಡಿದ್ದೀರಾ?

ಶ್ರೀ ಕೆ. ಎಂ. ನಾಗಣ್ಣ.—ದೇವೇಗೌಡರಿಗೆ ನಾನು ಹೇಳುವುದಾದರೆ, ಬೆಂಗಳೂರು ನಗರದಲ್ಲಿ ಯಾವ ಯಾವ ಖಾಲಿ ಜಾಗಗಳು ಇದ್ದವೋ ಅವುಗಳನ್ನೆಲ್ಲಾ ಲೀಸ್‌ಗೆ ಕೊಟ್ಟಿದ್ದಾರೆ, ಖರೀದಿಗೆ ಕೊಟ್ಟಿದ್ದಾರೆ, ಎಲ್ಲಾ ಹಾಳು ಮಾಡಿದ್ದಾರೆಂದು ಹೇಳಿದರೆ ತಪ್ಪಾಗುವುದಿಲ್ಲ. ಜಯಚಾಮರಾಜೇಂದ್ರ ರಸ್ತೆಯಲ್ಲಿರುವ ಕೆ.ವಿ. ಅಯ್ಯರ್ ಇನ್‌ಸ್ಟಿಟ್ಯೂಷನ್ ಇದ್ದಂತಹ ಜಾಗವನ್ನು ಒಬ್ಬರಿಗೆ ಕೊಟ್ಟಿದ್ದಾರೆ, ಅದು ಎಷ್ಟಕ್ಕೆ ಕೊಟ್ಟಿದ್ದಾರೆಂಬುದು ನನಗೆ ಗೊತ್ತಿಲ್ಲ, ಮಾನ್ಯ ಶಾಮಣ್ಣನವರಿಗೆ ಗೊತ್ತಿರಬಹುದು. ಈಗ ಇರತಕ್ಕ

ಅಡ್ಮಿನಿಸ್ಟ್ರೇಟರ್ ಲಕ್ಷ್ಮಣರಾಯರ ಎಕ್ಸ್‌ಟೆನ್‌ಷನ್ ವಿಚಾರ ಹೇಳಿದರು ನನಗೆ ತಿಳಿದಹಾಗೆ ಅವರು ದಾರಿತಪ್ಪಿ ಕೆಲಸ ಮಾಡಿಲ್ಲ, ಮಾಡುವುದೂ ಇಲ್ಲ. ಅವರಿಗೆ ಬೇಡ ಎಂಬ ಕೆಲಸವನ್ನು ಸರ್ಕಾರದವರು ಮಾಡಿದ್ದಾರೆ. ರಾಮನಾಥನ್ ಎನ್ನುವ ಒಬ್ಬ ಕಮೀಷನರ್‌ರವರು ನನಗೆ ತಿಳಿದಮಟ್ಟಿಗೆ ಒಳ್ಳೆಯ ಹೆಸರನ್ನು ಜನತೆಯಿಂದ ತೆಗೆದುಕೊಂಡಿದ್ದರು. ಅವರು ಬಹಳ ದಕ್ಷತೆಯಿಂದ ಕೆಲಸ ಮಾಡುತ್ತಿದ್ದರು. ಇವರಿಗೆ ದಕ್ಷತೆ ಏನು ಬೇಕು? ಒಂದು ವಾರದೊಳಗಾಗಿ ಅವರನ್ನು ಅಲ್ಲಿಂದ ವರ್ಗ ಮಾಡಿದ್ದಾರೆ, ನೀವು ಅವರನ್ನು ಏತಕೆ ವರ್ಗ ಮಾಡಬೇಕಾಗಿತ್ತು? ನಿಮಗೆ ದಕ್ಷತೆಯಿಂದ ಕೆಲಸ ಮಾಡತಕ್ಕ ಅಧಿಕಾರಿಗಳು ಎಲ್ಲಿ ಸಿಗುತ್ತಾರೆ? ದಕ್ಷತೆಯುಳ್ಳ ಅಧಿಕಾರಿಗಳನ್ನು ಮಡಗುವುದಕ್ಕೆ ಇವರಿಗೆ ಇಷ್ಟವಿಲ್ಲ, ಇವರು ಹೇಳಿದ್ದಕ್ಕೆಲ್ಲಾ ಹೆಬ್ಬೆಟ್ಟು ಒತ್ತುವರಾಗಿರಬೇಕು. ಈ ರೀತಿ ಮಾಡುವುದು ನಿಮಗೆ ಸರಿಯಲ್ಲ, ನಿಮ್ಮ ಮೇಲೆ ಬಹಳ ಅಭಿಮಾನ ನನಗೆ ಇದೆ, ಇದು ನನಗೆ ಸೇರಿದ ಸಬ್ಜೆಕ್ಟ್ ಇದರ ಕಷ್ಟ ನನಗೆ ಗೊತ್ತಿದೆ. ತಮಗೆ ಗೊತ್ತಿಲ್ಲ. ಯಾವುದೋ ಊರಿನಿಂದ ಬಂದಿದ್ದೀರಿ, ಮಂತ್ರಿಗಳಾದ ಮೇಲೆ ಮನೆ ಮಾಡಿಕೊಂಡಿರಬಹುದು? ಏಕೆಂದರೆ ಮಂತ್ರಿಗಳಾಗಿ ಬಂದಮೇಲೆ ಒಂದು ಎರಡು ವರ್ಷಗಳಲ್ಲಿ ಮನೆ ಮಾಡಿಕೊಳ್ಳುತ್ತಾರೆ. ನನ್ನ ಅನುಭವದಲ್ಲಿ ಒಬ್ಬರು ಮಂತ್ರಿಗಳಾದರೂ ಅವರು ಮಂತ್ರಿಗಳಾದಾಗ.

ಶ್ರೀ ಡಿ ಕೆ. ನಾಯ್ಕರ್.—ನಾನು ಮನೆ ಕಟ್ಟಿಕೊಂಡಿಲ್ಲ.

ಶ್ರೀ ಕೆ.ಎಂ. ನಾಗಣ್ಣ —ಆರ್.ಎಂ. ಪಾಟೀಲರವರಿಗೆ ಒಂದು ಸಂದರ್ಭದಲ್ಲಿ ಹೇಳಿದೆ, ಸ್ವಾಮಿ, ತಾವು ಇಲ್ಲಿಗೆ ಬರಬೇಕಾದರೆ ೫ ಸಾವಿರ ರೂಪಾಯಿ ಸಾಲ ಇತ್ತು, ಬಂದು ಇನ್ನೂ ಒಂದು ವರ್ಷವಾಗಲಿಲ್ಲ, ಬೆಂಗಳೂರಿನಲ್ಲಿ ಮನೆ ಕಟ್ಟಿದ್ದೀರಿ, ಅದರ ಬೆಲೆ ಒಂದು ಲಕ್ಷ ರೂಪಾಯಿ ದುಡ್ಡು ಎಲ್ಲಿಂದ ಬಂತು ಎಂದು. ಅವರು ಮಂತ್ರಿಗಳಾಗಿರುವವರೆವಿಗೂ ತೆರಿಗೆ ಕೊಟ್ಟರು, ಆ ಮೇಲೆ ಅವರಿಗೆ ತೆರಿಗೆ ಕೊಡುವುದಕೆ ಸಾಧ್ಯವಾಗದೇ ಹೋಯಿತು. ಇದು ಎಂಥ ಕಡೆ ಅಲ್ಲಿ ಜಾಗಗಳನ್ನು ಪಡೆಯುತ್ತಾರೆಂದು ಚದರಗಜಕ್ಕೆ ೨೫೦–೩೫೦ ರೂಪಾಯಿ ಇರುವ ಕಡೆ ಮಾಡಿಕೊಳ್ಳುತ್ತಾರೆ. ಸರ್ಕಾರಿ ಅಧಿಕಾರಿಗಳಿಗೆ ಮತ್ತು ಮಂತ್ರಿಗಳಿಗಾಗಿಯೇ ಸಿ.ಐ.ಟಿ.ಬಿ. ಎಂದು ಮಾಡಿದ್ದಾರೆ ಅವರಿಂದ ಪಡೆಯುತ್ತಾರೆ. ನಾನು ೧೯೩೫ನೇ ಇಸವಿಯಿಂದ ಬೆಂಗಳೂರು ನಗರದ ಮುನಿಸಿಪಲ್ ಕೌನ್ಸಿಲರ್ ಆಗಿದ್ದರೂ ಒಂದು ಇಂಚು ಜಾಗ ಕೂಡ ತೆಗೆದುಕೊಂಡಿಲ್ಲ. ಸಿ.ಐ.ಟಿ.ಬಿ. ಮಾಡಿದ್ದು ನಾನು, ಮೊದಲು ನರಸಿಂಗರಾಯರು ಅಧ್ಯಕ್ಷರು ಆಗಿದ್ದರು. ಆಗ ಈ ದೇಶದಲ್ಲಿ ಕಾಂಗ್ರೆಸ್ ಸರ್ಕಾರ ಇರಲಿಲ್ಲ, ತಲೆ ಇರತಕ್ಕ ಸರ್ಕಾರ ಇತ್ತು. ಅವರಾದ ಮೇಲೆ ಲಂಕಪ್ಪ ಎನ್ನುವವರು ಬಂದರು. ಹನುಮಂತಯ್ಯನವರು ಆಗಲೇ ಕಾಂಗ್ರೆಸ್ ಸೇರಿಕೊಂಡಿದ್ದರು. ಲಂಕಪ್ಪನವರು ಹೇಳಿದರು, ನಾಗಣ್ಣನವರೇ ಹನುಮಂತಯ್ಯನವರು ಕೂಡ ಒಂದು ಸೈಟು ತೆಗೆದುಕೊಂಡಿದ್ದಾರೆ, ನೀವು ನಿಮ್ಮ ಹುಡುಗನ ಹೆಸರನಲ್ಲಾದರೂ ಒಂದು ಸೈಟು ತೆಗೆದುಕೊಳ್ಳಿ ಎಂದು ಹೇಳಿದರು. ನಾನು ಅವರಿಗೆ ಹೇಳಿದೆ, ಲಂಕಪ್ಪನವರೇ ನನಗೆ ಈಗ ಹಾಲಿ ಸೈಟುಗಳು ಇವೆ, ಟ್ರಸ್ಟ್‌ಬೋರ್ಡ್‌ನಿಂದ ಸೈಟು ತೆಗೆದುಕೊಂಡರು ಎನ್ನುವ ಕೆಟ್ಟ ಹೆಸರು ತೆಗೆದುಕೊಳ್ಳುವುದು ಬೇಡ, ರಸ್ತೆಯಲ್ಲಿ ತಿರುಗಾಡಬೇಕಾದರೆ, ಜನ ಬೆಟ್ಟುಮಾಡಿ ತೋರಿಸುತ್ತಾರೆಂದು ಹೇಳಿದೆ. ಹೀಗಿರಬೇಕಾದರೆ, ನೀವು ಮನೆ ಕಟ್ಟಿಕೊಂಡಿಲ್ಲ ಎಂದರೆ ನೀವು ಬುದ್ಧಿವಂತರಲ್ಲ.

ಶ್ರೀ ಎಂ.ಎಸ್. ಕೃಷ್ಣನ್.—ಊರಿನಲ್ಲಿ ಇದೆ.

ಶ್ರೀ ಕೆ.ಎಂ. ನಾಗಣ್ಣ.—ಅಲ್ಲಿ ಇರಬಹುದು ಇಲ್ಲಿ ಮನೆ ಕಟ್ಟಿಕೊಂಡರೆ ೩–೪ ಲಕ್ಷ ರೂಪಾಯಿ ಬೆಲೆ ಬಾಳುತ್ತದೆ. ಕಾರ್ಪೊರೇಷನ್ನಿನಲ್ಲಿ ಕರಪ್‌ಷನ್ ಜಾಸ್ತಿಯಾಗಿದೆ, ನೀವು ಕಾರ್ಪೊರೇಷನ್ ಆಡಳಿತ ವಹಿಸಿಕೊಂಡಮೇಲೆ, ಕಾರ್ಪೊರೇಷನ್ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷದವರೇ ಬಂದಿದ್ದಾರೆ. ಅವರು ಏನು ಅನ್ಯಾಯ ಮಾಡಿದ್ದಾರೆಂದರೆ, ತಮಗೂ ಗೊತ್ತಿದೆ, ನನಗೆ ಅನ್ಯಾಯ ಮಾಡಿದ್ದಾರೆ, ನಾನು ಒಂದು ಸೈಟನ್ನು ಪಬ್ಲಿಕ್ ಆಕ್ಷನ್‌ನಲ್ಲಿ ತೆಗೆದುಕೊಂಡಿದ್ದನ್ನು, ನಾನು ಆಸ್ಪತ್ರೆಯಲ್ಲಿ ಇದ್ದಂತ ಸಮಯ ನೋಡಿಕೊಂಡು ಬೇರೆ ಒಬ್ಬರಿಗೆ ಕೊಟ್ಟಿದ್ದರು. ನಾನು ಹೋಗಿ ಸೈಟು ನೋಡಿದರೆ ಬೇರೆಯವರ ಬೋರ್ಡು ಇತ್ತು. ತಾವೇ ಫೈಲನ್ನು ತರಿಸಿಕೊಂಡು ಸರಿಮಾಡಿಕೊಟ್ಟಿರಿ.

ಈ ರೀತಿ ನಿಮ್ಮ ಆಡಳಿತ ನಡೆದಿದೆ. ಆ ಸೈಟನ್ನು ಪಡೆದಂತಹವರ ಹತ್ತಿರ ಹೋಡೆದಾಡಿ ನಿಮ್ಮ ಹತ್ತಿರ ಬಂದಾಗ ಕಡೆಗೂ ನನ್ನ ಹೆಸರಿಗೆ ಮಾಡಿದಿರಿ, ಆ ರೀತಿ ತಾವು ಮಾಡಿದರೂ ಕೂಡ ಅದರ ಬಗ್ಗೆ ಇನ್ನೂ ಕೇಸ್ ನಡೆಯುತ್ತಿದೆ ಇನ್ನು ಕಾರ್ಪೊರೇಷನ್ ತಮ್ಮ ಆಡಳಿತ ಕಾಲದಲ್ಲಿ ಸೂಪರ್‌ಸೆಷನ್ ಆಯಿತು ಎಂದು ಕಾಣುತ್ತದೆ, ಏಕೆಂದರೆ ತಾವು ಚುನಾವಣೆ ನಡೆಸದೇ ಹೋಗಿರುವುದರಿಂದ ಅದನ್ನು ರದ್ದುಪಡಿಸಿದಂತಾಗಿದೆ.

5-30 P.M.

ಶ್ರೀ ಡಿ.ಕೆ. ನಾಯ್ಕರ್.—ಕೌನ್ಸಿಲ್ ಅವಧಿ ಮುಗಿದಿದ್ದಕ್ಕೂ ಮತ್ತು ಸೂಪರಸ್‌ಷನ್‌ಗೂ ವ್ಯತ್ಯಾಸ ಇದೆ. ಇವೊತ್ತು ಮೂರು ವರ್ಷ ಅಥವಾ ನಾಲ್ಕು ವರ್ಷ ಎಂದು ಒಂದು ಅವಧಿ ಇರುತ್ತದೆ. ಈ ಒಂದು ಅವಧಿ ಮುಗಿದಮೇಲೆ ಅಡ್ಮಿನಿಸ್ಟ್ರೇಟರ್ ನೇಮಿಸುತ್ತಾರೆ. ಅದು ಸೂಪರ್‌ಸೆಷನ್ ಆಗುವುದಿಲ್ಲ. ಇನ್ನು ಮುಂದೆ ಅವಧಿ ಇರುವಾಗಲೇ ಕಲವು ಆಪಾದನೆ ಮೇಲೆ ಸೂಪರ್ ಸೀಡ್ ಮಾಡಿ ಅಧಿಕಾರ ವಹಿಸಿಕೊಳ್ಳುವುದು ಸೂಪರ್‌ಸೀಡ್ ಎಂದಾಗುತ್ತದೆ.

ಶ್ರೀ ಕೆ ಎಂ. ನಾಗಣ್ಣ.—ಮಾನ್ಯ ಮಂತ್ರಿಗಳ ವಿವರಣೆ ಕೇಳಿ ಬಹಳ ಸಂತೋಷವಾಯಿತು. ಆದರೆ ಇವೊತ್ತು ನಾಲ್ಕು ವರ್ಷ ಎಂದು ಖನು ಒಂದು ಟರ್ಮ್ ಇರುತ್ತದೆ, ಆ ಟರ್ಮ್ ಮುಗಿಯುವ ವೇಳೆಗೆ ತಾವು ಚುನಾವಣೆ ನಡೆಯಲಿಕ್ಕೆ ಅವಕಾಶ ಮಾಡದೇ ಇರುವುದರಿಂದ ಅದನ್ನು ಸೂಪರ್‌ಸೀಡ್ ಮಾಡಿದಂತಾಗಿದೆ ಎಂದು ಈಗಲೂ ಹೇಳುತ್ತೇನೆ. ತಾವು ಹೀಗೇ ಹೇಳಿಕೊಂಡು ಬಂದು ಮೂರು ವರ್ಷದರೆಗೂ ಹಾಗೆ ಇಟ್ಟಿದ್ದೀರಿ ಈ ಬೆಂಗಳೂರು ನಗರದ ಮುನಿಸಿಪಾಲಿಟಿ ಅಸ್ತಿತ್ವಕ್ಕೆ ಬಂದು ಸುಮಾರು ೧೧೫ ವರ್ಷಗಳಾಯಿತು. ಇಷ್ಟು ವರ್ಷಗಳಾಗಿದ್ದರು ಹಿಂದೆ ಈ ಕಾರ್ಪೊರೇಷನ್ ಯಾವತ್ತು ಸೂಪರ್‌ಸೀಡ್ ಆಗಿರಲಿಲ್ಲ, ಹಿಂದೆ ಆಡಳಿತ ದಲ್ಲಿಂದ್ದ ದ್ವೀತವರಿಗೂ ನಮಗೂ ಎಷ್ಟೋ ಭಿನ್ನಾಭಿಪ್ರಾಯಗಳಿದ್ದರು ಸಹ ಈ ಮುನಿಸಿಪಾಲಟಿ ರದ್ದು ಮಾಡುತ್ತಾ ಇರಲಿಲ್ಲ. ಅವರು ಏನು ಹೇಳುತಿದ್ದರು ಎಂದರೆ ವಿಧಾನಸಭೆಗೆ ಸದಸ್ಯರಾಗಿ ಆಯ್ಕೆಯಾಗಿ ಬರಬೇಕಾದರೆ ಮೊದಲು ಕಾರ್ಪೊರೇಷನಲ್ಲಿ ಅನುಭವ ಪಡೆದಿರಬೇಕು ಎನ್ನುವುದು ಹಿಂದೆ ಇದ್ದಂತಹ ದಿವಾನರವರ ಅಭಿಪ್ರಾಯವಾಗಿತ್ತು ಆದಕಾರಣ ಮುನಿಸಿಪಾಲಿಟಿಗಳಲ್ಲಿ ಕೆಲಸ ಮಾಡಲು ಚುನಾಯಿತ ಸದಸ್ಯರಿಗೆ ಅವಕಾಶ ಕೊಡುತ್ತಿದ್ದರು. ಈಗ ತಾವು ಕಂದಾಯ ಹೆಚ್ಚು ಮಾಡುವ ಪದ್ಧತಿ ತಮ್ಮ ದಬ್ಬಾಳಿಕೆತನ ಎಂದು ಹೇಳಬೇಕಾಗುತ್ತದೆ. ನೀವು ಮುನಿಸಿಪಾಲಿಟಿಗಳಿಗೆ ಚುನಾಯಿತ ಪ್ರತಿನಿಧಿಗಳನ್ನು ಬಿಡಲಿಕ್ಕೆ ಇಷ್ಟವಿಲ್ಲದೆ ತಮ್ಮ ಅಧಿಕಾರಿಗಳನ್ನು ಬಿಟ್ಟು ಈ ರೀತಿ ಕಂದಾಯ ಜಾಸ್ತಿ ಮಾಡಲಿಕ್ಕೆ ಪ್ರಯತ್ನ ಮಾಡಿದರೆ ತಾವು ಬೆಂಗಳೂರು ನಗರದಲ್ಲಿ ಓಡಾಡಲಿಕ್ಕೆ ಆಗುವುದಿಲ್ಲ ಎಂದು ಹೇಳುತ್ತೇನೆ. ಇವೊತ್ತು ನಗರಸಭೆಯಲ್ಲಿ ಜನತಾ ಪ್ರತಿನಿಧಿಗಳು ಇಲ್ಲದೇ ಇರುವಂತ ಸಂಧರ್ಭದಲ್ಲಿ ಈ ರೀತಿ ಕಂದಾಯ ಹೆಚ್ಚು ಮಾಡುವುದು ಅಪರಾಧ ಎಂದು ಹೇಳಬೇಕಾಗಿದೆ. ತಾವು ಎಮರ್‌ಜೆನ್ಸಿಯಲ್ಲಿ ಮಾಡಿದಂತೆ, ಈಗಲೂ ಏನು ಬೇಕಾದರೂ ಮಾಡಬಹುದು ಆದರೆ ಅದು ನ್ಯಾಯವಲ್ಲ ಅದು ಅಪರಾಧವಾಗುತ್ತದೆ ಅದನ್ನು ಮಾಡಬೇಡಿ ಎಂದು ಹೇಳುತ್ತೇನೆ ಒಂದು ವೇಳೆ ತಾವು ಏನಾದರೂ ಕಂದಾಯ ಜಾಸ್ತಿ ಮಾಡಿದ್ದೇ ಆದರೆ ತಾವು ಬೆಂಗಳೂರು ನಗರದಲ್ಲಿ ಓಡಾಡಲಿಕ್ಕೆ ಆಗುವುದಿಲ್ಲ, ರಸ್ತೆಯಲ್ಲಿ ತಿರುಗಾಡುವುದಕ್ಕೆ ನಿಮ್ಮನ್ನು ಜನರಂತು ಖಂಡಿತಾ ಬಿಡುವುದಿಲ್ಲ ತಾವು ಕಾರಿನಲ್ಲಿ ಓಡಾಡಬಹುದು, ಆದರೆ ತಮ್ಮನ್ನು ರಸ್ತೆಯಲ್ಲಿ ಎಲ್ಲಿಯೂ ಕೂಡ ತಿರುಗಾಡುವುದಕ್ಕೆ ಮಾತ್ರ ಬಿಡುವುದಿಲ್ಲ ಎಂದು ಹೇಳುತ್ತೇನೆ. ಹಿಂದೆ ನಾನು ಮೇಯರ್ ಆಗಿದ್ದಂತ ಕಾಲದಲ್ಲಿ ಶ್ರೀ ವಿ ವಿ. ಗಿರಿಯವರು, ನಾನು ಪ್ರತಿ ಶನಿವಾರ ನಮ್ಮ ಪ್ರೋಗ್ರಾಂ ಪ್ರಕಾರ ನಗರಸಭೆಯ ಡಿವಿಜನ್ ಆಫೀಸುಗಳಿಗೆ ಭೇಟಿ ಕೊಟ್ಟು ಅಲ್ಲಿ ವಿಚಾರಣೆ ನಡೆಸುತ್ತಿದ್ದೆವು. ಅವರಿಗೆ ನನಗಿಂತ ಹತ್ತು ವರ್ಷ ಹೆಚ್ಚಿಗೆ ಆಗಿದ್ದರೂ ಅವರು ಬಹಳ ಜೋರಾಗಿ ಓಡಾಡುತ್ತಿದ್ದರು. ಒಂದು ಸಾರಿ ಹುಬ್ಬಳ್ಳಿಯಲ್ಲಿ ಜನತಾ ಪಕ್ಷದ ಕನವೆನ್‌ಷನ್ ಶುಕ್ರವಾರ ನಡೆಯಿತು, ಪ್ರತಿ ಶನಿವಾರ ನಾವು ನಮ್ಮ ಪ್ರೋಗ್ರಾಂ ಪ್ರಕಾರ ನಗರಸಭೆ ಡಿವಿಜನ್ನಗಳಿಗೆ ಭೇಟಿ ಕೊಡ ಬೇಕಾಗಿರುವುದರಿಂದ ಅಲ್ಲಿ ಶುಕ್ರವಾರ ಮಧ್ಯಾಹ್ನ ಮೂರು ಗಂಟೆಗೆ ಬಿಟ್ಟು ಅದೇ ದಿವಸ ರಾತ್ರಿ ಬೆಂಗಳೂರು ಸೇರಿದ್ದೇನೆ ಆ ರೀತಿ ಕೆಲಸ ನಡೆಸುತ್ತಿದ್ದೆವು. ತಾವು ಈಗ ಕಂದಾಯವನ್ನು ತಮ್ಮ ಕಾಲವಲ್ಲಿ ಜಾಸ್ತಿ ಮಾಡಲಿಕ್ಕೆ ಪ್ರಯತ್ನ ಮಾಡಿದರೆ ತಮಗೆ ಖಂಡಿತ ಅಪಕೀರ್ತಿ ಬರುತ್ತದೆ. ಇವೊತ್ತು ಚುನಾವಣೆ ಆಗುವಂತ ಸಂದರ್ಭ ಬರಬಹುದು, ಅಥವಾ ಹೋಗಬಹುದು, ಆದರೆ ನಿಮ್ಮ ಕೀರ್ತಿ ಹೆಚ್ಚಬೇಕಾದರೆ ಅಥವಾ ನಿಮ್ಮ ಕೀರ್ತಿ ಏನಾದರೂ ಇದ್ದು ಅದು ಉಳಿಯಬೇಕಾದರೆ ತಾವು ಈ ಕಂದಾಯವನ್ನು ಹೆಚ್ಚು ಮಾಡುವುದಕ್ಕೆ ಹೋಗಬಾರದು ಎಂದು ನಾನು ತಮ್ಮನ್ನು ವಿಶ್ವಾಸದಿಂದ ವಿನಂತಿ ಮಾಡಿ ಕೇಳಿಕೊಳ್ಳುತ್ತೇನೆ. ಅನಂತರ ತಾವು ಯಾವಾಗ ಕಾರ್ಪೊರೇಷನ್ ಎಲಕ್ಷನ್ ಮಾಡುತ್ತೀರಾ ಅದನ್ನು ತಿಳಿಸಬೇಕು.

ಉಪಾಧ್ಯಕ್ಷರು.—ಮಾನ್ಯ ಮಂತ್ರಿಗಳು ಉತ್ತರ ಕೊಡುವಂತಹ ಸಂದರ್ಭದಲ್ಲಿ ತಮ್ಮ ಪ್ರಶ್ನೆಗಳಿಗೆಲ್ಲಾ ಉತ್ತರ ತಿಳಿಸುತ್ತಾರೆ.

ಶ್ರೀ ಕೆ.ಎಂ. ನಾಗಣ್ಣ.—ಅಧ್ಯಕ್ಷರೆ, ಇವೊತ್ತು ಮಾನ್ಯಮಂತ್ರಿಗಳು ಏನೇನು ವಿಧೇಯಕಗಳನ್ನು ತಂದಿದ್ದಾರೆ ಅವುಗಳನ್ನೆಲ್ಲಾ, ಹಾಗೆ ಇಟ್ಟು ಚುನಾವಣೆಯಿಂದ ಗೆದ್ದು ಬಂದಂತ ಪ್ರತಿನಿಧಿಗಳು ಅವುಗಳನ್ನು ಕಾರ್ಯರೂಪಕ್ಕೆ ತರಲು ಅವಕಾಶ ಮಾಡಿ ಕೊಡಬೇಕು. ಈ ಮಾತನ್ನು ನಾನು ಏತಕ್ಕೆ ಹೇಳುತ್ತಿದ್ದೇನೆಂದರೆ ತಾವು ಸ್ವಲ್ಪ ದಿವಸ ಇರುತ್ತೀರಾ, ನಂತರ ಹೋಗಬಹುದು, ಆದರೆ ತಾವು ಕೆಟ್ಟ ಹೆಸರನ್ನು ಮಾತ್ರ ತೆಗೆದುಕೊಂಡು ಹೋಗಬೇಡಿ ಈ ಬಗ್ಗೆ ಕಾರ್ಪೊರೇಷನ್‌ನಲ್ಲಿ ಚುನಾಯಿಂತ ಜನತಾ ಪ್ರತಿನಿಧಿಗಳು ಬರುವವರೆಗೂ ಈ ಕೆಲಸವನ್ನು ಮಾಡಬೇಡಿ ಎಂದು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ. ಮೊದಲಿನಿಂದಲೂ ಸ್ವಂತ ಮನೆಯವರಿಗೆ ರಿಯಾಯಿತಿ ತೋರಿಸುವ ಪದ್ಧತಿ ಬೆಳೆದು ಬಂದಿದೆ. ಇವೊತ್ತು ಯಾರೋ ಒಬ್ಬ ಬಡಪಾಯಿ ಮನೆ ಕಟ್ಟಿಕೊಂಡು ಇರುತ್ತಾನೆ, ನಂತರ ಗಂಡ ಸತ್ತ ಹೆಂಡತಿ ಇರುತ್ತಾಳೆ, ತಾವು ಮನ ಬೆಲೆಯ ಆಧಾರದ ಮೇಲೆ ಟ್ಯಾಕ್ಸ್ ಹಾಕುತ್ತೇವೆ ಎಂದು ಹೇಳುವುದು ಯಾವ ನ್ಯಾಯ. ಅದನ್ನು ತಾವು ಸ್ವಲ್ಪ ಯೋಚನೆ ಮಾಡಬೇಕು ಎಂದು ಮಾನ್ಯಮಂತ್ರಿಗಳಲ್ಲಿ ಕೇಳಿಕೊಳ್ಳುತ್ತೇನೆ

ನಮ್ಮ ಕಬ್ಬನ್ ಪೇಟೆಯಲ್ಲಿ ಸೈಟುಗಳನ್ನು ಎಂಗಡಿಸಿದಾಗ ಜನಗಳನ್ನು ಕರೆದು, ಕರೆದು ಕೊಟ್ಟಿದ್ದೇವೆ. ಎಷ್ಟೋ ಸೈಟುಗಳನ್ನು ಉಚಿತವಾಗಿ ಕೊಟ್ಟಿದ್ದೇವೆ. ಆ ಸಂದರ್ಭದಲ್ಲಿ ಸೈಟುಗಳನ್ನು ತೆಗೆದು ಕೊಳ್ಳುವವರೇ ಇರಲಿಲ್ಲ. ಅಂಥ ಕಾಲವನ್ನು ನೋಡಿದ ನಾವುಗಳು ಇಂದು ಇಂಥ ಒಂದು ಕಾಲವನ್ನು ನೋಡಬೇಕಾಗಿ ಬಂದಿದೆಯಲ್ಲಾ ಎಂದು ವ್ಯಸನಪಡಬೇಕಾಗಿದೆ. ಏನೇ ಕಾಲ ಬದಲಾವಣೆ ಆಗಿದೆ ಎಂದರೂ ಅದಕ್ಕೆ ಒಂದು ನೀತಿ ನಿಯಮ ಬೇಡವೇ? ಈ ಸಂದರ್ಭದಲ್ಲಿ ನಾನು ಒಂದು ಮಾತನ್ನು ಸರ್ಕಾರಕ್ಕೆ ಕೇಳಿಕೊಳ್ಳುವುದೇನೆಂದರೆ ನಮಗೆ ಬಾಡಿಗೆ ಇಲ್ಲದಂತೆ ಇರಲು ಮನೆಗಳನ್ನು ಕೊಡಿ ಕಾಲಕ್ಕೆ ಸರಿಯಾಗಿ ಆ ಮನೆಗಳನ್ನು ರಿಪೇರಿ ಮಾಡಿಸಿಕೊಡಿ, ಕಂದಾಯವನ್ನು ಕೇಳಿಬೇಡಿ. ಹಾಗಾದರೂ ಮಾಡಿ. ಇವತ್ತು ವ್ಯಾಪಾರಸ್ಥರು ನೀವು ಹಾಕುವಷ್ಟು ಕಂದಾಯ ಕೊಡಬಹುದು. ಆದರೆ ಸರ್ಕಾರದಿಂದ ಸಾಲ ತೆಗೆದು ಕೊಂಡು ಮನೆ ಕಟ್ಟಿಸಿಕೊಂಡು ರಿಟೈರ್ಡ್ ಆದ ಬಡ ನೌಕರರನ್ನು ಇಷ್ಟು ಕಂದಾಯ ಕೊಡು ಎಂದರೆ ಅವನು ಎಲ್ಲಿಂದ ತಂದುಕೊಡಬೇಕು. ಗಂಡ ಸತ್ತ ವಿಧವೆಯರು ಎಲ್ಲಿಂದ ಇಷ್ಟು ಕಂದಾಯ ತಂದು ಕೊಡಬೇಕು? ತಮಗೆ ಅಧಿಕಾರ ಇದೆ, ಕೈಯಲ್ಲಿ ಪೆನ್ ಇದೆಯೆಂದು ಮನಸ್ಸಿಗೆ ಬಂದಂತೆ ಬರೆದು ಕಂದಾಯಗಳನ್ನು ಹಾಕಿದರೆ ಏನು ಪ್ರಯೋಜನವಾಯಿತು? ತಾವು ಅಧಿಕಾರಕ್ಕೆ ಬಂದಿದ್ದಕ್ಕೆ ಜನಗಳಿಗೆ ಏನಾದರೂ ಅನುಕೂಲಮಾಡಿಕೊಡಿ, ಇರುವ ವಾಸ್ತವಾಂಶಗಳನ್ನು ಹೇಳುವುದರಿಂದ ಮಾನ್ಯ ಸಚಿವರ ಮನಸ್ಸು ಕರಗುತ್ತದೆಂದು ನಾನು ತಿಳಿದುಕೊಂಡಿದ್ದೇನೆ.

ಮಾನ್ಯ ಅಧ್ಯಕ್ಷರೇ, ನನ್ನ ಮಾತುಗಳನ್ನು ಮುಗಿಸುವ ಮುನ್ನ ಸಚಿವರಿಗೆ ಕೊನೆಯದಾಗಿ ಒಂದು ಮಾತನ್ನು ಹೇಳುತ್ತೇನೆ. ನೀವು ಈ ಬೆಂಗಳೂರು ನಗರದಲ್ಲಿ ಯಾವ ಭಾಗದಲ್ಲೇ ಆಗಲಿ ನಿಂತು ಚುನಾವಣೆಯಲ್ಲಿ ಗೆದ್ದುಬರುವುದಕ್ಕೆ ಸಾಧ್ಯವಿಲ್ಲ. ನೀವು ಕಟ್ಟಿದ ಡಿಪಾಜಿಟ್ಟನ್ನೂ ಕೂಡ ಕಳೆದುಕೊಳ್ಳುತ್ತೀರಿ. ನಾನು ಇಷ್ಟು ಕಠಿಣವಾಗಿ ಮಾತುಗಳನ್ನಾಡಿದೆ ಎಂದು ತಮ್ಮ ಮನಸ್ಸಿಗೆ ಬೇಜಾರು ಮಾಡಿಕೊಳ್ಳದೆ, ಈ ಕಂದಾಯ ಹಾಕುವುದನ್ನು ಎಲೆಕ್ಷನ್ ಆಗುವವರೆಗಾದರೂ ಮುಂದಕ್ಕೆ ಹಾಕಬೇಕೆಂದು ಕೇಳಿಕೊಂಡು ಇಷ್ಟು ಮಾತುಗಳನ್ನಾಡಲು ಅವಕಾಶವನ್ನು ಕೊಟ್ಟ ಮಾನ್ಯ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

(ಅಧ್ಯಕ್ಷರು ಪೀಠವನ್ನಲಂಕರಿಸಿದರು)

† ಶ್ರೀ ಬಿ. ಸತ್ಯನಾರಾಯಣ ಸಿಂಗ್ (ಹೊಸಪೇಟೆ).—ಸನ್ಮಾನ್ಯ ಅಧ್ಯಕ್ಷರೇ, ಈ ದಿವಸ ಈ ಸದನದ ಮುಂದೆ ಮಾನ್ಯ ಪೌರಾಡಳಿತ ಮಂತ್ರಿಗಳೂ ಮತ್ತು ಯೂತ್ ಸರ್ವೀಸಸ್ ಮಂತ್ರಿಗಳು ಮುಂಡಿಸಿರುವ ಬೇಡಿಕೆಗಳನ್ನು ವಿರೋಧಿಸುತ್ತಾ ಹಲವಾರು ವಿಚಾರಗಳನ್ನು ಈ ಸಂದರ್ಭದಲ್ಲಿ ಪ್ರಸ್ತಾಪಮಾಡಲಿಚ್ಛಿಸುತ್ತೇನೆ.

ನನಗಿಂತ ಮೊದಲು ಮಾತನಾಡಿದಂಥ ಮಾನ್ಯ ಪುಟ್ಟಸ್ವಾಮಿಯವರು ಮಾತನಾಡುತ್ತಾ ಈಗ ನಮ್ಮ ರಾಜ್ಯದ ಎಲ್ಲೂ ಕೂಡ ಚುನಾಯಿತ ಪೌರಸಭೆಗಳು ಹೆಚ್ಚಿನ ಸಂಖ್ಯೆಯಲ್ಲಿಲ್ಲವೆಂದು ಹೇಳಿದ್ದಾರೆ. ಈ ರೀತಿ ಪೌರಸಭೆಗಳನ್ನು ರದ್ದು ಮಾಡಿರುವ ಪೈಕಿ ನಮ್ಮ ಹೊಸಪೇಟೆ ನಗರಸಭೆಯೂ ಒಂದಾಗಿದೆ. ನಾನು ೧೭ ವರ್ಷಗಳ ಕಾಲ ಅಲ್ಲಿ ಪೌರಸಭಾ ಸದಸ್ಯನಾಗಿದ್ದೆ. ಆ ನಗರಸಭೆಯು ಆಡಳಿತ ಬಹಳ ಚೆನ್ನಾಗಿ ಕೆಲಸ ಕಾರ್ಯಗಳನ್ನು ನಡೆಸಿಕೊಂಡು ಹೋಗುತ್ತಿತ್ತು. ಅಂಥ ಒಂದು ನಗರಸಭೆಯನ್ನು ತಾವು ರದ್ದುಮಾಡಿರುವುದು ಕೇವಲ ಒಂದು ರಾಜಕೀಯ ಉದ್ದೇಶದಿಂದ ಎನ್ನುವ ಮಾತನ್ನು ನಾನು ಹೇಳಬಯಸುತ್ತೇನೆ.

ತಾವು ಕೊಟ್ಟಿರುವ ಷೋಕಾಸ್ ನೋಟೀಸ್‌ನ್ನು ನೋಡಿದರೆ ಅದರಲ್ಲಿ ಎಲ್ಲಾ ಬರೀ ಕ್ಷುಲ್ಲಕ ಕಾರಣಗಳನ್ನೇ ತೋರಿಸಿದ್ದೀರಿ. ಅಲ್ಲಿ ಸ್ಟ್ಯಾಂಡಿಂಗ್ ಕಮಿಟೀಸ್ ಇಂತ್ರಿತರ ಕಮಿಟಿಗಳ ಕಾಲಾವಧಿ ಮುಗಿದು ಹೋಗಿದ್ದುದರಿಂದ ಮತ್ತೆ ಹೊಸದಾಗಿ ಈ ಕಮಿಟಿಗಳನ್ನು ಮಾಡಬೇಕೆಂದು ಸುಮಾರು ೧೨-೧೫ ಜನ ಸೇರಿ ಒಂದು ರೆಸಲ್ಯೂಷನ್ ಮಾಡಿ ಕಳುಹಿಸಿಕೊಟ್ಟಿತ್ತು. ಅಷ್ಟರಲ್ಲಿ ತಾವು ಈ ನಗರಸಭೆಯನ್ನು ರದ್ದು ಮಾಡಿದ್ದೀರಿ ತಾವು ಕೊಟ್ಟಿರುವ ಕಾರಣಗಳಲ್ಲಿ ಮೊದಲನೆಯದಾಗಿ ನಗರದ ರಸ್ತೆಗಳ ಪರಿಸ್ಥಿತಿ ಸರಿಯಾಗಿಲ್ಲವೆಂದು ಹೇಳಿದ್ದೀರಿ.

ಶ್ರೀ ಕಾಗೋಡು ತಿಮ್ಮಪ್ಪ.—ಹಾಗಾದರೆ ಇವತ್ತು ಸರ್ಕಾರದ ರಸ್ತೆಗಳೂ ಸರಿಯಾಗಿಲ್ಲದ್ದರಿಂದ ಈ ಸರ್ಕಾರವನ್ನೂ ರದ್ದು ಮಾಡಬೇಕಲ್ಲವೇ ?

ಶ್ರೀ ಬಿ. ಸತ್ಯನಾರಾಯಣಸಿಂಗ್.—ಇವತ್ತು ತಮ್ಮ ಅಡ್ಮಿನಿಸ್ಟ್ರೇಟರ್ ಅಧಿಕಾರಕ್ಕೆ ಬಂದಮೇಲೆ ಏನು ಮಾಡಿದ್ದಾರೆಂದು ನೋಡಿದರೆ ಒಂದು ರೋಡ್ ಕೂಡ ಆಗಿಲ್ಲ. ಪ್ರತಿ ತಿಂಗಳೂ ಸುಮಾರು ೫ ಸಾವಿರ ರೂಪಾಯಿ ಆಕ್ಟ್ರಾಯ್ ಕಡಿಮೆಯಾಗುತ್ತಿದೆ. ಕಳೆದ ವರ್ಷ ಸೆಪ್ಟೆಂಬರ್ ೭೬ ರ ವೇಳೆಗೆ ಸುಮಾರು ೧೫ ಸಾವಿರ ರೂಪಾಯಿ ಆಕ್ಟ್ರಾಯ್‌ನ್ನು ಒಂದೇ ತಿಂಗಳಲ್ಲಿ ಕಲೆಕ್ಟ್ ಮಾಡಿದ್ದೇವೆ ತಾವು ನೇಮಿಸಿರುವ ಆಡಳಿತಾಧಿಕಾರಿ ಬಂದಮೇಲೆ ಪ್ರತಿ ತಿಂಗಳೂ ಆಕ್ಟ್ರಾಯ್ ವಸೂಲಿಯಲ್ಲಿ ಸುಮಾರು ೫ ಸಾವಿರ ರೂಪಾಯಿ ಕಡಿಮೆಯಾಗುತ್ತಾ ಹಣಕಾಸಿನ ಪರಿಸ್ಥಿತಿ ಬಹಳ ದುರ್ಬಲವಾಗುತ್ತಿದೆ.

ಇನ್ನೊಂದು ಕಾರಣ ನಗರದಲ್ಲಿ ನೀರಿನ ವ್ಯವಸ್ಥೆ ಸರಿಯಾಗಿಲ್ಲವೆಂದು ತೋರಿಸಿದ್ದೀರಿ. ಇದರ ಬಗ್ಗೆ ಹೇಳುವುದಾದರೆ, ಆಗಿನ ಜನಸಂಖ್ಯೆಗನುಗುಣವಾಗಿ ೧೯೬೬ ರಲ್ಲಿ ೨೮ ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿ ನೀರಿನ ವ್ಯವಸ್ಥೆಯನ್ನು ಮಾಡಲಾಗಿತ್ತು. ಇವತ್ತು ಆ ನಗರದ ಜನಸಂಖ್ಯೆ ಸುಮಾರು ೨ ಲಕ್ಷಕ್ಕೆ ಮೀರುತ್ತಿದೆ. ನಮ್ಮ ಊರಿನಲ್ಲಿ ೪ ಕಾಲುವೆಗಳಿದ್ದರೂ ಕೂಡ ಈ ನೀರಿನ ಅಭಾವ ತಪ್ಪಿಸುವುದಕ್ಕಾಗುತ್ತಿಲ್ಲ. ನಮ್ಮ ಪುರಸಭೆಯೇ ಆಗಲಿ, ಅಥವಾ ನಿಮ್ಮ ಸರ್ಕಾರದಿಂದ ನೇಮಿಸಲ್ಪಟ್ಟ ಆಡಳಿತಾಧಿಕಾರಿಯೇ ಆಗಲಿ ಯಾರೇ ಅಧಿಕಾರಕ್ಕೆ ಬಂದರೂ ಒಂದೇ ದಿವಸದಲ್ಲಿ ಎಲ್ಲಾ ತೊಂದರೆಗಳನ್ನೂ ನಿವಾರಣೆ ಮಾಡುವುದಕ್ಕಾಗುವುದಿಲ್ಲ. ಒಟ್ಟಿನಲ್ಲಿ ಹೇಳುವುದಾದರೆ ನಿಮ್ಮ ಆಡಳಿತಾಧಿಕಾರಿ ಅಲ್ಲಿಗೆ ಬಂದಮೇಲೆ ಯಾವುದೇ ವಿಧವಾದ ಆಡಳಿತ ಸುಧಾರಣೆಯೂ ಆಗಿಲ್ಲ.

ಅಧ್ಯಕ್ಷರು.—ಈ ಪಟ್ಟಿಯಲ್ಲಿರುವ ಪ್ರಕಾರ ಇನ್ನೂ ೫-೬ ಜನ ಮಾನ್ಯ ಸದಸ್ಯರುಗಳು ಮಾತನಾಡುವವರಿದ್ದಾರೆ ; ಆದರೆ ಕಾಲಾವಕಾಶವಿಲ್ಲದ್ದರಿಂದ ಏನು ಮಾಡೋಣ ?

ಶ್ರೀ ಕೆ. ಎಂ. ನಾಗಣ್ಣ.—ನಾಳೆ ಬೆಳಿಗ್ಗೆ ಸ್ವಲ್ಪ ಬೇಗನೆ ಕುಳಿತುಕೊಳ್ಳೋಣ.

ಶ್ರೀ ಕೆ. ಬಿ. ಶಿವಯ್ಯ.—ನಾಳೆ ಬೆಳಿಗ್ಗೆ ಪಾರ್ಟಿ ಮೀಟಿಂಗ್ ಇರುವುದರಿಂದ ಮುಂಚೆ ಕುಳಿತುಕೊಳ್ಳುವುದಕ್ಕಾಗುವುದಿಲ್ಲ.

ಶ್ರೀ ಆರ್. ಗುಂಡೂರಾವ್.—ಇವತ್ತು ಚರ್ಚೆ ಮುಗಿಸಿ ನಾಳೆ ಪ್ರಶ್ನೋತ್ತರ ವೇಳೆಯನ್ನು ಬಿಟ್ಟು ಚರ್ಚೆಗೆ ಉತ್ತರ ಇಟ್ಟುಕೊಳ್ಳೋಣ.

ಅಧ್ಯಕ್ಷರು.—ಹಾಗಾದರೆ ಈಗ ಮಾನ್ಯ ಸತ್ಯನಾರಾಯಣ ಸಿಂಗ್‌ರವರು ತಮ್ಮ ಭಾಷಣವನ್ನು ಮುಂದುವರಿಸಬಹುದು.

ಶ್ರೀ ಬಿ. ಸತ್ಯನಾರಾಯಣ ಸಿಂಗ್.—ಇನ್ನು ಎಕ್ಸಸ್ ಆಫ್ ಪವರ್ಸ್ ಇನ್‌ಸ್ಟೆನ್ಸ್ ತೆಗೆದುಕೊಂಡು ನಗರಸಭೆಯ ಆಕ್ಟ್ರಾಯ್ ಸೂಪರಿಂಟೆಂಡೆಂಟ್‌ನ್ನು ಸಸ್‌ಪೆಂಡ್ ಮಾಡಿ ಎಂದು ರೆಸಲ್ಯೂಷನ್ ಪಾಸ್ ಮಾಡಿ ಶೋಕಾಸ್ ನೋಟೀಸ್ ಕೊಟ್ಟಿದ್ದರೂ ಈವತ್ತಿನವರೆಗೂ ಅವರನ್ನು ವಿಚಾರಣೆ ಮಾಡುವ ತೀರ್ಮಾನ ಕೈಗೊಂಡಿಲ್ಲ. ಆದರೆ ಮುನಿಸಿಪಾಲಿಟಿಯನ್ನು ಸೂಪರ್‌ಸೀಡ್ ಮಾಡುವುದಕ್ಕೆ ಮುಂದೆ ಬಂದಿರುತ್ತೀರಿ, ಇದು ಒಂದು ನಾಚಿಕೆಗೇಡಿನ ಕೆಲಸವಾಗಿರುತ್ತದೆ. ಹೀಗೆ ತೆಗೆದುಕೊಂಡಿರುವ ನಿಲುವು ರಾಜಕೀಯ ದೃಷ್ಟಿಯಿಂದ ಕೂಡಿರುವ ನಿಲುವಾಗಿರುತ್ತದೆ ಎಂದು ಹೇಳುವುದಕ್ಕೆ ಇಚ್ಛೆಪಡುತ್ತೇನೆ.

ಇನ್ನು ಬಳ್ಳಾರಿ ಮುನಿಸಿಪಾಲಿಟಿಯ ಬಗ್ಗೆ ಹೇಳುವುದಾದರೆ ಇಲ್ಲಿ ಯಾವ ವಿಧವಾದ ರಾಜಕೀಯವನ್ನು ತರಬೇಡಿ. ಅಲ್ಲಿ ದುರಾಡಳಿತವೇನಾದರೂ ನಡೆದಿದ್ದರೆ ದನ್ನು ಸುದಾರಣೆ ಮಾಡಬೇಕೆಂದು ಹೇಳುತ್ತೇನೆ ಪ್ರಜಾಪ್ರಭುತ್ವದಲ್ಲಿ ದುರಾಡಳಿತವನ್ನು ಸುಧಾರಣೆ ಮಾಡತಕ್ಕ ವಿಷಯದಲ್ಲಿ ಹೆಚ್ಚಿನ ಆಸಕ್ತಿಯನ್ನು ತೋರಿಸುವುದು ಒಳ್ಳೆಯದೆಂದು ತಮಗೆ ಒಂದು ಸೂಚನೆಯನ್ನು ಕೊಡುವುದಕ್ಕೆ ಇಚ್ಛೆಪಡುತ್ತೇನೆ.

ಸಣ್ಣ ಸಣ್ಣ ಟವನ್ ಮುನಿಸಿಪಾಲಿಟಿಗಳಲ್ಲಿ ಪೌರಕಾರ್ಮಿಕರು ಏನು ಇದ್ದಾರೆ ಅವರಿಗೆ ಸಂಬಳವನ್ನು ಕೊಡುವ ಪರಿಸ್ಥಿತಿಯಲ್ಲಿರುವುದಿಲ್ಲ. ಈ ಮುನಿಸಿಪಾಲಿಟಿಗಳಿಗೆ ಆಕ್ಟ್ರಾಯ್ ವರಮಾನವೂ ಕೂಡ ಸರಿಯಾಗಿ ಬರುತ್ತಾ ಇಲ್ಲ. ಇಂದು ಮುನಿಸಿಪಾಲಿಟಿಗಳನ್ನು ನಡೆಸುವುದೇ ಬಹಳ ಕಷ್ಟವಾಗಿರುತ್ತದೆ. ಆದ್ದರಿಂದ ನಮ್ಮ ಡಿಸ್ಟ್ರಿಕ್ಟ್‌ನಲ್ಲಿ ಅಮರಾವತಿ ಮುನಿಸಿಪಾಲಿಟಿಯನ್ನು ಹೊಸಪೇಟೆ ಮುನಿಸಿಪಾಲಿಟಿಗೆ ಸೇರಿಸಿದರೆ ಅದರ ಲಿಮಿಟ್ಸ್ ಜಾಸ್ತಿಯಾಗಿ ವರಮಾನವೂ ಜಾಸ್ತಿಯಾಗುತ್ತದೆ. ಆದ್ದರಿಂದ ಈ ಒಂದು ಕೆಲಸವನ್ನು ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ಕಂಪ್ಲಿ ಮುನಿಸಿಪಾಲಿಟಿಯಲ್ಲಿ ಇದುವರೆಗೂ ಚುನಾವಣೆಯಾಗಿಲ್ಲ. ಚುನಾವಣೆಯನ್ನು ನಡೆಸುವ ಕಾಲದಲ್ಲಿ ಎಮರ್ಜೆನ್ಸಿ ಬಂದುದರಿಂದ ಚುನಾವಣೆಯನ್ನು ರದ್ದು ಮಾಡಲಾಯಿತು. ಎಮರ್ಜೆನ್ಸಿ ತೆಗೆದು ಮೂರು ತಿಂಗಳಾದರೂ ಕೂಡ ನಗರಸಭೆಯೂ ಆಡಳಿತಾಧಿಕಾರಿಯಿಂದಲೇ ಮುಂದುವರಿದಿದೆ. ಅಧಿಕಾರಿಯನ್ನು ರದ್ದು ಮಾಡುವ ವಿಷಯದಲ್ಲಿ ಕೂಡಲೇ ತೀರ್ಮಾನ ಮಾಡಬೇಕೆಂದು ಹೇಳುವುದಕ್ಕೆ ಇಚ್ಛೆ ಪಡುತ್ತೇನೆ.

ಇನ್ನು ಮುನಿಸಿಪಲ್ ಅಡ್ಮಿನಿಸ್ಟ್ರೇಷನ್ ಬಗ್ಗೆ ಒಂದು ಮಾತನ್ನು ಹೇಳಬೇಕಾಗಿದೆ. ಗುಲ್ಬರ್ಗಾ ಡಿವಿಷನಲ್ ಕಮಿಷನರ ಆಫೀಸಿನಲ್ಲಿ ಸೀನಿಯಾರಿಟಿ ಪಟ್ಟಿ ಇನ್ನೂ ವರೆಗೂ ತಯಾರು ಮಾಡಿಲ್ಲ. ಯಾರು ೫೦೦ ರೂಪಾಯಿಗಳನ್ನು ಕೊಡುತ್ತಾರೆ ಅವರಿಗೆ ಅನುಕೂಲವಾಗಿ ಕೆಲಸವಾಗುತ್ತಿದೆ ಈ ರೀತಿ ಆಫೀಸಿನಲ್ಲಿ ದುರಾಡಳಿತ ನಡೆಯುತ್ತಿದೆ. ಜಗನ್ನಾಥರಾವ್ ಎಂದು ಆಫೀಸರ್ ಒಬ್ಬರು ಇರುತ್ತಾರೆ ಅವರು ಏನು ಬೇಕಾದರೂ ಅನುಕೂಲ ಮಾಡಿಕೊಡುತ್ತಾರೆಂದು ಹೇಳುತ್ತಾರೆ. ಸೀನಿಯಾರಿಟಿ ಬಗ್ಗೆ ಒಂದು ದೊಡ್ಡ ಪ್ರಮಾಣದಲ್ಲಿ ದುರ್ವ್ಯವಹಾರ ನಡೆಯುತ್ತಿದೆ. ಆದ್ದರಿಂದ ಇದರ ಬಗ್ಗೆ ಗಮನ ಕೊಡಬೇಕೆಂದು ಹೇಳುವುದಕ್ಕೆ ಇಚ್ಛೆ ಪಡುತ್ತೇನೆ.

ಇದಾದನಂತರ ತಮ್ಮ ರಿಪೋರ್ಟ್‌ನಲ್ಲಿ ತೋರಿಸುತ್ತೀರಿ. ಹೊಸಪೇಟೆಗೆ ೨೫,೬೬೭ ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿದ್ದೇವೆಂದು. ಇದು ಸರಿಯಾದ ರಿಪೋರ್ಟ್ ಅಲ್ಲವೆಂದು ಹೇಳಬಯಸುತ್ತೇನೆ. ೨೫ ಲಕ್ಷ ವರಮಾನ ಬರತಕ್ಕಂಥ ಈ ಮುನಿಸಿಪಾಲಿಟಿಗೆ ೧ ಲಕ್ಷ ರೂಪಾಯಿಗಳನ್ನು ಪಿ. ಡಬ್ಲ್ಯು. ಡಿ. ವರ್ಕ್ಸ್‌ಗಾಗಿ ಇಟ್ಟಿದ್ದಾರೆ.

ಇನ್ನು ಗೃಹ ನಿರ್ಮಾಣದ ಬಗ್ಗೆ ಹೇಳುವುದಾದರೆ ಲೋಕಾಸ್ಟ್ ಹೌಸಿಂಗ್ ಸ್ಕೀಮ್ ಎಂದು ಒಂದು ಯೋಜನೆಯನ್ನು ಕೈಗೊಂಡಿದ್ದೀರಿ. ಅದೆಲ್ಲ ಸೌಲಭ್ಯವೂ ಸೊಂಡೂರಿಗೆ ಹೋಗುತ್ತಿದೆ. ಸೊಂಡೂರಿಗೆ ಒಂದು ಬಡ್ಜೆಟ್ ಮಾಡಿ ನಮ್ಮ ವಿಧಾನಸಭೆ ಆಡಳಿತ ನಡೆಸುವುದಾದರೆ ನಮ್ಮದೇನೂ ಅಭ್ಯಂತರವಿಲ್ಲ. ಸ್ಮಾಲ್ ಇರಿಗೇಷನ್ ತೆಗೆದುಕೊಂಡರೂ ಕೂಡ ಅದರಲ್ಲಿಯೂ ಪ್ರಿಫರೆನ್ಸಿಯಲ್ ಟ್ರೀಟ್‌ಮೆಂಟ್ ಸರ್ಕಾರ ಕೊಡುತ್ತಿರುವುದು ಏತಕ್ಕೋ ಗೊತ್ತಾಗುತ್ತಿಲ್ಲ ಬಳ್ಳಾರಿ ಜಿಲ್ಲೆಯಲ್ಲಿ ವೀಕರ್ ಸೆಕ್ಷನ್‌ಗೆ ಲ್ಯಾಂಡ್ ಕೊಟ್ಟಿದ್ದಾರೆ. ಅದರಲ್ಲೂ ಪ್ರತ್ಯೇಕವಾಗಿ ಸೊಂಡೂರಿಗೆ ಮಾತ್ರ ಹಣ ಕೊಟ್ಟಿರುತ್ತಾರೆ. ಇದರಿಂದ ಸೊಂಡೂರಿನವರು ಚುನಾಯಿಸಿರುತ್ತಾರೆ, ಬೇರೆ ನಮ್ಮನ್ನು ಚುನಾಯಿಸಲಿಲ್ಲವೇ ಎಂದು ಕೇಳಬೇಕಾಗುತ್ತದೆ. ಕೇವಲ ಸೊಂಡೂರಿಗೆ ಮಾತ್ರ ಅನುಕೂಲ ಮಾಡುವುದಕ್ಕೆ ಸರ್ಕಾರವಿದೆ ಎಂದು ಭಾವಿಸಬೇಕಾಗುತ್ತದೆ. ಇದು ಒಂದು ಸಣ್ಣ ರಾಜ್ಯ ಎಂಟು ಆಣೆ ಭಾಗ ಕೂಡ ಇರುವುದಿಲ್ಲ.

ಇನ್ನೊಂದು ವಿಚಾರ ಲೋಕಾಸ್ಟ್ ಬಿಲ್ಡಿಂಗ್‌ಗಳಿಗಾಗಿ ಮೆಟೀರಿಯಲ್ಸ್‌ನ್ನು ಒದಗಿಸುವಾಗ ಸಿಮೆಂಟನ್ನು ಕೂಡ ಒದಗಿಸಿರುತ್ತೀರಿ. ಈ ರೀತಿ ಒದಗಿಸಿರುವ ಸಿಮೆಂಟನ್ನು ಅಲಾಟ್ ಮಾಡಿರುವುದು ಯಾರಿಗೋ ಆದರೆ ಯಾರೋ ಪಡೆದುಕೊಂಡಿರುತ್ತಾರೆ. ಇದನ್ನು ಪಡೆಯುವಾಗ ಕಂಪಲ್ಸರಿ ಸಿಮೆಂಟ್ ಪೋಲ್‌ಗಳನ್ನು ತೆಗೆದುಕೊಳ್ಳಬೇಕೆಂಬ ವ್ಯವಸ್ಥೆಯನ್ನೂ ಕೂಡ ಮಾಡಿರುತ್ತೀರಿ.

ಇದರಲ್ಲಿ ಇರುವುದು ೬ ಸಿಮೆಂಟ್ ಪೋಲ್ಸ್. ಈ ಸಿಮೆಂಟ್ ಪೋಲ್ಸ್‌ನ್ನು ಕಡ್ಡಾಯವಾಗಿ ಖರೀದಿ ಮಾಡಬೇಕೆಂದು ಇದೆ. ಶ್ರೀಮಾನ್ ಘೋರ್ಪಡೆಯವರ ಕಡೆಯವರುಗಳಿಂದಲೇ ಈ ಸಿಮೆಂಟ್ ಪೋಲ್ಸನ್ನು ಕೊಂಡುಕೊಳ್ಳಬೇಕಾಗಿದೆ. ಅವರಿಂದ ಕೊಂಡುಕೊಂಡರೆ ಮಾತ್ರ ಅಲಾಟ್‌ಮೆಂಟ್ ಸಿಕ್ಕುತ್ತದೆ ಇಲ್ಲದಿದ್ದರೆ ಇಲ್ಲ. ಇದರಿಂದ ಬಹಳ ಜನರಿಗೆ ತೊಂದರೆಯಾಗಿದೆ. ಈ ಬಗ್ಗೆ ನಾನು ಒಂದು ಕಾಲಿಂಗ್ ಅಟೆಂಷನ್ ನೋಟೀಸನ್ನು ಕಳಿಸಿದ್ದೇನೆ. ತೀವ್ರವಾಗಿ ಇದರ ಬಗ್ಗೆ ವಿಚಾರಣೆಯಾದರೆ ಬಹಳ ಅನುಕೂಲವಾಗುತ್ತದೆ.

6-00 P. M.

ಶ್ರೀ ಆರ್. ಗುಂಡೂರಾವ್.—ನೀವು ಕಾಲಿಂಗ್ ಅಟೆಂಷನ್ ನೋಟೀಸ್ ಕಳುಹಿಸಿದ್ದೀರಿ. ಅದರ ಬಗ್ಗೆ ನಾನು ನಾಳೆ ಉತ್ತರ ಕೊಡುತ್ತೇನೆ.

ಶ್ರೀ ಬಿ. ಸತ್ಯನಾರಾಯಣಸಿಂಗ್ —ಇದರ ಬಗ್ಗೆ ತಾವು ವಿಚಾರಣೆ ಮಾಡುವುದಾದರೆ ಈ ಬಗ್ಗೆ ಚಾಲೆಂಜ್ ತೆಗೆದುಕೊಳ್ಳುವುದಕ್ಕೆ ಸಿದ್ಧವಾಗಿದ್ದೇನೆ. ಇನ್ನು ಸಂಡೂರ್ ತಾಲ್ಲೂಕಿನಲ್ಲಿ ಜನತಾ ಹೌಸಿಂಗ್ ಸ್ಕೀಮ್ ಮೇರೆಗೆ ಮನೆಗಳನ್ನು ಕಟ್ಟಲು ಬೇರೆಯವರಿಗೆ ಕಂಟ್ರಾಕ್ಟ್ ಕೊಡುತ್ತಿದ್ದಾರೆ. ಅವರು ಇದರಲ್ಲಿ ಅವ್ಯವಹಾರ ಮಾಡುತ್ತಿದ್ದಾರೆಂದು ನಾನು ಗುರುತರವಾದ ಆಪಾದನೆಯನ್ನು ಮಾಡುತ್ತಿದ್ದೇನೆ. ತಾವು ಈ ಬಗ್ಗೆ ವಿಚಾರ ಮಾಡಬೇಕು. ಇನ್ನು ಮುಂದೆ ಈ ರೀತಿ ಆಗಬಾರದು. ಅಲ್ಲಿ ಒಬ್ಬ ಮನುಷ್ಯ ತಾನಾಗಿ ಮನೆ ಕಟ್ಟಿಕೊಳ್ಳಲು ಅದಕ್ಕೆ ಬೇಕಾದಂತ ವ್ಯವಸ್ಥೆಯನ್ನು ತಾವು ಮಾಡಬೇಕೆಂದು ನಾನು ಹೇಳಬಯಸುತ್ತೇನೆ. ಇದಾದನಂತರ ಈ ಯುವಕ ಚಟುವಟಿಕೆಗಳ ಬಗ್ಗೆ ಒಂದು ಮಾತನ್ನು ಹೇಳುತ್ತೇನೆ ನಮ್ಮಲ್ಲಿ ಈ ದಸರಾ ಸ್ಪೋರ್ಟ್ಸ್ ಮತ್ತು ಯುವಕ ಚಟುವಟಿಕೆಗಳು ವ್ಯವಸ್ಥಿತವಾದ ರೀತಿಯಲ್ಲಿ ನಡೆಯುತ್ತಾ ಇಲ್ಲ. ಇದನ್ನು ವ್ಯವಸ್ಥಿತವಾದ ರೀತಿಯಲ್ಲಿ ಮಾಡುವುದಕ್ಕೆ ಅವಕಾಶವಿದೆ ; ಆದ್ದರಿಂದ ವ್ಯವಸ್ಥಿತವಾದ ರೀತಿಯಲ್ಲಿ ದಸರಾ ಸ್ಪೋರ್ಟ್ಸ್ ಆಗಬೇಕಾದ್ದು ಅವಶ್ಯಕವೆಂದು ಹೇಳುತ್ತೇನೆ. ಇವತ್ತಿನ ದಿವಸ ದೊಡ್ಡ ದೊಡ್ಡ ಕುಸ್ತಿ ಪಂದ್ಯಗಳು ಬೆಂಗಳೂರು, ಮೈಸೂರಿಗೆ ಮಾತ್ರ ಸೀಮಿತವಾಗಿವೆ. ನಮ್ಮ ಭಾಗದಲ್ಲಿ ಈ ಕುಸ್ತಿ ಪಂದ್ಯಗಳು ನಡೆಯುತ್ತಾ ಇಲ್ಲ. ನಮ್ಮಲ್ಲಿ ಬಹಳ ಮಂದಿ ಕುಸ್ತಿ ಪಟುಗಳು ಇದ್ದಾರೆ. ಎಷ್ಟೋ ಕುಸ್ತಿಗಳನ್ನು ಮಾಡಿರುವಂತಹ ಉದಾಹರಣೆಗಳೂ ಇವೆ ಮೈಸೂರಿನಲ್ಲಿ ನಡೆದ ಕುಸ್ತಿ ಪಂದ್ಯದಲ್ಲಿ ನಮ್ಮ ಕುಸ್ತಿ ಪಟುಗಳು ಭಾಗವಹಿಸಿದ್ದಾರೆ. ಆದ್ದರಿಂದ ಈ ಕುಸ್ತಿ ಪಂದ್ಯಗಳು ಕರ್ನಾಟಕ ರಾಜ್ಯದ ವಿವಿಧ ಭಾಗಗಳಲ್ಲಿ ನಡೆಯುವಂತೆ ವ್ಯವಸ್ಥೆಯಾಗಬೇಕು. ಇದು ಬೆಂಗಳೂರು ಮತ್ತು ಮೈಸೂರಿಗೆ ಮಾತ್ರ ಸೀಮಿತವಾಗಬಾರದೆಂದು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ. ಈಗಾಗಲೇ ನಾನು ಹೇಳಿರುವಂತೆ ಲ್ಯಾಂಡ್ಸ್ ಅಕ್ವಿಜಿಷನ್ ಪ್ರಕಾರ ಅಕ್ವೈರ್ ಮಾಡಿಕೊಂಡಂತ ಲ್ಯಾಂಡ್ಸನ್ನು ವೀಕರ್ ಸೆಕ್ಷನ್ಸ್‌ಗೆ ಕೊಡಬೇಕೆಂದು ಅಲ್ಲಿ ಆ ಮುನಿಸಿಪಾಲಿಟಿಗಳಿಗೆ ಕೊಟ್ಟಿದ್ದಾರೆ ಈ ಬಗ್ಗೆ ನನ್ನ ಆಪಾದನೆಯೇನೆಂದರೆ ಅಲ್ಲಿಯ ಪುರಸಭಾಧ್ಯಕ್ಷರು ತಮ್ಮ ಎಲೆಕ್ಷನ್‌ಗೆ ಯಾರ್ಯಾರು ಸಹಾಯ ಮಾಡಿದ್ದಾರೆ ಅಂತಹವರಿಗೆ ಮಾತ್ರ ಲ್ಯಾಂಡ್ಸನ್ನು ಕೊಟ್ಟಿದ್ದಾರೆ. ಕಮಲಾಪುರ, ಹಂಗಲಿ ಮತ್ತು ತಕ್ಕಲಿಯಲ್ಲಿ ಈ ರೀತಿ ಕೊಟ್ಟಿದ್ದಾರೆ. ಯಾವ ಯಾವ ಜನರು ಅವರಿಗೆ ಅನುಕೂಲವಾಗುವಂತೆ ಕೆಲಸ ಮಾಡಿಲ್ಲ ಅಂತಹವರಿಗೆ ಲ್ಯಾಂಡ್ಸ್ ಕೊಟ್ಟಿಲ್ಲ. ಈ ತರಹ ಆಗಬಾರದು. ಇನ್ನು ಮುಂದೆ ಈ ತರಹ ನಡೆಯುವುದಕ್ಕೆ ಅವಕಾಶ ಮಾಡಿಕೊಡಬಾರದು ಎಂದು ಹೇಳುತ್ತೇನೆ. ಇನ್ನು ಈ ಅಂಡರ್‌ಗ್ರೌಂಡ್ ಡ್ರೈನೇಜ್ ಸ್ಕೀಮನ್ನು ತೆಗೆದುಕೊಂಡಿದ್ದಾರೆ. ಇದು ೮೦ ಲಕ್ಷ ರೂಪಾಯಿಗಳ ಒಂದು ಸ್ಕೀಮ್ ಇದೆ. ವಾಟರ್‌ಸಪ್ಲೈನ ಸೆಕೆಂಡ್ ಸ್ಟೇಜಿಗೆ ಲೆಕ್ಕ ಹಾಕಿದರೆ ಸುಮಾರು ೫೦ ಲಕ್ಷ ರೂಪಾಯಿಗಳು ಬೇಕಾಗಿದೆ ನಗರಸಭೆಯವರು ನಮ್ಮ ಆದಾಯ ಕಡಿಮೆಯಾಗಿದೆ ಎಂದು ಹೇಳುತ್ತಾರೆ. ಅಲ್ಲಿ ಆಡಳಿತಗಾರರು ಇದ್ದರೂ ಬಹಳ ಕಷ್ಟದಿಂದ ಇದನ್ನು ಸುಧಾರಿಸಬೇಕಾಗಿದೆ. ಈ ಬಗ್ಗೆ ಸಾಕಷ್ಟು ಸುಧಾರಣೆಯಾಗಿಲ್ಲ. ಆದ್ದರಿಂದ ತಾವು ಸೆಕೆಂಡ್ ಸ್ಟೇಜ್ ವಾಟರ್‌ಸಪ್ಲೈ ಸ್ಕೀಮಿನ ಬಗ್ಗೆ ಗಮನ ಕೊಡಬೇಕೆಂದು ಹೇಳುವುದಕ್ಕೆ ಬಯಸುತ್ತೇನೆ. ಇಷ್ಟು ಮಾತನಾಡಲು ಅವಕಾಶ ಕೊಟ್ಟಂಥ ಮಾನ್ಯ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

SRI B. B. SAYANAK (Belgaum).—I thank the Chair for having given me a chance to speak.

I strongly oppose the demands proposed by the hon'ble Minister for Municipal Administration. For paucity of time, I confine my remarks to Belgaum Municipality. The Belgaum Municipality was superseded in the 1973. Now the Hon. Minister has recently converted this Municipality into a Corporation. I strongly protest and condemn the Hon'ble Minister for giving the status of a Coporation to this Municipality because the population of Belgaum City according to 1971 census is 2,25,000 and the Cantonement's population is 40,000

The Hon'ble Minister has included the three Kannad villages which are far away from Belgaum City but he has excluded the nearest Marathi villages. The idea of the Hon'ble Minister is politically motivated. He has an eye on the politics. He is aiming to have a non-Marati person to be the Mayor of Belgaum City. But I would say that if there is an election, Marati man would become the Mayor. Lastime there was a Marati man elected as the President of the Municipality. If there is a Corporation, a Marati man will be elected as the Mayor, According to Section 3 of the Act, you have notified the area including the three Kannad villages. But you have not called for objections from the villages. Without observing this formality you have given the Belgaum Municipality the status of a Corporation. The Belgaum people including the Maharashtra Ekikarna Samiti and the Janata Party oppose this move. They oppose this move because you have not given an opportunity to the elected representatives of the people. If you have gutts, you can hold the election. The elected body would pass a resolution opposing the formation of a Corporation. When there was an Administrator' you have nominated an Advisory Body and that body has passed a resolution which has been accepted by you. This is not correct. You must first hold an election, take the consensus of the people and then give the status of a Corporation. During the last session, I had put a question asking whether there was a proposal to convert the Belgaum Municipality into a Corporation, the categorical answer was that there was no proposal. How this has come immediately ; who has sponsored this proposition ? There seems to be politics behind this decision and this sort of politics is not good.

You have appointed an Administrator. This Administrator's regime is bad and his style of functioning is not satisfactory. Some person from Sadasivanagar has built a house in the midst of a road. The Town Planning authority has not been consulted while giving a licence to this gentleman. Some people have filed an appeal to the Divisional Commissioner in this connection. Another man has constructed a house on town planning road in Vithal Devagalli Shahapur, The owner of this house happens to be the brother of the Town planning Authority. The administrtion of the elected body was far superior to the present administration. There are two Lingayats of Angol. They had applied for permission to construct houses. One person was given permission but the other person has been denied permission. The Executive Engineer of the Municipality is harassing the people. These things are going on. I am very sorry to raise these points on the floor of the House.

Regarding the Underground Drainage Scheme, this scheme is not yet complete. The scavangers are still working in the Belgaum Municipality. The Government has not acquired land for the construction of silage pits, consequently the mosquotos are harassing the public and there is nobody who is taking care of this menace. If the administration of Belgaum City Municipality is not running properly, then why you want this Corporation ?

Then regarding water supply. There is shortage of water supply in Angol, Majagaon, Vadgaon, Jane Belgaum and other industrial areas. The Honble Minister has said that we had completed the second phase of the water supply scheme, and the Chairman of the Water supply and Sewerage Board has inaugurated the second stage of the scheme. What the hon'ble Minister had stated on the floor of the House is not correct.

Regarding the widening of the road. I would say that what you have done is not correct. Six roads in the heart of the city have been proposed to be widened The Hon'ble Minister along with Mr. Koujalgi started measuring the road on Saturday which happens to the Bazar day. Don't you have sufficient staff to measure the road, Why you have gone for measuring. You want to show that you are going to do great justice to the people by widening the road. On that day, you have hampered the traffic and people are abusing the Minister.

Another thing is about City Improvement Trust Board. The Chairman of the Board is telling that he being a Congressman, widen the roads by putting bull-dozers. For that there was great agitation from the people. After knowing this the Chairman along with the bull-dozer went away.

Regarding corruption I want to say that after the appointment of these Administrators there is rampant corruption. When the elected bodies were there, everything was under control. Whenever you depute Revenue officers there they teach how to take money and grab money, but not doing any good work. This is the position there.

Regarding the City Improvement Trust Board Chairman he is given an honorarium of Rs. 200 along with a car. But the car is being used in the Parliamentary election and also every time he used to bring the car from Belgaum to Bangalore. Have you given that car for that purpose only? He has to use that car within the city of Belgaum but not to bring to Bangalore or to use for election purposes.

With regard to development charges, you have levied Rs. 800 as devel pment charges. When you acquire the lands of poor people you give Rs. 500 per guntha but as development charges you charge Rs. 800 per guntha. Formerly it was Rs. 100 only. Therefore, I request the Government to reduce this development charge of Rs. 800.

About political pension, I have given some names to you. A boy of 8 or 10 years in 1942 is getting now this political pension. There are so many such cases. Why you are not going to take action against such people?

SRI K. H. RANGANATH.—You must have given the names to the Government.

SRI B. B. SAYANAK.— I have given the names to the Hon'ble Minister during the last budget session period. But he has not acted upon.

With regard to Youth services, our Hon'ble Minister Sri Gundu Rao, who is holding this portfolio is always been using the youths for political purposes and they are not serving the people. This youth service is only meant for party work but not for nation building work.

Regarding Janata houses, you have constructed so many houses. But how many of those houses have been collapsed during the last year? In places like Dessur and Kudchi number of houses have been collapsed. Because you have not constructed properly those houses. By this way, you have done injustice to the people of that places.

For the construction of Janata house you give one thousand first and then Rs 1000. Therefore, I request the Government to see that if any man comes forward to construct good houses, you give this amount to him straight away without making any delay. In a place called Kudchi one Mr. Chougule has constructed a nice house by using this amount. The B.D.O. has certified that the house constructed by him was the best one in Belgaum division. Therefore, I request you to abolish this contract system and give them money straight away to construct houses. Your engineers are interested to give these works to their persons only and not to others.

Regarding the Beggar tax, you have given the authority to collect this tax to the Municipality. Three percent from octroi and three percent from building tax In Belgaum one lakh 8 thousand rupees towards Beggar tax from octroi and 43,500 rupees towards Building are being coll cted for six mounths. The Municipality is getting 3 lakhs of rupees per year as Beggar tax. But you have not removed the beggars from the Municipality. The Municipality author-

ities have not taken any steps to provide them shelters or residences. I request the Government to take into confidence the Municipality and construct houses or shelters to those beggars.

Regarding the Archaeological monuments, in Belgaum there is a very nice fort. The condition of the Belgaum fort is worse now. The walls of the fort are in a dilapidated condition. Therefore, I request the Archaeological Dept., to take action and see that they must construct the collapsed walls and maintain the historical fort of Belgaum properly. With these few words, I thank the Chair and conclude my speech.

† ಶ್ರೀ ಪಿ. ಡಿ. ಬಂಗೇರ (ಸೂಲ್ಯ).— ಮಾನ್ಯ ಅಧ್ಯಕ್ಷಿಣಿಯವರೇ, ಇಬ್ಬರು ಸಚಿವರುಗಳು ಮಂಡಿಸಿರುವ ಬೇಡಿಕೆಗಳನ್ನು ಅನುಮೋದಿಸುತ್ತಾ, ನಾನು ಒಂದು ೫ ನಿಮಿಷದಲ್ಲಿ ನಮ್ಮ ಮಂಗಳೂರು ಪುರಸಭೆಯ ಬಗ್ಗೆ ಎರಡು ಸೂಚನೆಗಳನ್ನು ಕೊಡಲಿಚ್ಛಿಸುತ್ತೇನೆ. ಮಂಗಳೂರು ಪುರಸಭೆಯಲ್ಲಿ ೪೧೪ ಜನ ಪೌರ ಕಾರ್ಮಿಕರು ಕೆಲಸ ಮಾಡುತ್ತಿದ್ದಾರೆ. ಮಂಗಳೂರಿನಲ್ಲಿ ದೊಡ್ಡ ದೊಡ್ಡ ಕಾರ್ಖಾನೆಗಳು ಮತ್ತು ವಿಮಾನ ನಿಲ್ದಾಣ ಇದೆ. ಅಂಥ ಪ್ರದೇಶದ ಪುರಸಭಾ ಕಾರ್ಮಿಕರಿಗೆ ವಾಸಿಸಲು ಮನೆಗಳಿಲ್ಲದೆ ಅವರು ಮಾರ್ಗದ ಬದಿಯಲ್ಲಿ ವಾಸಿಸುವಂಥ ಪರಿಸ್ಥಿತಿ ಬಂದಿದೆ. ಈ ಬಗ್ಗೆ ನಾವು ಹಿಂದೆಯೇ ಮನವಿ ಮಾಡಿಕೊಂಡಿದ್ದೇವೆ. ಆದರೂ ಸಹ ಇದುವರೆಗೆ ಮುನಿಸಿಪಾಲಿಟಿಯವರು ಮಂಗಳೂರಿನಲ್ಲಿ ಒಂದೇ ಒಂದು ಮನೆಯನ್ನು ಕಟ್ಟಲಿಲ್ಲ. ಆ ಪುರಸಭೆಗೆ ಆಕ್ಟ್ರಾಯಿನಿಂದ ವರ್ಷಕ್ಕೆ ೨೦ ಲಕ್ಷ ರೂಪಾಯಿ ಆದಾಯ ಬರುತ್ತದೆ. ಆ ಹಣದಲ್ಲಿ, ಸ್ವಂತ ಮನೆಗಳನ್ನು ಹೊಂದಿರತಕ್ಕ ಪೌರ ಕಾರ್ಮಿಕರಿಗೆ ಅವರ ಮನೆಗಳನ್ನು ರಿಪೇರಿ ಮಾಡಿಸಿಕೊಳ್ಳಲು ಕೊನೆ ಪಕ್ಷ ೩ ಸಾವಿರ ರೂಪಾಯಿಗಳನ್ನಾದರು ಮಂಜೂರ್ಮಾಡಬೇಕೆಂದು ಮಾನ್ಯ ಪುರಸಭಾ ಸಚಿವರನ್ನು ಕೇಳಿಕೊಳ್ಳುತ್ತೇನೆ. ಕೆಲವು ಪೌರ ಕಾರ್ಮಿಕರಿಗೆ ಮಾತ್ರ ಸ್ವಂತ ಮನೆಗಳಿವೆ. ಅಂಥ ಮನೆಗಳಿಗೆ ಉಳಿದಂತಹ ಹಣದಲ್ಲಿ ಎಲೆಕ್ಟ್ರಿಫಿಕೇಷನ್ ಆಗಲಿ ಅಥವಾ ವಾಟರ್ ಫೆಸಿಲಿಟೀಸ್ ಆಗಲಿ ಮಾಡಿಸಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಮತ್ತೊಂದು ಶೋಚನೀಯವಾದ ವಿಚಾರ ಏನೆಂದರೆ, ಎರಡೂವರೆ ಲಕ್ಷ ಜನಸಂಖ್ಯೆ ಇರತಕ್ಕಂತಹ ಮಂಗಳೂರು ಮುನಿಸಿಪಾಲಿಟಿಯಲ್ಲಿ ೩೬ ಜನ ಮುನಿಸಿಪಲ್ ಕೌನ್ಸಿಲರ್ಸ್ ಇದ್ದು, ಆ ಪೈಕಿ ಕೇವಲ ಒಬ್ಬರೆ ಒಬ್ಬರು ಹರಿಜನ ಗಿರಿಜನರಿಗೆ ಸೇರಿದ ಮುನಿಸಿಪಲ್ ಕೌನ್ಸಿಲರ್ ಇದ್ದಾರೆ. ಇನ್ನು ಮುಂದಾದರು ಆ ಸಂಖ್ಯೆಯನ್ನು ಶೇಕಡಾವಾರು ಹೆಚ್ಚಿಸಬೇಕೆಂದು ಹೇಳ ಬಯಸುತ್ತೇನೆ. ಅವರು ಸಹ ಕಳೆದ ಒಂದೂವರೆ ವರ್ಷದಿಂದ ಅಸೌಖ್ಯದಿಂದಿದ್ದು ಕಳೆದ ತಿಂಗಳು ಮರಣ ಹೊಂದಿದರು. ಆ ಸೀಟನ್ನು ಆದಷ್ಟು ಬೇಗ ಭರ್ತಿ ಮಾಡಬೇಕೆಂದೂ ಮತ್ತು ಹರಿಜನ ಗಿರಿಜನ ಮುನಿಸಿಪಲ್ ಕೌನ್ಸಿಲರ ಸೀಟನ್ನು ಹೆಚ್ಚಿಸಬೇಕೆಂದು ಒತ್ತಾಯ ಮಾಡುತ್ತೇನೆ. ಇನ್ನು ಪೌರ ಕಾರ್ಮಿಕರ ಸಂಬಳದ ಬಗ್ಗೆ ಹೇಳುವುದಾದರೆ, ಇದುವರೆಗು ನಾರಾಯಣ ಪೈ ಅವರ ಶಿಫಾರಸ್ಸಿನ ಮೇರೆಗೆ ಸಂಬಳ ಕೊಡುವ ಬಗ್ಗೆ ಇತ್ಯರ್ಥವಾಗದೆ ಅವರಿಗೆ ಸರಿಯಾಗಿ ಸಂಬಳ ಸಿಕ್ಕಿಲ್ಲ. ಆ ಪೌರ ಕಾರ್ಮಿಕರಿಗೆ ವಾಷಿಂಗ್ ಫೆಸಿಲಿಟೀಸ್ ಆಗಲೀ, ಟೈಮ್ ಟು ಟೈಮ್ ಡ್ರೆಸ್ ಸಪ್ಲೈ ಆಗಲಿ ಇಲ್ಲ. ಅದನ್ನು ಆದಷ್ಟು ಬೇಗ ಕೊಡುವ ವ್ಯವಸ್ಥೆ ಮಾಡಲು ನಮ್ಮ ಸಚಿವರು ಮನಸ್ಸು ಮಾಡಬೇಕು. ಈ ಮುನಿಸಿಪಾಲಿಟಿಯಲ್ಲಿ ಜನತಾ ಹೌಸಿಂಗ್ ಸ್ಕೀಂ ಪ್ರಕಾರ ಮನೆಗಳನ್ನು ಕಟ್ಟುವಾಗ ಬಹಳ ಅನ್ಯಾಯವಾಗಿದೆ. ಅದೇನೆಂದರೆ, ಅಲ್ಲಿನ ಪೌರ ಕಾರ್ಮಿಕರಿಗೆ ಮಂಗಳೂರು ಪಟ್ಟಣದಿಂದ ಹೊರಗಡೆ ಜನತಾ ಸ್ಕೀಂನಲ್ಲಿ ಮನೆಗಳನ್ನು ಕೊಟ್ಟರೆ ಅವರಿಗೆ ಅಲ್ಲಿ ವಾಸಿಸುವುದಕ್ಕೆ ಆಗುವುದಿಲ್ಲ, ಏಕೆಂದರೆ ಅವರು ೬ ಗಂಟೆಯೊಳಗೆ ಮುನಿಸಿಪಾಲಿಟಿಯ ಕೆಲಸಕ್ಕೆ ಹಾಜರಾಗಬೇಕು. ಆದ್ದರಿಂದ ಅವರಿಗೆ ಮುನಿಸಿಪಾಲಿಟಿಗೆ ಸಮೀಪದಲ್ಲಿ ಮನೆಗಳನ್ನು ಕಟ್ಟಿ ಒದಗಿಸಬೇಕೆಂದು ಸಲಹೆ ಮಾಡುತ್ತೇನೆ.

ಇನ್ನು ಆಕ್ಟ್ರಾಯಿ ಬಗ್ಗೆ ಮಾತನಾಡುವುದಾದರೆ. ಆ ಬಗ್ಗೆ ಮಂಗಳೂರಿನ ಜನರು ಬಹಳ ಅಡಿಕೊಳ್ಳುತ್ತಾರೆ. ಏಕೆಂದರೆ ಒಂದು ತಿಂಗಳಲ್ಲಿ ಎಷ್ಟೋ ಲಕ್ಷ ರೂಪಾಯಿ ಆಕ್ಟ್ರಾಯಿ ಬರುತ್ತು. ಅದರಲ್ಲಿ ಶೇಕಡ ೨೫ರಷ್ಟು ಮಾತ್ರ ಮುನಿಸಿಪಾಲಿಟಿಗೆ ಬರುತ್ತದೆ, ಉಳಿದ ೭೫ರಷ್ಟು ಹೊರಗೆ ಹೋಗುತ್ತದೆ ಎಂದು ಹೇಳುತ್ತಾರೆ. ಆದಕಾರಣ ಇದು ಸುಳ್ಳೋ ನಿಜವೋ ಎಂಬುದನ್ನು ಪರಿಶೀಲಿಸಬೇಕೆಂದು ಕೇಳಿಕೊಳ್ಳುತ್ತೇನೆ. ೪೧೪ ಜನ ಪೌರ ಕಾರ್ಮಿಕರು ಕೆಲಸ ಮಾಡುತ್ತಿರುವ ಮುನಿಸಿಪಾಲಿಟಿಯೊಳಗೆ ಹರಿಜನ

ಗಿರಿಜನರಿಗೆ ಸಂಬಂಧಪಟ್ಟ ಹಾಗೆ ಒಬ್ಬರು ಇನ್‌ಸ್ಪೆಕ್ಟರು ಮತ್ತು ಒಬ್ಬರು ಟೈಪಿಸ್ಟರು ಇರುವರಲ್ಲದೆ ಬೇರೆ ಯಾವ ಕ್ಲರ್ಕ್‌ಗಳು ಕೂಡ ಇಲ್ಲ. ಇದನ್ನು ತಾವು ಗಮನದಲ್ಲಿಟ್ಟುಕೊಂಡ ಈ ಬಗ್ಗೆ ಆದಷ್ಟು ಬೇಗನೆ ತಕ್ಕ ವ್ಯವಸ್ಥೆ ಮಾಡಬೇಕೆಂದು ಹೇಳುತ್ತೇನೆ.

ಇನ್ನು ಕಾರ್ಪೊರೇಷನ್ ಬಗ್ಗೆ ಹೇಳುವುದಾದರೆ, ಮೈಸೂರು ಮತ್ತಿತರ ಕಡೆಗಳಲ್ಲಿ ಕಾರ್ಪೊರೇಷನ್ ಮಾಡುವಾಗ ಅಕ್ಕಪಕ್ಕದ ಹಳ್ಳಿಗಳನ್ನು ಸೇರಿಸಿ ಮಾಡಿದ ಹಾಗೆ ಮಂಗಳೂರಿಗೂ ಸಹ ಅಕ್ಕಪಕ್ಕದ ಹಳ್ಳಿಗಳನ್ನು ಸೇರಿಸಿ ಕಾರ್ಪೊರೇಷನ್ ಮಾಡಬಹುದು. ಆದುದರಿಂದ, ಇದಕ್ಕೆ ಆದಷ್ಟು ಬೇಗ ಅನುಮತಿ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಮಂಗಳೂರು ಮುನಿಸಿಪಾಲಿಟಿಯ ಮತ್ತು ಪೌರ ಕಾರ್ಮಿಕರ ಬಗ್ಗೆ ಹೇಳಬೇಕಾದುದು ಇನ್ನು ಬಹಳಷ್ಟು ವಿಚಾರಗಳಿವೆ. ಆದರೆ, ನಾನು ಮೊದಲೇ ಅಧ್ಯಕ್ಷಿಣಿಯವರಿಗೆ 5 ನಿಮಿಷದಲ್ಲಿ ಮುಗಿಸುತ್ತೇನೆಂದು ಮಾತು ಕೊಟ್ಟಿರುವುದರಿಂದ ನನ್ನ ಕರ್ತವ್ಯವನ್ನು ಐದೇ ನಿಮಿಷದಲ್ಲಿ ಮುಗಿಸಿ, ಇಷ್ಟು ಮಾತುಗಳನ್ನು ಆಡುವುದಕ್ಕೆ ಅವಕಾಶ ಕೊಟ್ಟ ಅಧ್ಯಕ್ಷಿಣಿಯವರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಕೋಣಂದೂರು ಲಿಂಗಪ್ಪ (ತೀರ್ಥಹಳ್ಳಿ).—ಮಾನ್ಯ ಅಧ್ಯಕ್ಷಿಣಿಯವರೇ, ಮಾನ್ಯ ಪುರಸಭಾ ಮಂತ್ರಿಗಳು ಹಾಗೂ ಯುವಜನ ಮಂತ್ರಿಗಳು ಮಂಡಿಸಿರತಕ್ಕ ಬೇಡಿಕೆಗಳನ್ನು ಸಂಪೂರ್ಣವಾಗಿ ವಿರೋಧಿಸುತ್ತಾ, ಎರಡು ಮಾತುಗಳನ್ನು ಆಡುವುದಕ್ಕೆ ಇಷ್ಟಪಡುತ್ತೇನೆ. ಮೊದಲನೆಯದಾಗಿ ಯುವಜನ ಖಾತೆಯ ಮಂತ್ರಿಗಳು ಏನು ಮಂಡಿಸಿದ್ದಾರೆ ಅದರ ಬಗ್ಗೆ ಹೇಳುವುದಕ್ಕೆ ಇಷ್ಟಪಡುತ್ತೇನೆ. ಮುಖ್ಯವಾಗಿ ಅವರು ಅಸಿಸ್ಟೆನ್ಸ್ ಟು ಯೂತ್ ಆರ್ಗನೈಸೇಷನ್ಸ್ ಎಂದು ಹೇಳಿದ್ದಾರೆ. ಇವತ್ತು ನಮ್ಮ ರಾಜ್ಯದಲ್ಲಿ ಯೂತ್ ಆರ್ಗನೈಸೇಷನ್ಸ್ ಎಂದು ಏನು ಇವೆ ಅವೆಲ್ಲ ಯುವಕ ಕಾಂಗ್ರೆಸ್ಸಿನವು ಆಗಿವೆ. ಯುವಕ ಕಾಂಗ್ರೆಸ್ ಬೇರೆ ಅಲ್ಲ, ಯುವಕ ಮಂಡಲಿ ಬೇರೆಯಲ್ಲ ಎಂದು ಹೇಳುತ್ತಿದ್ದ ಮಾತುಗಳೆಲ್ಲ ಇವತ್ತು ಎಲ್ಲಿ ಹೋದವು? ಇವತ್ತಿನ ದಿವಸ ಸರ್ಕಾರದವರು ಎಲ್ಲ ವರ್ಗದ, ಪಕ್ಷಗಳ ಛಾಯೆ ಇರತಕ್ಕ ಯುವಕ ಸಂಘಗಳಿಗೆ ಹಣವನ್ನು ಕೊಡುತ್ತಿಲ್ಲ. ಇವರು ಕೊಡುತ್ತಿರುವುದು ಯಾರು ಯುವಕ ಕಾಂಗ್ರೆಸ್ಸಿನವರಿದ್ದಾರೆ ಅವರಿಗೆ ಮಾತ್ರ. ಯುವಜನ ಮೇಳ ಎಂದು ಮಾಡುತ್ತಾರೆ. ಅಲ್ಲಿ ಎಲ್ಲ ಯೂತ್ ಕಾಂಗ್ರೆಸ್ಸಿನ ಹುಡುಗರಿಗೆ ಮಾತ್ರ ಅವಕಾಶ ದೊರೆಯುತ್ತದೆಯೇ ವಿನಹ ಬೇರೆ ಹುಡುಗರಿಗೆ ಅರ್ಹತೆ ಇದ್ದರೂ ಅವರನ್ನು ಸೇರಿಸಿಕೊಳ್ಳುವುದಿಲ್ಲ. ಈ ಇಲಾಖೆಯ ಮುಖಾಂತರ ಯೂತ್ ಕಾಂಗ್ರೆಸ್ಸನ್ನು ಬಲಪಡಿಸುವುದಕ್ಕೆ ಪ್ರಯತ್ನ ಮಾಡುತ್ತಿದ್ದಾರೆಯೇ ಹೊರತು ಬೇರೆಯಲ್ಲ. ಈ ಯುವಕ ಕಾಂಗ್ರೆಸ್ಸಿನಲ್ಲಿ ನಿಜವಾಗಿ ಮೂಲಭೂತವಾಗಿ ಇರಬೇಕಾದ ತತ್ವಗಳಿಲ್ಲವೆ ಇರುವುದರಿಂದ ಯುವಕ ಸಂಘ ಆದರಿಂದ ದೂರಕ್ಕೆ ಹೋಗುತ್ತಿದೆ. ಯುವಕ ಸಂಘಗಳ ಮೂಲಭೂತವಾದ ಗುರಿ ಏನು ಇರಬೇಕೆಂಬ ಬಗ್ಗೆ ನಮ್ಮೆಲ್ಲರ, ಇಡೀ ಭಾರತದ ಯುವಜನ ಸಂಘದ ಮಹಾನಾಯಕರಾದ ಸುಭಾಷ್‌ಚಂದ್ರಬೋಸರು ಏನು ಹೇಳಿದ್ದಾರೆಂಬ ಮಾತುಗಳನ್ನು ಮಾನ್ಯ ಅಧ್ಯಕ್ಷಿಣಿಯವರ ಅಪ್ಪಣೆ ಪಡೆದು ಓದಬಯಸುತ್ತೇನೆ.

> "ಸ್ನೇಹಿತರೇ, ಸಾಕ್ರಟೀಸ್, ಬುದ್ಧ ಮತ್ತು ಮಹಾವೀರರ ಕಾಲದಿಂದ ಆರಂಭವಾದ ಉತ್ತಮ ಜಗತ್ತಿನ ದರ್ಶನ ದೃಷ್ಟಿಯಿಂದ ಸ್ಫೂರ್ತಿಗೊಂಡು ಇಂದಿನವರೆಗೂ ಸಮಾಜದ ಪುನರ್ರಚನೆಯ ಪ್ರಯತ್ನಗಳು ಸಾಗುತ್ತಲೇ ಇವೆ ಇರುವುದೆಲ್ಲವ ಬಿಟ್ಟು ಇರದುದರೆಡೆಗೆ ತುಡಿವುದೆ ಜೀವನ ಎಂದು ಇಂದಿರುವ ಎಲ್ಲ ವ್ಯವಸ್ಥೆಗಳ ಬಗ್ಗೆ ಅತೃಪ್ತಿ ಅಸಮಾಧಾನ, ಅಸಹನೆ ಮತ್ತು ಆಕ್ರೋಶಗಳೇ ಯುವಕ ಅಥವಾ ತರುಣ ಚಳವಳಿಗಳ ಕಿರಣಕೇಂದ್ರವಾಗಿದೆ. ಈ ಸ್ವಭಾವವನ್ನು ಬಿಟ್ಟು, ಸಮಾಜ ಸೇವೆ, ಕ್ಷಾಮ ಪರಿಹಾರ, ಸರ್ಕಾರದ ಪ್ರಚಾರ ಈ ಮುಂತಾದ ಉದ್ದೇಶಗಳಿಗಾಗಿ ರಚಿತವಾದ ಯುವಕ ಸಂಘಗಳು ನಿಜವಾದ ಅರ್ಥದಲ್ಲಿ ಯುವಕ ಸಂಘಗಳಲ್ಲ. ತರುಣ ಸಂಘಗಳ ಆತ್ಮ, ಕ್ರಾಂತಿಕಾರವಾದುದೇ ಹೊರತು ಕೇವಲ ಪರಿವರ್ತನ ಪ್ರಿಯವಾದುದಲ್ಲ. ತರುಣ ಚಳವಳಿಗಳಲ್ಲಿ ಆತ್ಮ ವಿಶ್ವಾಸ ಮತ್ತು ಹೊಣೆಗಾರಿಕೆಗಳೊಂದಿಗೆ ಹೊಚ್ಚ ಹೊಸದಾದ ಹಾಗೂ ಉತ್ಕೃಷ್ಟವಾದ ಯುಗದಾರಂಭದ ಬಯಕೆ ಇರಬೇಕು"

ಇದನ್ನು ನೇತಾಜಿ ಸುಭಾಷ್‌ಚಂದ್ರಬೋಸರು ಅಂದೇ ಹೇಳಿ ಯುವಕ ಸಂಘದ ಗುರಿ ಆದರ್ಶಗಳು ಏನೇನು ಇರಬೇಕೆಂದು ಹೇಳಿದ್ದಾರೆ, ಅಂದೇ ಯುವಜನರನ್ನು ಎಚ್ಚರ ಮಾಡಿ ಸ್ವಾತಂತ್ರ್ಯ ಚಳುವಳಿಯಲ್ಲಿ ಹೋರಾಟ ಮಾಡಿದಂತಹ ನೇತಾಜಿಯಂಥವರ ಹೆಸರನ್ನು ನೆನಪುವವರಾಗಲಿ ಅವರ ಆದರ್ಶಗಳನ್ನು ಪಾಲಿಸುವವರಾಗಲಿ ಇವತ್ತಿನ ದಿವಸ ಬಹಳ ವಿರಳವಾಗಿದ್ದಾರೆ ಈಗ ಹಳೆಯ ಖಾತೆ ಮುಗಿಯುತ್ತ ಬಂದಿದೆ,

ಮುಗಿಸಬೇಕು, ಮುಗಿಸುತ್ತೇವೆ. ಇವತ್ತಿನ ದಿವಸ ಯುವಕ ಸಂಘಗಳಲ್ಲಿ ಏನಾಗಿದೆ ಎಂದರೆ ಮಂತ್ರಿಗಳ ಹೆಸರನ್ನು ಹೇಳಿಕೊಂಡು ತಿರುಗಾಡುತ್ತಿದ್ದಾರೆ. ಅದನ್ನೆಲ್ಲ ಬಿಟ್ಟು ಇನ್ನು ಮುಂದಾದರೂ ನೇತಾಜಿಯವರ ಆದರ್ಶಗಳನ್ನು ಅನುಸರಿಸುತ್ತಾ ಮುಂದೆ ಹೆಜ್ಜೆ ಇಡಬೇಕೆಂದು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ.

6-30 P. M.

ತಾವು ತರುಣ ತರುಣಿಯರಿಗೆ ಬಹಳ ಜನಗಳಿಗೆ ಸಹಾಯ ಮಾಡಿದ್ದೀರಿ. ಅವರ ಒಂದು ಪಟ್ಟಿ ಇದೆ. ಅದನ್ನು ನಾನು ಓದುವುದಕ್ಕೆ ಹೋಗುವುದಿಲ್ಲ. ೧೦೦ಕ್ಕೆ ೯೦ ಜನ ಬೆಂಗಳೂರು ಮೈಸೂರು, ದಾವಣಗೆರೆ ಹುಬ್ಬಳ್ಳಿ ಇಂಥಾ ದೊಡ್ಡ ದೊಡ್ಡ ಪಟ್ಟಣಗಳಲ್ಲೇ ಅವರಿಗೆ ಪೂರ್ತಿ ಸಹಾಯ ಮಾಡಿದ್ದೀರಿ, ನೂರಕ್ಕೆ ೯೮ ರಷ್ಟು ಜನಗಳು ಇರತಕ್ಕ ಹಳ್ಳಿಗಳಿಗೆ ಸಹಾಯವಾಗಿಲ್ಲ. ಹಳ್ಳಿಗಾಡಿನಲ್ಲಿರತಕ್ಕ ಯುವಕ ಯುವತಿಯರನ್ನು ಸಂಘಟನೆ ಮಾಡಿ ಅವರ ಪ್ರತಿಭೆಯನ್ನು ಪ್ರಕಾಶ ಮಾಡುವುದಕ್ಕೆ ಬೇಕಾದಂತಹ ಕೆಲಸವನ್ನು ಮಾಡಬೇಕು. ಇವೊತ್ತು ಪೇಟೆ ಪಟ್ಟಣಗಳಲ್ಲಿ ದೊಡ್ಡ ದೊಡ್ಡ ಶಹರಗಳಲ್ಲಿ ಕ್ರೀಡಾಪಟುಗಳು ಇದ್ದಾರೆ. ಇವರಷ್ಟೆ ಪ್ರತಿಭೆಯುಳ್ಳ ಕ್ರೀಡಾಪಟುಗಳು ಹಳ್ಳಿಗಳಲ್ಲಿ ಏನೂ ಇದ್ದಾರೆ. ಬೆಂಗಳೂರು ಮೈಸೂರು ಪಟ್ಟಣಗಳಲ್ಲಿರತಕ್ಕ ಕ್ರೀಡಾಪಟುಗಳನ್ನು ಮೀರಿಸತಕ್ಕ ಯೋಗ್ಯತೆ ಇರತಕ್ಕವರು ಹಳ್ಳಿಗಳಲ್ಲಿ ಸಿಕ್ಕುತ್ತಾರೆ. ನಮ್ಮ ಊರಿನಲ್ಲಿ ಒಬ್ಬಳು ತರುಣ ಅಥ್ಲೆಟಿಕ್ ಎಕ್ಸ್‌ಪರ್ಟ್ ಆಗಿದ್ದಾಳೆ. ಅವಳು ಅಖಿಲ ಭಾರತ ಮಟ್ಟದ ಕ್ರಿಡಾಪಟುವಾಗಿದ್ದಾಳೆ ನಮ್ಮ ತೀರ್ಥಹಳ್ಳಿಯಲ್ಲಿ ಒಳ್ಳೆಯ ಕ್ರೀಡಾಪಟುಗಳಾಗತಕ್ಕ ಯುವಕ ಯುವತಿಯರು ಹತ್ತಾರು ಜನ ಇದ್ದಾರೆ. ಆ ಯುವಕ ಯುವತಿಯರನ್ನು ಪ್ರಕಾಶನ ಮಾಡುವುದಕ್ಕೆ ರಚನಾತ್ಮಕವಾದ ಯಾವ ಒಳ್ಳೆಯ ಕೆಲಸವನ್ನೂ ಮಾಡಿಲ್ಲ. ಇನ್ನಾದರೂ ಆ ಕೆಲಸವನ್ನು ಮಾಡಬೇಕು ಎಂದು ನಾನು ಅಪೇಕ್ಷೆ ಮಾಡುತ್ತೇನೆ. ಕುಸ್ತಿ ಮಾಡತಕ್ಕ ಎರಡು ಮೂರು ಸಂಸ್ಥೆಗಳಿಗೆ ಸುಮಾರು ೧೨ ಸಾವಿರ ರೂಪಾಯಿಗಳನ್ನು ಕೊಟ್ಟಿದ್ದಾರೆ. ಬೆಂಗಳೂರು ಪೇಟೆಯಲ್ಲಿ ಕುಸ್ತಿ ಮಾಡತಕ್ಕವರು ಯಾರು ಇದ್ದಾರೆಯೋ ಗೊತ್ತಿಲ್ಲ. ಆ ಸಂಘದ ಅಧ್ಯಕ್ಷರು ಯಾರೋ ಗೊತ್ತಿಲ್ಲ. ಹಿಂದೆ ಮೈಸೂರಿನಲ್ಲಿ ಸಾಹುಕಾರು ಚನ್ನಯ್ಯನವರು ಗರಡಿ ಮನೆಗಳನ್ನು ಕಟ್ಟಿಸಿದರು ಆ ಗರಡಿ ಮನೆಗಳಿಗೆ ಇವರು ಎಷ್ಟು ಗ್ರಾಂಟ್ ಕೊಟ್ಟಿದ್ದಾರೆಯೋ ಗೊತ್ತಿಲ್ಲ. ನಮ್ಮ ಶಿವಮೊಗ್ಗದಲ್ಲಿ ಸಾಹುಕಾರರ ಸಿದ್ದಪ್ಪ ಎನ್ನುವವರ ಮಗ ಬಸಪ್ಪ ಎನ್ನುವವರು ಗರಡಿ ಮನೆಯನ್ನು ನಡಸುತ್ತಿದ್ದಾರೆ. ಅಂಥವರಿಗೆ ಪ್ರೋತ್ಸಾಹ ಕೊಡುವುದಿಲ್ಲ. ಹಳ್ಳಿಗಳಲ್ಲಿರತಕ್ಕ ಅನೂಚಾನವಾಗಿ ನಡೆಸಿಕೊಂಡು ಬಂದಿರತಕ್ಕ ಗರಡಿಮನೆಗಳಿಗೆ ಪ್ರೋತ್ಸಾಹ ಕೊಡಬೇಕು. ಪಂಜಾಬಿನಿಂದ ಒಬ್ಬ ಹುಡುಗನನ್ನು ಕರೆದುಕೊಂಡು ಬಂದು ಅವನಿಗೆ ದುಡ್ಡು ಖರ್ಚು ಮಾಡಿ ಬೆಳೆಸುತ್ತಿದ್ದಾರೆ. ಅವನು ಎಲ್ಲಿದ್ದಾನೆಯೋ ಗೊತ್ತಿಲ್ಲ. ಅವನೇನು ಘಟೋದ್ಘಜನಾಗುತ್ತಾನೋ ಏನೋ ಗೊತ್ತಿಲ್ಲ. ಪಂಜಾಬಿನಿಂದ ಹುಡುಗನನ್ನು ಕರೆದುಕೊಂಡು ಬೆಳೆಸಬೇಕಾದರೆ ಇಲ್ಲಿರತಕ್ಕ ಹುಡುಗರ ಗತಿ ಏನು ? ಆದ್ದರಿಂದ ನಮ್ಮಲ್ಲಿ ಅನೂಚಾನವಾಗಿ ನಡೆಸಿಕೊಂಡು ಬಂದಿರತಕ್ಕ ಗರಡಿ ಮನೆಗಳಿಗೆ ಪ್ರೋತ್ಸಾಹ ಕೊಟ್ಟರೆ ಅಲ್ಲಿಗೆ ಅನೇಕ ಯುವಕರು ಬರುತ್ತಾರೆ. ಬೆಂಗಳೂರಿನಲ್ಲಿ ಸದಾಶಿವನಗರದಲ್ಲಿರುವ ಒಂದು ಯೋಗಾಸನ ಶಾಲೆಗೆ ೧೦ ಸಾವಿರ ರೂಪಾಯಿಗಳನ್ನು ಕೊಟ್ಟಿದ್ದಾರೆ. ಆ ಆಶ್ರಮದಲ್ಲಿರತಕ್ಕ ಬ್ರಹ್ಮಚಾರಿ ಯಾರೋ ಗೊತ್ತಿಲ್ಲ. ಇದರ ಬಗ್ಗೆ ವಿವರಣೆಯನ್ನು ಕೊಡಬೇಕು. ಇಂಥಾ ಯೋಗಾಶ್ರಮಗಳು ಯಾವರೀತಿ ನಡೆಯುತ್ತವೆಯೋ ಗೊತ್ತಿಲ್ಲ.

ಅಧ್ಯಕ್ಷರು.—ತಿಳಿಯದೆ ಹೀಗೆ ಮಾತನಾಡುವುದಕ್ಕೆ ಹೋಗುವುದು ಸರಿಯಲ್ಲ. ನಾನು ಆ ಯೋಗಾಶ್ರಮವನ್ನು ನೋಡಿದ್ದೇನೆ. ಅದು ಒಳ್ಳೆಯ ಯೋಗಾಶ್ರಮ.

ಶ್ರೀ ಕೋಣಂದೂರು ಲಿಂಗಪ್ಪ.—ಅದು ಒಳ್ಳೆಯ ಯೋಗಾಶ್ರಮ ಆದರೆ ಕೊಡಿ. ಆದರೆ ದೆಹಲಿಯಲ್ಲಿರುವ ಧೀರೇಂದ್ರ ಬ್ರಹ್ಮಚಾರಿ ಯೋಗಾಶ್ರಮದಂತೆ ಇದ್ದರೆ ಹೇಗೆ ಕೊಡುವುದು ಎಂದು ನನ್ನ ಭಾವನೆ. ಒಳ್ಳೆಯ ಸೇವಾ ಸಂಸ್ಥೆಗಳು ಇಲ್ಲ ಎಂದು ನಾನು ಹೇಳುವುದಿಲ್ಲ. ಒಳ್ಳೆಯ ಸಂಸ್ಥೆಗಳು ಇವೆ. ಒಳ್ಳೆಯ ಸಂಸ್ಥೆಗಳು ಇದ್ದರೆ ಸಹಾಯ ಮಾಡಿ ಬೇಡ ಎಂದು ಹೇಳುವುದಿಲ್ಲ. ಬೆಂಗಳೂರಿನಲ್ಲಿರುವ ಗಾಲ್ಫ್ ಕ್ಲಬ್ಬಿಗೆ ಒಂದು ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದಾರೆ. ಆ ಕ್ಲಬ್ಬಿಗೆ ಯಾವ ಬಡವರು ಹೋಗುತ್ತಾರೆ. ಯಾವ ಯುವಕ ಯುವತಿಯರು ಹೋಗುತ್ತಾರೆ ? ಆ ಗಾಲ್ಫ್ ಕ್ಲಬ್ಬಿಗೆ ರಿಟೈರ್ ಆದವರೂ, ದೊಡ್ಡವರು ಆ ಗಾಲ್ಫ್ ಕ್ಲಬ್ಬಿಗೆ ಹೋಗುತ್ತಾರೆ.

ಅಧ್ಯಕ್ಷರ.—ಮಾನ್ಯ ಸದಸ್ಯರಿಗೆ ಸ್ಪೋರ್ಟಿವ್ ಸ್ಪಿರಿಟ್ ಇಲ್ಲ.

SRI M. S. KRISHNAN.—This Golf Clup is no way connected with the Yonth Welfare That Clup is only connected with the elite of the town They may take help from other Clubs like Rotary Club, Lions Club etc.,

ಶ್ರೀ ಕೋಣಂದೂರುಲಿಂಗಪ್ಪ.—ಇಂಥಾ ಶ್ರೀಮಂತರ ಕ್ರೀಡಾಂಗಣಗಳಿಗೆ ಹಣವನ್ನು ಕೊಡುವುದರ ಬದಲು ತಾಲ್ಲೂಕು ಮಟ್ಟದಲ್ಲಿ ಜಿಲ್ಲಾ ಮಟ್ಟದಲ್ಲಿ ಕ್ರಿಕೆಟ್ ಪೆವಿಲಿಯನ್‌ಗಳನ್ನು ಕಟ್ಟುವುದಕ್ಕೆ ಸಹಾಯ ಮಾಡಿದರೆ ಒಳ್ಳೆಯದು. ನಮಗೆ ೧೦ ಸಾವಿರ ರೂಪಾಯಿಗಳನ್ನು ಕೊಡಿ, ನಮ್ಮ ತೀರ್ಥಹಳ್ಳಿಯಲ್ಲಿ ಪೆವಿಲಿಯನ್ ಕಟ್ಟಿಸುತ್ತೇವೆ.

ಶ್ರೀ ಆರ್. ಗುಂಡೂರಾವ್.—ನಾನು ಒಂದುಸಾರಿ ಮಾನ್ಯ ಸದಸ್ಯರ ಕ್ಷೇತ್ರಕ್ಕೆ ಪ್ರವಾಸ ಹೋಗಿದ್ದೆ. ಆದರೆ ಆಕ್ಷೇತ್ರದ ಎಂ. ಎಲ್. ಎ. ಆದ ಇವರೇ ಆ ದಿವಸ ಅಲ್ಲಿ ಹಾಜರಿರಲಿಲ್ಲ.

ಶ್ರೀ ಕೋಣಂದೂರು ಲಿಂಗಪ್ಪ.—ಮಾನ್ಯ ಮಂತ್ರಿಗಳು ಎಲ್ಲೋ ಅರ್ಧ ರಾತ್ರಿಯಲ್ಲಿ ಬರುತ್ತಾರೆ ಎಲ್ಲೋ ಇರುತ್ತಾರೆ ಬರುತ್ತಾರೆ. ಅರ್ಧ ರಾತ್ರಿಯಲ್ಲಿ ಬಂದು ಬೆಳಗಿನ ಜಾವದಲ್ಲಿ ಹೋಗುತ್ತಾರೆ ಇವರು ಪ್ರೋಗ್ರಾಮ್ ಕೊಟ್ಟು ಬಂದಾಗ ನಾನು ಅಲ್ಲಿ ಇದ್ದೆ. ಅವರು ಬಂದಿದ್ದಂತಹ ಒಂದು ಸಭೆಗೆ ನಾನೇ ಅಧ್ಯಕ್ಷತೆಯನ್ನು ವಹಿಸಿದ್ದೆ ಅದಕಾರಣ ಇವರು ಬರುವಾಗ ಪ್ರೋಗ್ರಾಮ್ ಕೊಟ್ಟು ಬಂದರೆ ಒಳ್ಳೆಯದು. ಆಟಗಾರರಿಗೆ ಹಳ್ಳಿಗಾಡಿನಲ್ಲಿ ಹೆಚ್ಚಿನ ಪ್ರೋತ್ಸಾಹವನ್ನು ಕೊಡಬೇಕು ಎಂದು ನಾನು ಹೇಳುವುದಕ್ಕೆ ಇಚ್ಛೆಪಡುತ್ತೇನೆ.

ಇನ್ನೊಂದು ವಿಷಯವೇನೆಂದರೆ ಎಲ್ಲೆಲ್ಲಿ ಸ್ಟೇಡಿಯಂ ಕೆಲಸಗಳು ಅರ್ಧಂಬರ್ಧ ಆಗಿವೆ ಅವುಗಳನ್ನು ಮೊದಲು ಪೂರ್ತಿ ಮಾಡಬೇಕು. ಆ ನಂತರ ಹೊಸ ಸ್ಟೇಡಿಯಂಗಳನ್ನು ಕಟ್ಟುವುದಕ್ಕೆ ಸಾಧ್ಯವಾಗುತ್ತದೆ.

ಆ ಮೇಲೆ ಇವೊತ್ತು ನಮ್ಮ ಸರ್ಕಾರದವರು ಹೌಸಿಂಗ್ ಬೋರ್ಡು ಮುಖಾಂತರ ಮನೆಗಳನ್ನು ಕಟ್ಟುವುದರ ಬಗ್ಗೆ ಒಂದು ಮಾತುಕ್ಕೆ ಹೇಳಬೇಕಾಗಿದೆ. ಹೌಸಿಂಗ್ ಬೋರ್ಡುಗಳಿಂದ ಮನೆಕಟ್ಟಿಕೊಡುವುದಕ್ಕೆ ಸಹಾಯ ಮಾಡುತ್ತಿದ್ದಾರೆ. ನಮ್ಮ ಊರಿನ ಹತ್ತಿರ ಕಾಸರವಳ್ಳಿ ಎನ್ನುವಲ್ಲಿ ಹೌಸಿಂಗ್ ಬೋರ್ಡು ಮುಖಾಂತರ ೧೨ ಮನೆಗಳನ್ನು ಕಟ್ಟಿಸಿದ್ದಾರೆ ಆದರಲ್ಲಿ ೧೧ ಮನೆಗಳು ಬಿದ್ದು ಹೋಗಿವೆ. ಇದಕ್ಕೆ ಕಾರಣವೇನೆಂದರೆ ಒಂದು ಮನೆಗೆ ೨½ ಸಾವಿರ ರೂಪಾಯಿಗಳನ್ನು ಕೊಡುತ್ತಾರೆ. ಇದರಲ್ಲಿ ಒಂದು ಸಾವಿರ ರೂಪಾಯಿಗಳ ಮೆಟೀರಿಯಲ್ ಕೊಡುತ್ತಾರೆ. ಇದನ್ನು ಯಾರೂ ತೆಗೆದುಕೊಂಡು ಹೋಗುವುದಿಲ್ಲ. ಕಂಟ್ರಾಕ್ಟರು, ಬಿ. ಡಿ. ಒ. ಮತ್ತು ಇಂಜನಿಯರು ಇವರೆಲ್ಲರಿಗೂ ಕೊಟ್ಟು ೨ ೧/೨ ಸಾವಿರ ರೂಪಾಯಿಗಳಲ್ಲಿ ಒಂದೂವರೆ ಸಾವಿರ ರೂಪಾಯಿಗಳು ಉಳಿಯುತ್ತದೆ. ಈ ಒಂದೂವರೆ ಸಾವಿರ ರೂಪಾಯಲ್ಲಿ ಮನೆಯನ್ನು ಕಟ್ಟಿಕೊಟ್ಟರೆ ಅದು ಎಷ್ಟರಮಟ್ಟಿಗೆ ಭದ್ರವಾಗಿರಬೇಕೆಂಬುದನ್ನು ತಾವೆ ಯೋಚನೆ ಮಾಡಬೇಕು. ಇಂಥಾ ಮನೆಗಳು ನಮ್ಮ ಮಲೆನಾಡಿನಲ್ಲಿಗಾಳಿ ಮಳೆಗೆ ಬಿದ್ದುಹೋಗತಕ್ಕಂಥಾ ಪರಿಸ್ಥಿತಿ ಇದೆ. ಜನರು ಗುಡಿಸಲುಗಳನ್ನು ಕಟ್ಟಿಕೊಳ್ಳುವುದಕ್ಕೆ ಇಷ್ಟಪಟ್ಟರೆ ೨೫೦ ರೂಪಾಯಿಗಳ ಬೆಲೆ ಬಾಳು ಸಾಮಗ್ರಿಗಳನ್ನು ಕೊಡಲಾಗುತ್ತಿದೆ ೨೫೦ ರೂಪಾಯಿಗಳಲ್ಲಿ ಒಂದು ಬಚ್ಚಲು ಮನೆಯನ್ನೂ ಕಟ್ಟುವುದಕ್ಕೂ ಆಗುವುದಿಲ್ಲ. ಮನೆ ಇಲ್ಲದವರಿಗೆ ಮನೆಯನ್ನು ಕೊಡುತ್ತೇವೆ ಎಂದು ಹೇಳಿ ಒಂದು ಮನಗೆ ೧೦೦ ರೂಪಾಯಿಗಳನ್ನು ಹೊಡೆಯುತ್ತಾರೆ. ಈ ಯೋಜನೆಯ ಪ್ರಕಾರ ೩,೩೭೦ ಮನೆಗಳನ್ನು ಟ್ಟಿದ್ದೇವೆ ಎಂದು ಹೇಳುತ್ತಾರೆ. ಇದರಲ್ಲಿ ಒಂದು ಮನೆಗೆ ೧೦೦ ರೂಪಾಯಿಗಳಂತೆ ಎಷ್ಟು ಹಣವನ್ನು ಹೊಡೆದಿದ್ದಾರೆ ಎಂಬುದನ್ನು ಲೆಕ್ಕಹಾಕಿಕೊಳ್ಳಬೇಕು. ಅದಕ್ಕಾಗಿ ನಾನು ಹೇಳುವುದೇನೆಂದರೆ ಜನಗಳಿಗೆ ನೇರವಾಗಿ ಹಣ ಕೊಟ್ಟು ನಮಗೆ ಇಷ್ಟು ಚದರ ಕೊಡಿ, ನೀವೆ ಮನೆಗಳನ್ನು ಕಟ್ಟಿಕೊಳ್ಳಿ ಎಂದು ನಮ್ಮ ಹಳ್ಳಿಯವರಿಗೆ ಪೂರ್ತಿ ಅದರ ಸ್ವಾತಂತ್ರ್ಯವನ್ನು ಬಿಟ್ಟು ಕೊಟ್ಟರೆ ಅವರೆ ಮನೆಗಳನ್ನು ಕಟ್ಟಿಕೊಳ್ಳುತ್ತಾರೆ. ಇಷ್ಟು ಹೇಳಿ ಮಾನ್ಯ ಅಧ್ಯಕ್ಷರು ನನಗೆ ಇಷ್ಟು ಮಾತನಾಡುವುದಕ್ಕೆ ಅವಕಾಶವನ್ನು ಕೊಟ್ಟಿದ್ದಕ್ಕಾಗಿ ಅವರಿಗೆ ವಂದಿಸಿ ನಾನು ನನ್ನ ಮಾತನ್ನು ಮುಗಿಸುತ್ತೇನೆ!

† ಶ್ರೀ ಎಂ. ಎಸ್. ಕೃಷ್ಣನ್ (ಮಲ್ಲೇಶ್ವರಂ).—ಸನ್ಮಾನ್ಯ ಅಧ್ಯಕ್ಷರೇ, ಮಾನ್ಯ ಪೌರ ಸಚಿವರು ತಂದಿರತಕ್ಕಂಥಾ ಬೇಡಿಕೆಯನ್ನು ವಿರೋಧಿಸುತ್ತಾ ನಾನು ಒಂದೆರಡು ಮಾತುಗಳನ್ನು ಹೇಳುವುದಕ್ಕೆ ಇಚ್ಛಿಸುತ್ತೇನೆ. ಶ್ರೀಮಾನ್ ಪುಟ್ಟಸ್ವಾಮಿಯವರು ಮತ್ತು ಮಾನ್ಯ ಶ್ರೀಮಾನ್ ಕೆ. ಎಂ. ನಾಗಣ್ಣನವರು ಈ ಬಗ್ಗೆ ಹಲವಾರು ವಿಷಯಗಳನ್ನು ಪ್ರಸ್ತಾಪ ಮಾಡಿದ್ದಾರೆ ಅದರಲ್ಲೂ ಕೂಡ ಮಾನ್ಯ ನಾಗಣ್ಣನವರು ಬೆಂಗಳೂರು ಬಗ್ಗೆ ಅನೇಕ ವಿಷಯಗಳನ್ನು ಹೇಳಿದ್ದಾರೆ.

ಅಧ್ಯಕ್ಷರು.—ಶ್ರೀ ಕೆ. ಆರ್. ಶ್ರೀನಿವಾಸಲು ನಾಯಿಡುರವರೂ ಕೂಡ ಬೆಂಗಳೂರು ಬಗ್ಗೆ ಮಾತನಾಡಿದ್ದಾರೆ.

ಶ್ರೀ ಎಂ. ಎಸ್. ಕೃಷ್ಣನ್.—ಅವರು ಏನು ಮಾತನಾಡಿದರೋ ನನಗಂತೂ ಅರ್ಥವಾಗಲಿಲ್ಲಾ. ಅದು ಒಂದೇ ಕೊರತೆ ನನಗೆ.

ಮಾನ್ಯ ಪುಟ್ಟಸ್ವಾಮಿಯವರು ಮತ್ತು ಮಾನ್ಯ ಕೆ ಎಂ. ನಾಗಣ್ಣನವರು ಬಹಳ ಮುಖ್ಯವಾದ ವಿಷಯಗಳನ್ನು ಪ್ರಸ್ತಾಪ ಮಾಡಿದ್ದಾರೆ. ಇದರಲ್ಲಿ ಮುಖ್ಯವಾಗಿರುವುದು ನಮ್ಮ ರಾಜ್ಯದಲ್ಲಿ ಪುರಸಭೆಗಳು ಏನು ಇವೆ ಮತ್ತು ಎರಡು ಕಾರ್ಪೊರೇಷನ್‌ಗಳು ಏನು ಇವೆ ಇದರಲ್ಲಿ ಅನೇಕ ಪುರಸಭೆಗಳು ಮತ್ತು ಟೌನ್ ಮುನಿಸಿಪಾಲಿಟಿಗಳು ಮತ್ತು ಈ ಎರಡು ಕಾರ್ಪೊರೇಷನ್‌ಗಳು ಇನ್ನೂ ಕೂಡ ಆಡಳಿತಾಧಿಕಾರಿ ಕೈಯಲ್ಲಿ ಸೇರಿಕೊಂಡಿದೆ ಮೈಸೂರು ಮುನಿಸಿಪಾಲಿಟಿ ಬಗ್ಗೆ ಶ್ರೀಮಾನ್ ಪುಟ್ಟಸ್ವಾಮಿಯವರು ಬಹಳ ಚೆನ್ನಾಗಿ ಮಾತನಾಡಿದ್ದಾರೆ ಅದೇ ರೀತಿ ಬೆಂಗಳೂರು ಕಾರ್ಪೊರೇಷನ್ ಬಗ್ಗೆ ಶ್ರೀಮಾನ್ ಕೆ. ಎಂ. ನಾಗಣ್ಣನವರು ಸಹ ಚೆನ್ನಾಗಿ ಮಾತನಾಡಿದ್ದಾರೆ. ಇವು ಯಾವುದಕ್ಕೂ ಕೂಡ ಇನ್ನೂ ಚುನಾವಣೆ ನಡೆಸಿಲ್ಲಾ. ಈ ಬಗ್ಗೆ ಮಾನ್ಯ ಕೆ ಪುಟ್ಟಸ್ವಾಮಿಯವರು ಬಹಳ ಸುದೀರ್ಘವಾಗಿ ವಿವರಣೆ ಕೊಟ್ಟಿದ್ದಾರೆ. ನಮ್ಮ ರಾಜ್ಯದಲ್ಲಿ ಈ ಮುನಿಸಿಪಾಲಿಟಿಗಳಿಗೆ ಚುನಾವಣೆ ನಡೆಸದೆ ಹಾಗೆನೇ ಈ ಸರ್ಕಾರದವರು ಮುಂದುವರಿಸಿಕೊಂಡು ಹೋಗುತ್ತಿದ್ದಾರೆ. ಪ್ರಜಾಪ್ರಭುತ್ವದಲ್ಲಿ ಇವುಗಳಿಗೆ ಚುನಾವಣೆ ಮಾಡಬೇಕೆನ್ನುವುದನ್ನು ಅವರು ಒಪ್ಪಿಕೊಳ್ಳುತ್ತಾರೆ ಆದರೆ ನಡೆದುಕೊಳ್ಳುವ ರೀತಿಯನ್ನು ನೋಡಿದರೆ ಅದಕ್ಕೆ ವಿರುದ್ಧವಾಗಿ ನಡೆದುಕೊಳ್ಳುತ್ತಾರೆ. ಈ ರೀತಿ ಮಾಡಿ ಇವೊತ್ತಿನ ದಿವಸ ಈ ಪ್ರಜಾಪ್ರಭುತ್ವವನ್ನು ಕೊಲೆ ಮಾಡುತ್ತಿದ್ದೀರಿ ಅನ್ನುವುದು ಗೊತ್ತಾಗುತ್ತದೆ. ಈ ಬಗ್ಗೆ ಪೂರ್ತಿ ಅಂಕಿ ಅಂಶ ಗೊತ್ತಿಲ್ಲದೇ ಇದ್ದರೂ ಕೂಡ ಕೆಲವು ಅಂಕಿ ಅಂಶಗಳನ್ನಾದರೂ ತಿಳಿದುಕೊಂಡಿದ್ದೇನೆ.

ಶ್ರೀ ಕೆ. ಆರ್. ಶ್ರೀನಿವಾಸುಲು ನಾಯಿಡು.—ನಾವು ಏನೇನು ಒಳ್ಳೆಯದನ್ನು ಮಾಡಿದ್ದೇವೆ ಅನ್ನುವುದು ತಮಗೆ ಗೊತ್ತಿಲ್ಲವೇ ?

ಶ್ರೀ ಎಂ. ಎಸ್. ಕೃಷ್ಣನ್.—ನಾನು ಈಗ ಮಾತನಾಡುತ್ತಾ ಇರುವ ವಿಷಯ ಚುನಾವಣೆ ಬಗ್ಗೆ ಮಾತನಾಡುತ್ತಿದ್ದೇವೆ. ಪ್ರಜಾಪ್ರಭುತ್ವದಲ್ಲಿ ಚುನಾವಣೆ ನಡೆಸಬೇಕಾದ್ದು ನಿಮ್ಮ ಧರ್ಮ ಹಾಗೂ ನಿಮ್ಮ ಕರ್ತವ್ಯ. ಇವೊತ್ತು ಈ ಬಗ್ಗೆ ನಾನು ಕೆಲವು ಅಂಕಿ ಅಂಶಗಳನ್ನು ಮಾತ್ರ ಹೇಳುತ್ತೇನೆ. (೧) ಬೆಂಗಳೂರು ಡಿವಿಷನ್‌ಗೆ ಸೇರಿದ ಹಾಗೆ ೧೨ ಮುನಿಸಿಪಲ್ ಕೌನ್ಸಿಲ್ಸ್ ಮತ್ತು ಒಂದು ಸಿಟಿ ಕಾರ್ಪೊರೇಷನ್ ಒಟ್ಟು ೧೩ಕ್ಕೆ ಎಲೆಕ್ಷನ್ ನಡೆದಿಲ್ಲಾ. (೨) ಮೈಸೂರು ಮುನಿಸಿಪಾಲಿಟಿಗಳ ಬಗ್ಗೆ ಮಾನ್ಯ ಕೆ. ಪುಟ್ಟಸ್ವಾಮಿಯವರು ತುಂಬಾ ವಿವರಣೆ ಕೊಟ್ಟಿರುವುದರಿಂದ ನಾನು ಅದರ ಬಗ್ಗೆ ಹೇಳಬೇಕಾದ್ದಿಲ್ಲ. (೩) ಬೆಳಗಾಂ ಡಿವಿಷನ್‌ನಲ್ಲಿ ಸಿಟಿ ಮುನಿಸಿಪಾಲಿಟಿ ಒಂದು, ಟೌನ್ ಮುನಿಸಿಪಲ್ ಕೌನ್ಸಿಲ್ ೧೧, ಒಟ್ಟು ೧೨ಕ್ಕೆ ಎಲೆಕ್ಷನ್ ನಡೆದಿಲ್ಲಾ. (೪) ಬಿಜಾಪುರ ಡಿಸ್ಟ್ರಿಕ್ಟ್ ಒಳಗೆ ತೆಗೆದುಕೊಂಡರೆ ಸಿಟಿ ಮುನಿಸಿಪಲ್ ಕೌನ್ಸಿಲ್ ಒಂದು, ಟೌನ್ ಮುನಿಸಿಪಲ್ ಕೌನ್ಸಿಲ್ ೭, ಒಟ್ಟು ೮ಕ್ಕೆ ಇನ್ನೂ ಎಲೆಕ್ಷನ್ ನಡೆದಿಲ್ಲಾ. (೫) ಧಾರವಾಡ ಡಿಸ್ಟ್ರಿಕ್ಟ್‌ನೊಳಗೆ ೩ ಇದೆ, ಅದಕ್ಕೂ ಎಲೆಕ್ಷನ್ ನಡೆದಿಲ್ಲಾ. (೬) ಉತ್ತರ ಕನ್ನಡ ತೆಗೆದುಕೊಂಡರೆ ಅಲ್ಲಿ ೩ಕ್ಕೆ ಎಲೆಕ್ಷನ್ ನಡೆದಿಲ್ಲಾ. ಇದೇ ರೀತಿ ಇನ್ನೂ ಬೇರೆ ಬೇರೆ ಅಲ್ಲಲ್ಲಿ ಚುನಾವಣೆ ನಡೆಸಿಲ್ಲಾ. ಏತಕ್ಕೆ ಅಲ್ಲಿ ಚುನಾವಣೆ ನಡೆಸಿಲ್ಲವೋ ನಮಗಂತೂ ಅರ್ಥವಾಗುವುದಿಲ್ಲಾ. ಚುನಾವಣೆ ನಡೆಸದೇ ಇರುವುದಕ್ಕೆ ಕಾರಣ ಏನು ಅಂತ ಕೇಳಿದರೆ ನೀವೇನೋ ಒಂದು ಕಾರಣ ಹೇಳುತ್ತೀರಿ ಅದು ಅಷ್ಟು ಸಮಂಜಸವಾದ ಕಾರಣವಲ್ಲ. ನೀವು ಏನು ಹೇಳುತ್ತೀರಿ ಎಂದರೆ ನಾವು ಕಾನ್ಸ್ಟಿಟ್ಯೂಯೆನ್ಸಿ ಮಾಡಿ ಅದನ್ನು ಪಬ್ಲಿಷ್ ಮಾಡಬೇಕು. ಈ ಕಾರಣದಿಂದ ಅಲ್ಲಿ ಚುನಾವಣೆ ಮಾಡುವುದಕ್ಕಾಗಲಿಲ್ಲಾ ಅಂತ ಹೇಳುತ್ತೀರಿ. ಅದು ಅಷ್ಟು ಸಮಂಜಸವಾದ ಕಾರಣವಲ್ಲ. ಯಾರೇ ಆಗಲಿ ಈ ಪ್ರಜಾಪ್ರಭುತ್ವದಲ್ಲಿ ಚುನಾವಣೆ ನಡೆಸದೆ ಮುಂದುವರಿಯುವುದಕ್ಕೆ ಸಾಧ್ಯವಿಲ್ಲಾ. ಜನರಿಗೆ ಪೌರ ಹಕ್ಕುಗಳು ಏನು ಇವೆ ಅಂದರೆ ನಗರ ನೈರ್ಮಲ್ಯ ಇತ್ಯಾದಿ ಸೌಕರ್ಯಗಳು ಏನು ಇವೆ ಇದನ್ನು ನೋಡಿಕೊಳ್ಳಬೇಕಾದರೆ ಚುನಾವಣೆ ಮೂಲಕ ತಮ್ಮ ಪ್ರತಿನಿಧಿಗಳನ್ನು ಆರಿಸಿ ಪುರಸಭೆಗಳಿಗೆ ಏನು ಕಳುಹಿಸಿಕೊಟ್ಟಿರುತ್ತಾರೋ ಅವರಿಂದಲೇ ಮಾತ್ರ ಸಾಧ್ಯ ಎಂದು ಹೇಳುತ್ತೇನೆ. ಹೀಗೆಂದ ಮಾತ್ರಕ್ಕೆ ಅಧಿಕಾರಿಗಳು ಇದ್ದರೆ ಇದನ್ನು ಮಾಡುವುದಕ್ಕಾಗುವುದಿಲ್ಲವೇ ಎಂದು ಕೇಳಬಹುದು. ನಾನು ಈ ಬಗ್ಗೆ ಹೇಳಬೇಕಾದರೆ ಬೆಂಗಳೂರು ಉದಾಹರಣೆಯನ್ನೇ ತೆಗೆದುಕೊಳ್ಳಿ. ಇಲ್ಲಿ ಆಡಳಿತಾಧಿಕಾರಿಯಾಗಿರುವ ಶ್ರೀಮಾನ್ ಲಕ್ಷ್ಮಣರಾಯರು ಒಳ್ಳೆಯ ಅಧಿಕಾರಿಗಳೇ,

ಅವರು ಬೆಳಗಾದರೆ ಕಾರು ಹಾಕಿಕೊಂಡು ನಗರವನ್ನೆಲ್ಲಾ ಸುತ್ತು ಹಾಕುತ್ತಾರೆ ಎಷ್ಟೇ ಒಳ್ಳೆಯ ಅಧಿಕಾರಿಗಳಾಗಿದ್ದರೂ ಕೂಡ ಚುನಾಯಿತರಾದಂಥಾ ಪ್ರತಿನಿಧಿಗಳಿಗೆ ಇವರನ್ನು ಸಬ್‌ಸ್ಟಿಟ್ಯೂಟ್ ಮಾಡುವುದಕ್ಕೆ ಸಾಧ್ಯವಿಲ್ಲಾ. ತಮಗೆಲ್ಲಾ ಗೊತ್ತಿರುವ ಹಾಗೆ ಬೆಂಗಳೂರು ಕಾರ್ಪೊರೇಷನ್‌ನಲ್ಲಿ ಅನೇಕ ದುರ್ವ್ಯವಹಾರಗಳು ನಡೆಯುತ್ತಾ ಇವೆ, ಬೇಕಾದಷ್ಟು ಹಣ ಸೋರಿಹೋಗುತ್ತಾ ಇದೆ. ನಿಮಗೆ ಉದಾಹರಣೆ ಹೇಳುದಾದರೆ ೧೦ ವರ್ಷದ ಹಿಂದೆ ಈ ಕಾರ್ಪೊರೇಷನ್ನಿನ ಎಸ್ಟಾಬ್ಲಿಷ್‌ಮೆಂಟ್ ಛಾರ್ಜು ೧ ಕೋಟಿ ರೂಪಾಯಿ ಇದ್ದದ್ದು ಈಗ ೫-೬ ಕೋಟಿ ರೂಪಾಯಿ ಆಗಿದೆ. ಮತ್ತು ಟ್ಯಾಕ್ಸ್ ಬಗ್ಗೆ ಹೇಳುವುದಾದರೆ ಈಗ ೧೫ ಕೋಟಿ ರೂಪಾಯಿ ಬರುತ್ತಾ ಇದೆ. ಚುನಾಯಿತ ಪ್ರತಿನಿಧಿಗಳು ಇದ್ದಿದ್ದರೆ ಇದರಲ್ಲಿ ಇನ್ನೂ ೩ ಕೋಟಿ ರೂಪಾಯಿ ಜಾಸ್ತಿ ಮಾಡಬಹುದಾಗಿತ್ತು. ನಾನು ಇದರಲ್ಲಿರುವ ಅಧಿಕಾರಿಗಳು ಎಲ್ಲರನ್ನೂ ಕೆಟ್ಟವರು ಎಂದು ಹೇಳುವುದಿಲ್ಲಾ, ಒಳ್ಳೆಯ ಅಧಿಕಾರಿಗಳೂ ಇದ್ದಾರೆ. ಇದರಲ್ಲಿ ಲಂಚ ರುಷುವತ್ತುಗಳೂ ಕೂಡ ತಾಂಡವವಾಡುತ್ತಿದೆ. ಇದು ಬೆಂಗಳೂರಿನಲ್ಲಿ ಒಂದರಲ್ಲೇ ಅಲ್ಲ, ಎಲ್ಲಾ ಕಡೆಯೂ ನಡೆಯುತ್ತಾ ಇದೆ. ತಾವು ಕೇಳಬಹುದು ಚುನಾಯಿತ ಪ್ರತಿನಿಧಿಗಳು ಇದ್ದರೆ ಅವರು ಲಂಚ ತೊಡೆಯುವುದಿಲ್ಲವೇ ಎಂದು. ಕೆಲವು ಕಡೆ ಆಗಿರಬಹುದು. ಆದರೆ ಅವರು ಮತ್ತೆ ಚುನಾವಣೆಗೆ ಹೋದಾಗ ಆ ಜನಗಳೇ ಅವರಿಗೆ ಸರಿಯಾದ ಪಾಠ ಕಲಿಸುತ್ತಾರೆ. ಅತನನ್ನು ಮತ್ತೆ ಅವರು ಚುನಾಯಿಸುವುದಿಲ್ಲ. ಈ ಪಾಠ ತಮ್ಮ ಮುಂದೆ ಇಡುತ್ತೇನೆ. ಆದುದರಿಂದ ಆಡಳಿತಾಧಿಕಾರಿಯನ್ನು ನೇಮಿಸಿ ಚುನಾವಣೆ ನಡೆಸದೇ ಇರುವುದಕ್ಕೆ ತಾವು ಕೊಡುವಂಥಾ ಕಾರಣ ಅಷ್ಟು ಸಮಂಜಸವಾದುದಲ್ಲ ಎಂದು ಹೇಳುತ್ತೇನೆ. ಅಥವಾ ಯಾವುದಾದರೂ ಒಂದು ಉದ್ದೇಶ ಇಟ್ಟುಕೊಂಡು ಚುನಾವಣೆ ನಡೆಸದೇ, ಉದ್ದೇಶಪೂರ್ವಕವಾಗಿ ಮಾಡುತ್ತಿದ್ದೀರಾ ಎಂದು ಕೇಳಬೇಕಾಗಿದೆ, ಏಕೆಕ್ಕೆಂದರೆ ಬೆಳಗಾಂ ಮತ್ತು ನಿಪ್ಪಾಣಿಗಳಲ್ಲಿ ಸುಮಾರು ೧೫ ವರ್ಷದಿಂದಲೂ ಕೂಡ ಅಲ್ಲಿಗೆ ಚುನಾವಣೆ ನಡೆಸುವ ಬಗ್ಗೆ ಪ್ರಶ್ನೆಯನ್ನೆ ಎತ್ತಿಲ್ಲ. ಅದು ಹಾಗೆಯೇ ನಡೆದುಕೊಂಡು ಬಂದಿದೆ. ಈ ರೀತಿಯಾಗಿ ಒಂದು ಸರ್ವಾಧಿಕಾರವನ್ನು ತಪ್ಪಿಸಬೇಕು ಅನ್ನುವ ಉದ್ದೇಶದಿಂದಲೇ ಚುನಾವಣೆ ನಡೆಸಬೇಕು; ಅಂತ ಹೇಳುವುದು. ಇಲ್ಲದೇ ಹೋದರೆ ಇದರಿಂದ ಪ್ರಜಾಪ್ರಭುತ್ವಕ್ಕೆ ಕೊಡಲಿಪೆಟ್ಟು ಬೀಳುವ ಶಂಕೆ ಇದೆ. ಚುನಾವಣೆ ನಡೆಸದೇ ಇರುವುದು ಬರೀ ಮುನಿಸಿಪಾಲಿಟಿಗಳೇ ಅಲ್ಲ, ತಾಲ್ಲೂಕು ಬೋರ್ಡ್‌ಗಳು ಮತ್ತು ಪಂಚಾಯಿತಿಗಳು ಮತ್ತು ಯೂನಿವರ್ಸಿಟಿ ಸೆನೇಟ್‌ಗಳು ಸೇರಿವೆ. ಇದರಿಂದ ಅದರ ಕಾರ್ಯಾಚಟುವಟಿಕೆ ಆಗುತ್ತಾ ಇಲ್ಲ. ಅಥವಾ ನೀವೇನಾದರೂ ನಿಮ್ಮ ಸರ್ಕಾರದಲ್ಲಿ ಇದರ ಬಗ್ಗೆ ಏನಾದರೂ ಒಂದು ಕ್ಯಾಬಿನೆಟ್ ಡಿಸಿಷನ್ ತೆಗೆದುಕೊಂಡಿದ್ದೀರೋ ಏನೋ ನನಗಂತೂ ಗೊತ್ತಿಲ್ಲ. ಆಯಾಯ ಮಂತ್ರಿಗಳೇ ಗಟ್ಟಿಯಾಗಿ ಕೂತುಕೊಂಡು ಇರೋಣ ಎಂದು ಈ ರೀತಿ ಮಾಡಿದ್ದೀರೋ ಅನ್ನುವ ಶಂಕೆ ನನಗೆ ಬರುತ್ತದೆ. ಹೀಗೆ ಮಾಡಿದರೆ ನಾಳೆ ದಿವಸ ಜನ ನಿಮ್ಮನ್ನು ಮೆಚ್ಚುವುದಿಲ್ಲ. ಚುನಾವಣೆಗೆ ಒಂದಲ್ಲ ಒಂದು ದಿವಸ ನೀವು ನಿಲ್ಲಬೇಕಾಗುತ್ತದೆ, ಅವರ ಬೆಂಬಲ ಪಡೆದುಕೊಳ್ಳಬೇಕಾಗುತ್ತದೆ, ಅವಾಗ ಜನ ನಿಮ್ಮನ್ನು ಸುಮ್ಮನೇ ಬಿಡುವುದಿಲ್ಲ, ಛೀಮಾರಿ ಹಾಕುತ್ತಾರೆ. ಆದುದರಿಂದ ಈಗಲಾದರೂ ಕೂಡ ಜನಗಳಿಗೆ ಅನುಕೂಲ ಮಾಡಿಕೊಡಬೇಕಾದರೆ ಚುನಾವಣೆಗೆ ಅವಕಾಶ ಮಾಡಿಕೊಡಬೇಕೆಂದು ನಾನು ಒತ್ತಾಯಪೂರ್ವಕವಾಗಿ ಹೇಳುತ್ತೇನೆ. ಬಾಕಿ ವಿಷಯಗಳನ್ನು ಬೇರೆ ಸದಸ್ಯರು ಹೇಳಿರುವುದರಿಂದ ನಾನು ಇದರ ಬಗ್ಗೆ ಮಾತನಾಡುವುದಕ್ಕೆ ಹೋಗುವುದಿಲ್ಲಾ.

ಇನ್ನು ಎರಡನೇ ವಿಷಯ ಏನೆಂದರೆ ಇದು ಬಹಳ ಮುಖ್ಯವಾದಂಥ ವಿಷಯ. ತಮಗೆ ಮನವರಿಕೆಯಾಗಲಿ ಎಂದು ಹೇಳುತ್ತೇನೆ. ನಾನು ಈಗ ಹೇಳತಕ್ಕಂಥಾ ವಿಷಯ ತೆರಿಗೆ ವಿಷಯ. ಅದರಲ್ಲೂ ಬೆಂಗಳೂರಿನ ಕಾರ್ಪೊರೇಷನ್ನಿನವರು ಈ ಬಗ್ಗೆ ಜೂನ್ ೯ನೇ ತಾರೀಖಿನ ದಿವಸ ಒಂದು ನೋಟಿಫಿಕೇಷನ್ ಹೊರಡಿಸಿ ಅದನ್ನು ಜಾರಿಗೆ ತರುವಂತೆ ಮಾಡಿದ್ದಾರೆ. ಇದು ಬಹಳ ತೀರಾ ಅನ್ಯಾಯ. ಇದರ ಬಗ್ಗೆ ಎಷ್ಟು ಹೇಳಿದರೂ ಸಾಲದು. ಅವೆಲ್ಲಕ್ಕಿಂತಲೂ ಕೂಡ ಬಾಡಿಗೆದಾರರಿಗೆ ಬಹಳ ಕಷ್ಟವಾಗಿದೆ. ಇದರಿಂದ ಆ ಮಾಲೀಕರು ಹೊಸ ರೀತಿಯಲ್ಲಿ ಬಾಡಿಗೆ ವಸೂಲ್ಮಾಡುತ್ತಾರೇ ವಿನಾ ಹಳೇ ರೀತಿಯಲ್ಲಿ ಬಾಡಿಗೆ ವಸೂಲಾ ಮಾಡುವುದಿಲ್ಲ. ಈ ಬಗ್ಗೆ ನಾನು ಒಂದೆರಡು ಉದಾಹರಣೆಗಳನ್ನು ಈ ಸಂದರ್ಭದಲ್ಲಿ ತಮ್ಮ ಮುಂದೆ ಇಡಲು ಬಯಸುತ್ತೇನೆ. ಸಾಮಾನ್ಯವಾಗಿ ಒಬ್ಬ ಮನುಷ್ಯನಿಗೆ ಕಂದಾಯ ಎಷ್ಟು ಬೀಳುತ್ತದೆ ಎನ್ನುವುದಕ್ಕೆ ತಮಗೆ ಒಂದೆರಡು ಉದಾಹರಣೆಗಳನ್ನು ಹೇಳುತ್ತೇನೆ. ಸಾಮಾನ್ಯವಾಗಿ ಈಪೊತ್ತಿನ ಕಂದಾಯ ಎಷ್ಟು ಬೀಳುತ್ತದೆ ಎಂದರೆ ೧೦೦ಕ್ಕೆ ೧೦೦ರಷ್ಟು ಜಾಸ್ತಿಯಾಗಿ ಕಂದಾಯ ಬೀಳುತ್ತದೆ ಎಂದು ಎಂದು ಶ್ರೀಮಾನ್ ಕೆ. ಪುಟ್ಟಸ್ವಾಮಿಯವರು ಹೇಳಿದರು. ಅವರು ಈ ಬಗ್ಗೆ ವಿವರಗಳನ್ನೆಲ್ಲಾ

ಹೇಳಿದ್ದಾರೆ. ಅದು ಅಕ್ಷರಶಃ ನಿಜ ಎಂದು ನಾನೂ ಸಹ ಹೇಳುತ್ತೇನೆ. ಉದಾಹರಣೆಗೆ ಈವೊತ್ತು ಶ್ರೀ ಡಿ. ಕೆ. ನಾಯ್ಕರ್‌ರವರು ವಾಸವಾಗಿರುವ ಮನೆಯನ್ನೇ ತೆಗೆದುಕೊಳ್ಳಿ. ಸಾಮಾನ್ಯವಾಗಿ ಆ ಸೈಟಿನ ಡೈಮೆನ್‌ಷನ್ ೯೦' × ೧೫೦' ಇದ್ದರೆ ಅದು ಒಟ್ಟು ೧೫೦೦ ಚದರಗಜ ಆಗುತ್ತದೆ. ಅದಕ್ಕೆ ಈಗಿನ ಮಾರ್ಕೆಟ್ ದರದಂತೆ ಒಂದು ಚದರ ಗಜಕ್ಕೆ ೧೦೦ ರೂಪಾಯಿ ಅಂತ ಇಟ್ಟುಕೊಂಡರೂ ಕೂಡ ಆ ಜಾಗದ ಬೆಲೆ ೨ ಲಕ್ಷ ೫೦ ಸಾವಿರ ರೂಪಾಯಿ ಆಗುತ್ತದೆ. ಇನ್ನು ಇದರ ಮೇಲೆ ಬಿಲ್ಡಿಂಗ್ ಕಾಸ್ಟ್ ತೆಗೆದುಕೊಳ್ಳಿ. ಅದನ್ನು ಸುಮಾರು ೩೦ ಚದರ ಗಜದಲ್ಲಿ ಕಟ್ಟಿದ್ದಾರೆ ಒಂದು ಚದರ ಗಜಕ್ಕೆ ಈಗಿನ ದರದ ಪ್ರಕಾರ ೫ ಸಾವಿರ ರೂಪಾಯಿ ಅಂತ ಇಟ್ಟುಕೊಂಡರೂ ಕೂಡ ೧ ಲಕ್ಷ ೫೦ ಸಾವಿರ ರೂಪಾಯಿ ಆಗುತ್ತದೆ. ಅದರಲ್ಲಿ ನಿಮ್ಮ ಡಿಪ್ರಿಸಿಯೇಷನ್ ಏನು ಇದೆಯೋ ೧೦ ಅಥವಾ ೧೫ ಪರ್ಸೆಂಟ್ ಅಂತ ಏನು ಇಟ್ಟಿದ್ದೀರೋ ಅದರ ಪ್ರಕಾರ ೨೫ ಸಾವಿರ ರೂಪಾಯಿಯನ್ನು ಡಿಪ್ರಿಸಿಯೇಷನ್ ಅಂತ ತೋರಿಸಿದರೂ ಕೂಡ ಆ ಬಿಲ್ಡಿಂಗ್ ಕಾಸ್ಟ್ ೧ ಲಕ್ಷ ೨೫ ಸಾವಿರ ರೂಪಾಯಿ ಆಗುತ್ತದೆ. ಅಲ್ಲಿಗೆ ಒಟ್ಟು ನಿಮ್ಮ ಮನೆಯ ಬೆಲೆ ೩ ಲಕ್ಷ ೭೫ ಸಾವಿರ ರೂಪಾಯಿ ಆಗುತ್ತದೆ. ಇದಕ್ಕೆ ನಿಮ್ಮ ಪ್ರಕಾರ ೬ ಪರ್ಸೆಂಟ್ ಅಂತ ರೆಂಟಲ್ ವ್ಯಾಲ್ಯೂ ಅಂತ ಕಟ್ಟಿಕೊಂಡರೆ ಆ ಪ್ರಕಾರ ೨೨,೬೫೦ ರೂಪಾಯಿ ರೆಂಟಲ್ ವ್ಯಾಲ್ಯೂ ಆ ಮನೆಗೆ ಆಗುತ್ತದೆ. ಇದಕ್ಕೆ ನೀವು ಕಂದಾಯ ಎಷ್ಟು ಹಾಕುತ್ತೀರಿ ಎಂದರೆ ೨೦ ಪರ್ಸೆಂಟ್ ಟ್ಯಾಕ್ಸ್ ಪ್ಲಸ್ ಆ ಸೆಸ್, ಈ ಸೆಸ್ ಅಂತ ಇನ್ನೊಂದು ೬ ಪರ್ಸೆಂಟ್ ಆಗುತ್ತದೆ. ಒಟ್ಟು ೨೬ ಪರ್ಸೆಂಟ್ ಆ ಮನೆ ಮಾಲೀಕ ಕಾರ್ಪೊರೇಷನ್ನಿಗೆ ಕಂದಾಯ ಕೊಡಬೇಕಾಗುತ್ತದೆ. ಈ ಮೊಬಲಗು ಅವನಿಗೆ ಎಷ್ಟು ಆಗುತ್ತದೆ ಎಂದರೆ ೫೮೯೬ ರೂಪಾಯಿ ಆಗುತ್ತದೆ. ಇಷ್ಟು ಕಂದಾಯವನ್ನು ಅವರು ಕೊಡಬೇಕಾಗುತ್ತದೆ. ಇನ್ನೊಂದು ಉದಾಹರಣೆ ತೆಗೆದುಕೊಳ್ಳಿ. ಈಗ ನಾನು ಹೇಳಿದ್ದು ನಿಮ್ಮ ಮನೆದಾಯಿತು, ಈಗ ನನ್ನ ಮನೆ ವಿಚಾರ ತೆಗೆದುಕೊಳ್ಳಿ. ನನ್ನ ಮನೆ ಜಾಗದ ಡೈಮೆನ್‌ಷನ್ ೪೦' × ೬೦' ನಾನು ಈಗ ವಾಸವಾಗಿರುವ ಮನೆ. ಈಗ ನಾನು ಇದಕ್ಕೆ ೨೨೦ ರೂಪಾಯಿ ತೆರಿಗೆ ಕೊಡುತ್ತಾ ಇದ್ದೇನೆ. ನನ್ನ ಮನೆ ಅಸೆಸ್‌ಮೆಂಟ್ ಮಾಡುವಾಗ ಕಾರ್ಪೊರೇಷನ್ನಿನವರು ಬಂದಿದ್ದರು. ಅವರು ನನ್ನನ್ನು ಈ ಮನೆಯ ವಿವರಗಳನ್ನೆಲ್ಲಾ ಕೇಳಿದರು. ನಾನು ಹೇಳಿದೆ ಅವೆಲ್ಲಾ ನನಗೆ ಗೊತ್ತಿಲ್ಲ, ನೀವೇ ಅದನ್ನು ಅಸೆಸ್‌ಮೆಂಟ್ ಮಾಡಿಕೊಂಡು ಹೋಗಿ ಏನು ಲೆಕ್ಕಾಚಾರ ಬರುತ್ತದೋ ಅದನ್ನು ಹಾಕಿಕೊಳ್ಳಿ ಅಂತ ಹೇಳಿದೆ. ಅದರಂತೆ ಅವರೇ ನನ್ನ ಮನೆಯನ್ನು ಅಸೆಸ್‌ಮೆಂಟ್ ಮಾಡಿಕೊಂಡು ಹೋದರು, ಆಮೇಲೆ ಏನೋ ಒಂದು ಲೆಕ್ಕಾಚಾರದಂತೆ ನಿಗದಿ ಮಾಡಿ ಬಿಟ್ಟು ಹಳೆ ಕಂದಾಯ ಏನು ಇತ್ತೋ ಅದರಂತೆ ಹಾಕಿಬಿಟ್ಟರು. ನಾನು ಈ ಬಗ್ಗೆ ಯಾರಿಗೂ ಇನ್‌ಫ್ಲುಯೆನ್ಸ್ ಆಗಲಿ ಏನೇ ಆಗಲಿ ಮಾಡುವುದಕ್ಕೆ ಹೋಗಲಿಲ್ಲ. ಈಗ ನಿಮ್ಮ ಲೆಕ್ಕಾಚಾರದ ಪ್ರಕಾರ ನಾನು ಮೊದಲು ನಿಮ್ಮ ಮನೆಗೆ ಯಾವ ರೀತಿ ವಿವರಣೆ ಕೊಟ್ಟೆನೋ ಆ ಪ್ರಕಾರ ಈಗ ನನ್ನ ಮನೆಗೆ ಲೆಕ್ಕಾಚಾರ ಹಾಕಿದರೆ ೧೫೦೫ ರೂಪಾಯಿ ಕಂದಾಯ ಬರುತ್ತದೆ. ಈಗ ಈ ಮನೆಗೆ ೨೨೦ ರೂಪಾಯಿ ಏನು ಕಟ್ಟುತ್ತಿದ್ದೇನೋ ಅದಕ್ಕೆ ಬದಲಾಗಿ ಈವೊತ್ತಿನ ಹೊಸ ಕಂದಾಯದಂತೆ ೧೫೦೫ ರೂಪಾಯಿ ಕಟ್ಟಬೇಕಾಗುತ್ತದೆ. ಈ ಬಗ್ಗೆ ಬೇಕಾದರೆ ಇನ್ನೂ ಬೇಕಾದಷ್ಟು ವಿವರಗಳನ್ನು ಕೊಡುತ್ತೇನೆ. ಸಾಮಾನ್ಯವಾಗಿ ಬೆಂಗಳೂರು ನಗರದಲ್ಲಿರುವ ಜನರು ಹೆಚ್ಚಾಗಿ ೪೦' × ೬೦' ಇರುವ ಸೈಟನ್ನೇ ಇಟ್ಟುಕೊಂಡಿದ್ದಾರೆ. ಅಲ್ಲಿಗೆ ಒಟ್ಟು ಈ ದಿನಕ್ಕಿಂತ ೮ ಪಟ್ಟು ಅಷ್ಟು ಜಾಸ್ತಿಯಾಗುತ್ತದೆ. ಸಾಮಾನ್ಯವಾಗಿ ಬೆಂಗಳೂರಿನಲ್ಲಿ ಮನೆ ಕಟ್ಟಿಕೊಂಡು ವಾಸಮಾಡತಕ್ಕಂಥಾವರು ಲೋಯರ್ ಮಿಡಲ್ ಕ್ಲಾಸ್ ಪೀಪಲ್‌ನವರೇ ಜಾಸ್ತಿ. ಅವರಿಗೆ ಈ ಒಂದು ಸಣ್ಣ ಮನೆಗೆ ೧೦ರಷ್ಟು ೧೫ರಷ್ಟು ೫೦ರಷ್ಟು ಜಾಸ್ತಿ ಮಾಡಿದರೆ ಇದರ ಉದ್ದೇಶ ಏನು ಅನ್ನುವುದೇ ನನಗೆ ಅರ್ಥವಾಗುವುದಿಲ್ಲ. ಈ ರೀತಿ ಏತಕ್ಕೋಸ್ಕರವಾಗಿ ಮಾಡುತ್ತೀರೋ ಅಥವಾ ಯಾರಿಗೋಸ್ಕರ ಮಾಡುತ್ತೀರೋ ಗೊತ್ತಾಗುವುದಿಲ್ಲ. ಯಾರಿಗೆ ಕೊಡುವುದಕ್ಕೆ ಚೈತನ್ಯ ಇದೆಯೋ ಅಂಥಾವರ ಮೇಲೆ ತೆರಿಗೆ ಹಾಕಿ. ಹೊಟ್ಟೆ ತುಂಬಿರುವವರಿಗೆ ಏನು ಬೇಕಾದರೂ ಟ್ಯಾಕ್ಸ್ ಹಾಕಿ, ಬೇಡ ಅನ್ನುವುದಿಲ್ಲ. ಅದು ಬಿಟ್ಟು ಈ ಬಡವರ ಮೇಲೆ ಹೊಟ್ಟೆಗೆ ಹೊಡೆಯುವುದು, ಅವರ ಮೇಲೆ ಹಟ ಸಾಧಿಸುವುದು ಸರಿಯೋ ? ಈ ಬಗ್ಗೆ ನೀವು ಮಾಡುತ್ತಾ ಇರುವ ನೀತಿ ನನಗಂತೂ ಅರ್ಥವಾಗುವುದಿಲ್ಲ. ಮಾನ್ಯ ಕೆ. ಪುಟ್ಟಸ್ವಾಮಿಯವರು ಹೇಳಿದ ಹಾಗೆ ಮನೆಯಲ್ಲಿ ವಾಸ ಮಾಡತಕ್ಕಂಥಾ ಬಾಡಿಗೆದಾರರು ಈವೊತ್ತಿನ ದಿವಸ ಬಹಳ ಕಳವಳಕ್ಕೆ ಈಡಾಗಿದ್ದಾರೆ ಎಂದು ನಾನೂ ಸಹ ಹೇಳುತ್ತೇನೆ. ಹೇಗೆಂದರೆ ಸಾಮಾನ್ಯವಾಗಿ ದುಡ್ಡು ಬೇಕಾದಷ್ಟು ಇರುವಂಥಾವರು, ಬೆಂಗಳೂರಿನಲ್ಲಿ ಶ್ರೀಮಂತರು ಜಾಗಗಳನ್ನು ತೆಗೆದುಕೊಂಡು ಮನೆಗಳನ್ನು ಕಟ್ಟಿಬಿಟ್ಟು ಬಾಡಿಗೆಗೆ ಕೊಟ್ಟಿರುತ್ತಾರೆ. ಸಾಮಾನ್ಯವಾಗಿ ಆ ಮನೆಯಲ್ಲಿ ಲೋಯರ್ ಮಿಡಲ್‌ಕ್ಲಾಸ್ ಪೀಪಲ್ ಇರುವುದೇ ಜಾಸ್ತಿ.

ಅವರು ಈವೊತ್ತಿನ ದಿವಸ ಬಹಳ ಪೇಚಾಟಕ್ಕೆ ಸಿಕ್ಕಿ ಹಾಕಿಕೊಂಡು ಬಿಟ್ಟಿದ್ದಾರೆ. ಹೇಗೆಂದರೆ ಈವೊತ್ತು ನೀವು ಏನು ಕಂದಾಯ ಜಾಸ್ತಿ ಮಾಡುತ್ತೀರೋ ಅದನ್ನು ಆ ಮನೆ ಮಾಲೀಕರುಗಳು ಏನು ಇದ್ದಾರೆ ಅವರು ಈ ಬಾಡಿಗೆ ಮನೆಯವರಿಗೆ ಹಂಚುಬಿಟ್ಟು, ಜಾಸ್ತಿ ಬಾಡಿಗೆ ಮಾಡಿಬಿಟ್ಟು ವಸೂಲ್ಮಾಡುತ್ತಾರೆ. ಕಂದಾಯ ಏನು ಜಾಸ್ತಿ ಮಾಡುತ್ತೀರೋ ಅದನ್ನೆಲ್ಲಾ ಈ ಬಾಡಿಗೆ ಮನೆಯವರಿಗೆ ಹಂಚುತ್ತಾರೆ. ಅವರುಗಳು ಮಾಡುವುದೇ ಹೀಗೆ.

ಈ ಬಗ್ಗೆ ನಾನು ಹೇಳುವುದಾದರೂ ಇಷ್ಟೆ, ಸ್ವಂತ ಮನೆಯಲ್ಲಿ ವಾಸ ಮಾಡುವುದೇ ಪಾಪ ಎಂದು ತಾವು ಹೇಳುವುದಾದರೆ ಅದು ಸರಿಯಾದುದಲ್ಲ. ಇದರಿಂದ ಬಾಡಿಗೆ ದರವೂ ಜಾಸ್ತಿಯಾಗುತ್ತದೆ. ಆಗ ಬಡವರು ಪೇಚಾಟಕ್ಕೆ ಸಿಕ್ಕಿಹಾಕಿಕೊಳ್ಳುತ್ತಾರೆ. ಬೆಂಗಳೂರು ದಾವಣಗೆರೆ, ಹುಬ್ಬಳ್ಳಿ-ಧಾರವಾಡ ಮುಂತಾದ ನಗರಗಳಲ್ಲಿ ವಾಸ ಮಾಡುತ್ತಿರುವ ಮಧ್ಯಮವರ್ಗದವರು ಹಾಗೂ ಕಾರ್ಮಿಕರು ಇದರಿಂದ ಬಹಳ ಕಷ್ಟಕ್ಕೀಡಾಗುತ್ತಾರೆ. ಆದಕಾರಣ ಇದನ್ನು ಪುನರ್ವಿಮರ್ಶೆ ಮಾಡಬೇಕೆಂದು ಹೇಳುತ್ತೇನೆ. ಈ ಮೂಲಕ ಕಾರ್ಪೋರೇಷನ್ನಿನ ಆದಾಯವನ್ನು ಹೆಚ್ಚು ಮಾಡಿಕೊಳ್ಳುವುದರ ಬದಲು ಈಗ ಸೋರಿಹೋಗುತ್ತಿರುವುದನ್ನು ತಡೆಗಟ್ಟಿದರೆ ಇನ್ನೂ ೩ ಕೋಟಿ ರೂ. ಗಳಷ್ಟು ಹೆಚ್ಚು ಆದಾಯ ಬರುತ್ತದೆ. ಈ ೩ ಕೋಟಿ ರೂ. ಗಳನ್ನು ಮತ್ತು ಈಗ ಬರುತ್ತಿರುವ ೧೫ ಕೋಟಿ ರೂ. ಗಳ ಆದಾಯವನ್ನು ಕಾರ್ಪೋರೇಷನ್ನಿನ ಅಭಿವೃದ್ಧಿ ಕಾರ್ಯಗಳಿಗೆ ಉಪಯೋಗ ಮಾಡಿಕೊಳ್ಳಬಹುದು. ಆದರೆ ಮನೆ ಕಂದಾಯವನ್ನು ಹೆಚ್ಚು ಮಾಡುವುದು ಸರಿಯಲ್ಲವೆಂದು ಹೇಳುತ್ತೇನೆ.

ಇನ್ನು ಬೆಂಗಳೂರು ನಗರದಲ್ಲಿ ಕಾರ್ಪೋರೇಷನ್ ಮೂಲಕ ಮಾಡಿಸತಕ್ಕಂಥ ಕೆಲಸಗಳ ಬಗ್ಗೆ ಹೇಳಬೇಕೆಂದರೆ, ಮೊದಲು ಕೆಲಸವನ್ನು ಮಾಡಲು ಕಂಟ್ರಾಕ್ಟ್ ಕೊಡುತ್ತಾರೆ. ನಂತರ ಎಸ್ಟಿಮೇಟ್ ದರವನ್ನು ಜಾಸ್ತಿ ಮಾಡುತ್ತಾರೆ. ಉದಾಹರಣೆಗೆ ಹೇಳಬೇಕೆಂದರೆ ಜಯನಗರದಲ್ಲಿ ಆಸ್ಪತ್ರೆ ಕಟ್ಟಡ ಕಟ್ಟಲು ೪೦ ಲಕ್ಷ ಹೆಚ್ಚು ಕೊಟ್ಟಿದ್ದಾರೆ ಅದೇ ರೀತಿ ಬೆಂಗಳೂರು ನಗರದ ಸೌಂದರ್ಯವನ್ನೇ ಕೆಡಿಸುವಂತಹ ರೀತಿಯಲ್ಲಿದೆ ಎಂದು ಹೇಳುತ್ತಿರುವ ಯುಟಿಲಿಟಿ ಕಟ್ಟಡಕ್ಕೂ ಸಹ ೮೦ ಲಕ್ಷ ರೂ. ಹೆಚ್ಚು ಕೊಟ್ಟಿದ್ದಾರೆ. ಈ ರೀತಿಯಿಂದ ಒಳವ್ಯವಹಾರ, ಅಕ್ರಮ ವ್ಯವಹಾರ ನಡೆಯುತ್ತಿದೆ. ಇದನ್ನೆಲ್ಲಾ ತಡೆಗಟ್ಟಿದರೆ, ಸೋರಿಹೋಗುತ್ತಿರುವುದನ್ನೆಲ್ಲಾ ತಡೆಗಟ್ಟಿದರೆ ಇನ್ನೂ ೩ ಕೋಟಿ ರೂ. ಗಳಷ್ಟು ಹೆಚ್ಚು ಆದಾಯ ಕಾರ್ಪೋರೇಷನ್‌ಗೆ ಬರುತ್ತದೆ. ಆಗ ಯಾವ ಹೊಸ ತೆರಿಗೆಯನ್ನೂ ಹಾಕುವ ಪರಿಸ್ಥಿತಿ ಬರುವುದಿಲ್ಲ. ಕಾರ್ಪೋರೇಷನ್ ಸಿಬ್ಬಂದಿಯ ಖರ್ಚು ಹತ್ತು ವರ್ಷಗಳ ಹಿಂದೆ ಒಂದು ಕೋಟಿ ರೂ. ಇದ್ದರೆ, ಅದು ಈಗ ೬.೫ ಕೋಟಿ ರೂ. ಗಳಾಗಿದೆ. ಇದಕ್ಕೆ ಅವರ ಸಂಬಳ ಸಾರಿಗೆ ಹೆಚ್ಚಾಗಿರುವುದೇ ಕಾರಣವೆಂದು ತಾವು ಹೇಳಬಹುದು. ಆದರೆ ಅದು ಸರಿಯಲ್ಲ. ನನಗೆ ತಿಳಿದಂತೆ ಕಳೆದ ೨ ವರ್ಷಗಳಿಂದ ಸಿಕ್ಕಾಪಟ್ಟೆ ಉದ್ಯೋಗಗಳನ್ನು ಮೊದಲು ತಾತ್ಕಾಲಿಕವಾಗಿ ಕೊಟ್ಟು ನಂತರ ಖಾಯಂ ಮಾಡುವುದು ನಡೆಯುತ್ತಿದೆ. ಜನರಿಗೆ ಉದ್ಯೋಗ ಕೊಡುವುದು ತಪ್ಪೇ ಎಂದು ತಾವು ಕೇಳಬಹುದು: ಆದರೆ ಅದಕ್ಕೂ ಒಂದು ಇತಿಮಿತಿ ಇದೆ. ಕೆಲಸಕ್ಕೆ ತೆಗೆದುಕೊಳ್ಳುವಾಗ ಏನು ಒಂದು ಪದ್ಧತಿಯನ್ನು ಅನುಸರಿಸಬೇಕೋ ಅದನ್ನು ಈಗ ಅನುಸರಿಸುತ್ತಿಲ್ಲ. ಈ ನೇಮಕಗಳ ವಿಚಾರದಲ್ಲಿಯೂ ಅವ್ಯವಹಾರ ನಡೆದಿದೆ ಎಂದು ನನಗೆ ತಿಳಿದು ಬಂದಿದೆ. ಇದಕ್ಕೆ ಮಾನ್ಯ ಮಂತ್ರಿಗಳು ಸಮಂಜಸವಾದ ಉತ್ತರ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಇದರ ಬಗ್ಗೆ ನನ್ನ ಹತ್ತಿರ ಒಂದು ಪಟ್ಟಿಯೇ ಇದೆ. ಈ ಬಗ್ಗೆ ಎಲ್ಲ ವಿವರಗಳನ್ನು ಈಗ ಹೇಳಲು ಹೋಗುವುದಿಲ್ಲ. ನಾಲ್ಕನೇ ದರ್ಜೆಯ ೬೦೦ ಜನರನ್ನು ಕೆಲಸಕ್ಕೆ ತೆಗೆದುಕೊಂಡಿದ್ದಾರೆ. ನರ್ಸರಿ ಟೀಚರ್ಸ್, ಹಿಂದಿ ಟೀಚರ್ಸ್ ಡ್ರಾಯಿಂಗ್ ಟೀಚರ್ಸ್, ಕ್ಲಾರ್ಕ್ಸ್ ಮುಂತಾದವರನ್ನು ಒಳಗೊಂಡಂತೆ ಸುಮಾರು ೧೨೩ ಜನರನ್ನು ಕೆಲಸಕ್ಕೆ ತೆಗೆದುಕೊಂಡಿದ್ದಾರೆ.

ಇನ್ನು ಸ್ಲಮ್ ಕ್ಲಿಯರೆನ್ಸ್‌ಗಾಗಿ ಒಂದು ಪ್ರತ್ಯೇಕ ಬೋರ್ಡನ್ನು ರಚನೆ ಮಾಡಿದ್ದಾರೆ. ಇದನ್ನು ಒಳ್ಳೆಯ ಉದ್ದೇಶದಿಂದಲೇ ಮಾಡಿದರು. ಆದ ಕಾರಣ ಅದರ ಉದ್ದೇಶದ ಬಗ್ಗೆ ನಾನು ಏನು ಹೇಳುವುದಿಲ್ಲ. ಆದರೆ ಈ ಬೋರ್ಡಿಗೆ ಒಂದು ಪೈಸೆಯನ್ನು ಸಹ ಕೊಟ್ಟಿಲ್ಲ. ಬೆಂಗಳೂರು ನಗರದಲ್ಲಿಯೇ ೧೪೨ ರಿಂದ ೧೪೫ ರವರೆಗೆ ಸ್ಲಮ್ಸ್ ಇವೆ. ಅವುಗಳ ಅಭಿವೃದ್ಧಿಗೆ ಹಣವನ್ನೇ ಕೊಟ್ಟಿಲ್ಲ. ಇದಕ್ಕೆ ಒಬ್ಬರು ಚೇರ್‌ಮನ್ ಇದ್ದಾರೆ. ಅವರಿಗೆ ಅಕ್ವಿಜಿಷನ್ ಪವರ್ ಇಲ್ಲ. ಆದರೆ ಬಿ ಡಿ ಎ ಚೇರ್‌ಮನ್ ಅವರಿಗೆ ಇದೆ. ಈಗ ಈ ಬೋರ್ಡಿಗೆ ಮಾನ್ಯ ಬಸವಣ್ಣೆಪ್ಪನವರು ನಾಮಕಾವಸ್ಥೆ ಪಟೇಲರಾಗಿದ್ದಾರೆ

ಶ್ರೀ ಕೋಣಂದೂರು ಲಿಂಗಪ್ಪ.— ಚೇರ್‌ಮನ್ ಎಂದರೆ ಚೇರ್‌ಗೆ ಒಬ್ಬ ಮನುಷ್ಯ

ಶ್ರೀ ಎಂ. ಎಸ್ ಕೃಷ್ಣನ್.—ತಾರೀಖು ೨೫-೬-೧೯೭೬ ರಂದು ಇದೊಂದು ಪ್ರಿಸ್‌ಕ್ರೈಬ್ಡ್ ಅಥಾರಿಟಿ ಎಂದು ಡಿಕ್ಲೇರೇಷನ್ ಮಾಡಿದರು. ಅನಂತರ ಅದರ ಅಧ್ಯಕ್ಷರು ಬೆಂಗಳೂರಿನಲ್ಲಿ ೮ ಕೊಳಚೆ ಪ್ರದೇಶಗಳನ್ನು ನಿರ್ಮೂಲನ ಮಾಡಲು ಮತ್ತು ಅವುಗಳ ಅಭಿವೃದ್ಧಿಗೆ ೩೫ ಲಕ್ಷ ರೂ. ಗಳ ಒಂದು ಎಸ್ಟಿಮೇಟನ್ನು ಮತ್ತು ರಾಜ್ಯದ ಬೇರೆ ಪಟ್ಟಣಗಳಲ್ಲಿರತಕ್ಕಂಥ ಕೆಲವು ಕೊಳಚೆ ಪ್ರದೇಶಗಳನ್ನು ನಿರ್ಮೂಲನ ಮಾಡಿ ಅವುಗಳ ಅಭಿವೃದ್ಧಿಗೆ ೫೦ ಲಕ್ಷ ರೂ. ಗಳ ಒಂದು ಎಸ್ಟೀಮೇಟನ್ನು ತಯಾರು ಮಾಡಿದರು ಆದರೆ ಆ ಪ್ಲಾನ್ ಅಂಡ್ ಎಸ್ಟಿಮೇಟ್ಸ್ ಇಲ್ಲಿಯವರೆಗೆ ಹಾಗೆಯೇ ಉಳಿದಿವೆ. ಅದಕ್ಕೆ ಹಣವನ್ನು ಇನ್ನೂ ಕೊಟ್ಟಿಲ್ಲ. ಚೇರ್‌ಮನ್ ಅವರಿಗೇ ಕಾರು ಮನೆ ಕೊಟ್ಟಿರಬಹುದು, ಆದರೆ ಅವುಗಳ ಅಭಿವೃದ್ಧಿಗೆ ಹಣ ಕೊಟ್ಟಿಲ್ಲ ಸರ್ಕಾರದವರು ಕೊಟ್ಟಿರತಕ್ಕಂಥ ವರದಿಯಲ್ಲಿಯೇ ಈ ರೀತಿ ಹೇಳಿದ್ದಾರೆ :

> "Even though the programme of slum clearance improvement is there since 1956, no effective work has been done either for the clearance or for the improvement of slum areas It is observed that instead of eradication of slums, slums have been multiplied ....

ಎಂದು. ಈ ಕೆಲಸ ಆಗಿಲ್ಲವೆಂದು ಸರ್ಕಾರದವರೇ ಒಪ್ಪಿಕೊಂಡಿದ್ದಾರೆ. ಇದು ಅಕ್ಷಮ್ಯ ಅಪರಾಧವೆಂದು ನಾನು ಹೇಳುತ್ತೇನೆ. ಚೇರ್‌ಮನ್ ಅವರಿಗೇನೋ ಕೆಲಸ ಮಾಡಬೇಕೆಂಬ ಉತ್ಸಾಹವಿದೆ. ಆದರೆ ಅವರ ಹತ್ತಿರ ಹಣವಿಲ್ಲ.

ಶ್ರೀ ಕಾಗೋಡು ತಿಮ್ಮಪ್ಪ.—ಅವರು ಪ್ರಪೋಸಲ್ ಕಳುಹಿಸಿದರೂ ಸಹ ಸರ್ಕಾರದವರು ಹಣ ಕೊಟ್ಟಿಲ್ಲ.

ಶ್ರೀ ಎಂ. ಎಸ್. ಕೃಷ್ಣನ್.—ಇದಕ್ಕೆ ಒಂದೇ ಏಜೆನ್ಸಿ ಇರಬೇಕೆಂದು ಈ ರೀತಿ ಬೋರ್ಡನ್ನು ರಚನೆ ಮಾಡಿದರು. ಆದರೆ ಸ್ಲಮ್ ಕ್ಲಿಯರೆನ್ಸ್‌ಗಾಗಿ ಬೆಂಗಳೂರು ಕಾರ್ಪೊರೇಷನ್‌ಗೆ ೩೩ ಲಕ್ಷ ೭೦ ಸಾವಿರ ರೂ. ಗಳನ್ನು ಮತ್ತು ಬಿ. ಡಿ. ಎ ಗೆ ೪ ಲಕ್ಷ ೨೫ ಸಾವಿರ ರೂ. ಗಳನ್ನು ಕೊಟ್ಟಿದ್ದಾರೆ. ಅಂದರೆ ಈ ಕೆಲಸ ಮಾಡಲು ೩ ಏಜನ್ಸಿಗಳು ಇವೆ ಎಂದು ಅರ್ಥವಾಯಿತು. ಇದು ಸರಿಯಲ್ಲ ಒಂದು ಏಜೆನ್ಸಿ ಕೆಲಸ ಮಾಡಬೇಕು ಮತ್ತು ಅದಕ್ಕೆ ಹೆಚ್ಚು ಹಣವನ್ನು ಕೊಡಬೇಕೆಂದು ಹೇಳುತ್ತೇನೆ.

ಇನ್ನು ಬೆಂಗಳೂರಿನಲ್ಲಿರತಕ್ಕಂಥ ವಾಟರ್ ಸಪ್ಲೈ ಅಂಡ್ ಸಿವರೇಜ್ ಬೋರ್ಡಿನವರು ಬೆಂಗಳೂರು ನಗರದ ನಾನಾ ಕಡೆಗಳಲ್ಲಿ ಒಳಚರಂಡಿ ಕೆಲಸವನ್ನು ಕೈಕೊಂಡಿದ್ದಾರೆ ಆದರೆ ಬೆಂಗಳೂರು ನಗರದ ಮಧ್ಯ ಇರತಕ್ಕಂಥ ಕೆಲವು ಪಾಕೆಟ್ಸ್‌ನಲ್ಲಿ ಈ ಕೆಲಸ ಇನ್ನೂ ಆಗಿಲ್ಲ. ಉದಾಹರಣೆಗೆ ಯಶವಂತಪುರದಲ್ಲಿ ಹಾಗೂ ಪ್ರಕಾಶನಗರದಲ್ಲಿ ಇಲ್ಲಿಯವರೆಗೆ ಈ ಕೆಲಸವಾಗಿಲ್ಲ. ಆದರೂ ಸಹ ಆ ಭಾಗದ ಜನರಿಂದ ತೆರಿಗೆಯನ್ನು ವಸೂಲಿ ಮಾಡುತ್ತಿದ್ದಾರೆ. ಬೆಂಗಳೂರು ನಗರದ ಸುತ್ತ ಮುತ್ತ ಈ ಕೆಲಸ ನಡೆಯುತ್ತಿದೆ. ಆದರೆ ಬೆಂಗಳೂರು ನಗರ ಕಾರ್ಪೊರೇಷನ್‌ಗೆ ಸೇರಿಕೊಂಡ ೩೨ ಗ್ರಾಮಗಳಲ್ಲಿ ಈ ಕೆಲಸವಾಗಿಲ್ಲ. ಗ್ರಾಮ ಠಾಣ ಎಂದು ಇವೆ. ಅವುಗಳ ಸುತ್ತ ಮುತ್ತ ರೋಡುಗಳನ್ನು ಮತ್ತು ಇತರೇ ವ್ಯವಸ್ಥೆಗಳನ್ನು ಮಾಡಿದ್ದಾರೆ. ಆದರೆ ಆ ಗ್ರಾಮಗಳಲ್ಲಿ ಒಳಚರಂಡಿ ವ್ಯವಸ್ಥೆಯಾಗಲೀ, ನೀರು ದೀಪದ ವ್ಯವಸ್ಥೆಯಾಗಲೀ, ಲೆಟ್ರೀನ್ ವ್ಯವಸ್ಥೆಯಾಗಲೀ ಇಲ್ಲ. ಇದರಿಂದ ಆ ಗ್ರಾಮಗಳಲ್ಲಿರತಕ್ಕಂಥ ಹೆಣ್ಣು ಮಕ್ಕಳ ಪಾಡು ಹೇಳುವುದಕ್ಕಾಗುವುದಿಲ್ಲ. ಮೊದಲಾದರೆ ಆ ಗ್ರಾಮಗಳ ಸುತ್ತ ಮುತ್ತ ಬಯಲಿರುತ್ತಿತ್ತು. ಆದರೆ ಈಗ ಎಲ್ಲ ಕಡೆಯೂ ರೋಡುಗಳು ಮತ್ತು ಮನೆಗಳು ಬಂದುಬಿಟ್ಟಿವೆ. ಇಂತಹ ಗ್ರಾಮಗಳಿಗೆ ಹಾಗೂ ಕಾರ್ಪೊರೇಷನ್‌ನವರು ತಮ್ಮ ವಶಕ್ಕೆ ತೆಗೆದುಕೊಂಡ ೩೨ ಗ್ರಾಮಗಳಿಗೆ ನೀರು ದೀಪ ಮೊದಲುಗೊಂಡ ಎಲ್ಲಾ ವ್ಯವಸ್ಥೆಗಳನ್ನು ಕೊಟ್ಟಿದ್ದಾರೆ, ಆ ಬಗ್ಗೆ ಪ್ರತಿ ಹಳ್ಳಿಯ ಬಗ್ಗೆಯೂ ಮಾನ್ಯ ಮಂತ್ರಿಗಳು ನಮಗೆ ವಿವರಗಳನ್ನು ಕೊಡಬೇಕು. ಆ ಗ್ರಾಮಗಳನ್ನು ವಶಪಡಿಸಿಕೊಂಡಾಗ ೯ ಪರ್ಸೆಂಟ್ ಮೇಲೆ ತೆರಿಗೆ ಹಾಕುವುದಿಲ್ಲವೆಂದು ಆಗಿನ ಮಂತ್ರಿಗಳಾಗಿದ್ದ ಶ್ರೀ ಬಿ. ಎಂ. ಪಾಟೀಲ್ ಅವರು ನಮಗೆ ಆಶ್ವಾಸನೆ ಕೊಟ್ಟಿದ್ದರು. ಆದರೆ ಈಗ ಅವರ ಹತ್ತಿರವೂ ಸಹ ೧೫ ಪರ್ಸೆಂಟ್ ತೆರಿಗೆ ವಸೂಲಿ ಮಾಡುತ್ತಿದ್ದಾರೆ. ಮತ್ತೆ ಇದನ್ನು ೨೬ ಪರ್ಸೆಂಟ್‌ಗೆ ಹೆಚ್ಚು ಮಾಡಿದರೆ ಆ ಹಳ್ಳಿಯ ಜನರು ಅದನ್ನು ಒಪ್ಪಿಕೊಳ್ಳುವುದಕ್ಕೆ ತಯಾರಿಲ್ಲ. ಮಾನ್ಯ ನಾಗಣ್ಣನವರು ಹೇಳಿದಂತೆ ಬೆಂಗಳೂರಿನ ಜನರೂ ಸಹ ಒಪ್ಪಿಕೊಳ್ಳುವುದಿಲ್ಲ. ೨೬ ಪರ್ಸೆಂಟ್‌ಗೆ ಹೆಚ್ಚು ಮಾಡುವುದರಿಂದ ಬೆಂಗಳೂರು ನಗರದಲ್ಲಿ ಒಂದು ರೀತಿ ಅಸ್ಫೋಟನೆಗೆ ತಾವೇ ಅವ

ಕಾಶ ಮಾಡಿಸಿಕೊಟ್ಟಂತೆ ಆಗುತ್ತದೆ. ಆದ್ದರಿಂದ ಅದಕ್ಕೆ ಅವಕಾಶ ಕೊಡಬಾರದೆಂದು ಹೇಳುತ್ತೇನೆ. ಮತ್ತು ಈ ೬೨ ಗ್ರಾಮಗಳಿಗೆ ರಸ್ತೆ ನೀರು, ದೀಪ, ಒಳಚರಂಡಿ ವ್ಯವಸ್ಥೆ ಲೆಟ್ರಿನ್ ಮುಂತಾದ ಎಲ್ಲ ಅನುಕೂಲಗಳನ್ನು ಮಾಡಿಕೊಡುವವರೆಗೆ ೯ ಪರ್ಸೆಂಟ್‌ಗಿಂದ ಹೆಚ್ಚು ತೆರಿಗೆ ವಸೂಲಿ ಮಾಡಬಾರದೆಂದು ಸ್ಪಷ್ಟವಾಗಿ ಹೇಳುತ್ತೇನೆ

ಇನ್ನು ಹೌಸಿಂಗ್ ಬಗ್ಗೆ ಒಂದು ಮಾತನ್ನು ಹೇಳಬೇಕಾಗಿದೆ. ಗುಲ್ಬರ್ಗದಿಂದ ಬೀದರ್‌ಗೆ ಹೋಗುವಾಗ ಮಾರ್ಗ ಮಧ್ಯದಲ್ಲಿ ಜನತಾ ಹೌಸಿಂಗ್ ಸ್ಕೀಮ್ ಪ್ರಕಾರ ಹತ್ತು ಮನೆಗಳನ್ನು ಕಟ್ಟಿಸಿದ್ದಾರೆ. ಆದರೆ ಅವುಗಳ ಕೆಲಸ ಇನ್ನೂ ಮುಗಿದಿಲ್ಲ. ೨ ಕಡೆ ಗೋಡೆಗಳು ಮಾತ್ರ ಇವೆ. ಮೇಲೆ ಚಾವಣಿಯೇ ಇಲ್ಲ.

ಶ್ರೀ ಕೆ. ಎಚ್. ರಂಗನಾಥ್.— ಅವು ಹಳೆಯ ಮನೆಗಳಿರಬೇಕು.

7-00 P. M.

ಶ್ರೀ ಎಂ. ಎಸ್. ಕೃಷ್ಣನ್.— ಈಗಲೂ ಕೂಡ ಅದನ್ನು ರಿಪೇರಿ ಮಾಡಿಲ್ಲ. ಈ ತರಹ ಎಷ್ಟೋ ಮನೆಗಳು ಇವೆ. ಕಂಟ್ರಾಕ್ಟ್ ಕೊಟ್ಟರೆ ಒಳ್ಳೆಯ ಕೆಲಸ ಮಾಡುವುದಿಲ್ಲ. ಆದ್ದರಿಂದ ಕಂಟ್ರಾಕ್ಟ್ ಕೊಡುವ ಬದಲು ಜನಗಳ ಸಹಾಯವನ್ನು ಪಡೆದು ಮನೆಗಳನ್ನು ಕಟ್ಟಬಹುದಾಗಿತ್ತು. ಇಲ್ಲಿ ಜನಗಳ ಸಹಾಯ ಪಡೆಯುವ ಬದಲು ಕಂಟ್ರಾಕ್ಟ್‌ಗಳಿಗೆ ಸಹಾಯ ಮಾಡಿ ಆ ಕಂಟ್ರಾಕ್ಟರುಗಳು ಸರಿಯಾದ ಮೆಟಿರಿಯಲ್ಸ್ ಉಪಯೋಗ ಮಾಡದೆ ಅವರು ಕಟ್ಟಿದ ಮನೆಗಳು ಸೋರುತ್ತಿವೆ. ಆದ್ದರಿಂದ ಇದರ ಬಗ್ಗೆ ಸರ್ಕಾರದವರು ತಮ್ಮ ಗಮನವನ್ನು ಹರಿಸಬೇಕೆಂದು ನಾನು ಹೇಳುತ್ತೇನೆ. ಈ ವಿಚಾರದಲ್ಲಿ ಇಷ್ಟು ಮಾತ್ರ ಹೇಳಿ ಮುಂದೆ ಕರ್ನಾಟಕ ಹೌಸಿಂಗ್ ಬೋರ್ಡಿನವರು ತಮ್ಮ ಗಮನವನ್ನು ಬೇರೆ ಕಡೆ ಎಂದರೆ ಗ್ರಾಮಾಂತರ ಪ್ರದೇಶಗಳ ಕಡೆಗೂ ಹರಿಸಬೇಕು ಈಗ ಹೌಸಿಂಗ್ ಬೋರ್ಡಿನವರು ನಗರಗಳಲ್ಲಿ ಮಾತ್ರ ಮನೆಗಳನ್ನು ಕಟ್ಟುತ್ತಿದ್ದಾರೆ. ಆದ್ದರಿಂದ ಇನ್ನು ಮುಂದೆ ಈ ಹೌಸಿಂಗ್ ಬೋರ್ಡ್ ಮನೆಗಳನ್ನು ಕಟ್ಟುವ ಯೋಜನೆಗಳನ್ನು ಗ್ರಾಮಾಂತರ ಪ್ರದೇಶದ ಕಡೆಗೂ ವಿಸ್ತರಿಸಬೇಕು. ಹೌಸಿಂಗ್ ಕಾರ್ಪೋರೇಷನ್ನಿಗೆ ಶ್ರೀಮಾನ್ ಕುಮಾರಸ್ವಾಮಿಯವರು ಚೇರ್ಮನ್ ಆಗಿದ್ದಾರೆ. ಅವರ ಗಮನವೂ ಸಹ ಗ್ರಾಮಾಂತರ ಪ್ರದೇಶದ ಕಡೆ ಹರಿದಿಲ್ಲ ಆದ ಕಾರಣ ಹೌಸಿಂಗ್ ಕಾರ್ಪೋರೇಷನ್‌ನವರು ಮತ್ತು ಹೌಸಿಂಗ್ ಬೋರ್ಡಿನವರು ಹೌಸಿಂಗ್ ಯೋಜನೆಯನ್ನು ಗ್ರಾಮಾಂತರಪ್ರದೇಶಗಳಿಗೂ ವಿಸ್ತರಿಸಬೇಕೆಂದು ಹೇಳಿ ನನಗೆ ಮಾತನಾಡುವುದಕ್ಕೆ ಅವಕಾಶವನ್ನು ಕೊಟ್ಟಿದ್ದಕ್ಕಾಗಿ ಅವರಿಗೆ ವಂದಿಸಿ ನಾನು ನನ್ನ ಮಾತನ್ನು ಮುಗಿಸುತ್ತೇನೆ

†ಶ್ರೀ ಎಂ. ವೆಂಕಟಲಿಂಗಯ್ಯ (ಕೃಷ್ಣರಾಜ).— ಮಾನ್ಯ ಅಧ್ಯಕ್ಷರವರೇ ಮಾನ್ಯ ಪೌರಾಡಳಿತ ಸಚಿವರು ಈ ಸಭೆಯ ಮುಂದೆ ಮಂಡಿಸಿರತಕ್ಕ ಬೇಡಿಕೆಗಳನ್ನು ವಿರೋಧಿಸುತ್ತಾ ಕೆಲವು ಸಲಹೆಗಳನ್ನು ಹೇಳಬಯಸುತ್ತೇನೆ. ಜನ ಹೌಸಿಂಗ್ ಯೋಜನೆಯಲ್ಲಿ ಮನೆಗಳನ್ನು ಕಟ್ಟುವುದಕ್ಕೆ ಜನಗಳಿಗೆ ಸರ್ಕಾರದವರು ೨೫೦೦ ರೂಪಾಯಿಗಳನ್ನು ಕೊಡುತ್ತಿದ್ದಾರೆ. ಈ ೨೫೦೦ ರೂಪಾಯಿಗಳಲ್ಲಿ ಒಂದು ಸಾವಿರ ರೂಪಾಯಿಗಳು ಲೋನು, ಒಂದು ಸಾವಿರ ರೂಪಾಯಿ ಸಬ್ಸಿಡಿ ರೂಪದಲ್ಲಿ ಕೊಡುವುದು ಪಾರ್ಟಿಯು ೫೦೦ ರೂಪಾಯಿಗಳನ್ನು ಹಣದ ರೂಪದಲ್ಲಾಗಲೀ, ಮೆಟೀರಿಯಲ್ಸ್ ರೂಪದಲ್ಲಾಗಲೀ ಕೊಡಬೇಕೆಂದು ಯೋಜನೆಯಲ್ಲಿ ಇದೆ. ಆದರೆ ೫೦೦ ರೂಪಾಯಿಗಳನ್ನು ಸಂಬಂಧಪಟ್ಟ ಪಾರ್ಟಿಯವರಿಂದ ಈಗ ಏನು ತೆಗೆದುಕೊಳ್ಳುತ್ತಿದ್ದಾರೆ ಇದನ್ನು ಅವರು ಕೆಲವು ಸಮಯದಲ್ಲಿ ಕೊಡುವುದಕ್ಕೆ ಅವಕಾಶ ಇಲ್ಲದಿದ್ದರೆ, ತುಂಬಾ ಬಡವರಾಗಿರತಕ್ಕವರು ಹಣವನ್ನಾಗಲೀ ಮೆಟೀರಿಯಲ್ಸ್ ಅನ್ನಾಗಲೀ ಕೊಡುವುದಕ್ಕೆ ಅವಕಾಶವಿಲ್ಲದಿದ್ದರೆ ಮತ್ತು ಕೆಲಸ ಮಾಡುವುದಕ್ಕೂ ಸಾಧ್ಯವಾಗದಿದ್ದರೆ ತೊಂದರೆಯಾಗುತ್ತದೆ ಆದ್ದರಿಂದ ಆ ೫೦೦ ರೂಪಾಯಿಗಳನ್ನು ಸಾಲದ ರೂಪದಲ್ಲಿ ಒದಗಿಸಬೇಕು ಎಂದು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ೨೫೦೦ ರೂಪಾಯಿಗಳನ್ನೂ ಪೂರ್ತಿ ಲೋನು ಸಬ್ಸಿಡಿ ರೂಪದಲ್ಲಿ ಕೊಟ್ಟು ಅದನ್ನು ಸಂಬಂಧಪಟ್ಟ ಪಾರ್ಟಿಯಿಂದ ವಸೂಲು ಮಾಡಿಕೊಳ್ಳಬೇಕೆಂದು ನಾನು ಸಲಹೆ ಮಾಡುತ್ತೇನೆ. ಮನೆ ಇಲ್ಲದೆ ಇದ್ದವರಿಗೆ ಜಮೀನು ಇಲ್ಲದೆ ಇರುವವರಿಗೆ ಮಾತ್ರ ಈ ಯೋಜನೆಯನ್ನು ಅಪ್ಲೈ ಮಾಡಿದ್ದಾರೆ. ಆದರೆ ಒಂದು ಎಕರೆ ಎರಡು ಎಕರೆ ಜಮೀನು ಇದ್ದವರಿಗೂ ಕೂಡ ಬೇರೆ ರೀತಿಯಲ್ಲಿ ಹೆಚ್ಚಿನ ಸಹಾಯ ಸಿಕ್ಕದೆ ಇರುವುದರಿಂದ ಅವರಿಗೆ ಹೌಸಿಂಗ್ ಬೋರ್ಡಿನವರು ಒಂದು ಯೋಜನೆಯನ್ನು ಮಾಡಿ ೨೫೦೦ ರೂಪಾಯಿಗಳನ್ನೂ ಅವರಿಗೆ ಕೊಟ್ಟು ಮನೆ ಕಟ್ಟಿಸಿ ಆ ಹಣವನ್ನು ಅವರಿಂದ ಇನ್‌ಸ್ಟಾಲ್‌ಮೆಂಟ್ ಬೇಸಿಸ್‌ಮೇಲೆ ವಸೂಲು ಮಾಡುವುದಕ್ಕೆ ಸಹಾಯ ಮಾಡಬೇಕು. ಮತ್ತು ಈ ಹೌಸಿಂಗ್ ಯೋಜನೆ

ಯಲ್ಲಿ ಒಂದು ಯೋಜನೆಯಲ್ಲಿ ಒಂದು ಸಾವಿರ ರೂಪಾಯಿಗಳನ್ನು ಮೆಟೀರಿಯಲ್ಸ್ ರೂಪದಲ್ಲಿ ಕೊಡುತ್ತಿದ್ದಾರೆ. ಮತ್ತೊಂದು ಯೋಜನೆಯಲ್ಲಿ ೨೫೦ ರೂಪಾಯಿಗಳನ್ನು ಮೆಟೀರಿಯಲ್ಸ್ ರೂಪದಲ್ಲಿ ಕೊಡುತ್ತಿದ್ದಾರೆ. ಇದನ್ನು ಮೆಟೀರಿಯಲ್ಸ್ ಕೊಡುವುದರಿಂದ ಅನ್ಯಾಯವಾಗುತ್ತದೆ. ಸರಿಯಾದ ಸಾಮಾನು ಕೊಡುವುದಿಲ್ಲ. ಮಧ್ಯೆ ಇರುವವರು ದುಡ್ಡು ಹೊಡೆದು ಸರಿಯಾಗಿ ಮನೆಯನ್ನು ಕಟ್ಟುವುದಕ್ಕೆ ಆಗುವುದಿಲ್ಲ. ಆದ್ದರಿಂದ ಅದನ್ನು ಹಣದ ರೂಪದಲ್ಲಿಯೇ ಸಹಾಯ ಮಾಡಬೇಕು. ಯಾಕೆಂದರೆ ಮೆಟೀರಿಯಲ್ಸ್ ರೂಪದಲ್ಲಿ ಕೊಟ್ಟರೆ ಅದು ಸರಿಯಾದ ರೀತಿಯಲ್ಲಿ ದೊರೆಯುವುದಿಲ್ಲ. ಆದ್ದರಿಂದ ಮನೆಯನ್ನು ಕಟ್ಟಿಕೊಳ್ಳುವುದಕ್ಕೆ ಸರ್ಕಾರದವರು ಏನು ಸಹಾಯವನ್ನು ಕೊಡುತ್ತಾರೆಯೋ ಅದನ್ನು ಹಣದ ರೂಪದಲ್ಲಿ ಕೊಡುವುದು ಒಳ್ಳೆಯದು.

ಹೌಸಿಂಗ್ ಬೋರ್ಡಿನವರು ಮನೆಗಳನ್ನು ಕಟ್ಟುವುದಕ್ಕೆ ಅರ್ಬನ್ ಏರಿಯಾದಲ್ಲಿ ಎಷ್ಟು ಹಣವನ್ನು ಪ್ರೊವೈಡ್ ಮಾಡುತ್ತಾರೆಯೋ ಅದರ ೮೦ ಪರ್ಸೆಂಟ್‌ನಷ್ಟು ಹಣವನ್ನು ರೂರಲ್ ಏರಿಯಾಕ್ಕೆ ಪ್ರೊವೈಡ್ ಮಾಡಬೇಕು. ೮೦ ಪರ್ಸೆಂಟ್ ಜನಸಂಖ್ಯೆ ಇರತಕ್ಕ ರೂರಲ್ ಏರಿಯಾಕ್ಕೆ ಹೆಚ್ಚಿನ ರೀತಿಯಲ್ಲಿ ಜಾಸ್ತಿ ಹಣವನ್ನು ಒದಗಿಸಬೇಕೆಂದು ನಾನು ಹೇಳುತ್ತೇನೆ. ಫ್ರೀಸೈಟ್ ಕೊಡತಕ್ಕಂಥ ಯೋಜನೆಯನ್ನು ರೂರಲ್ ಏರಿಯಾದಲ್ಲಿ ಮಾತ್ರ ಜಾರಿಗೆ ತಂದಿದ್ದಾರೆ. ಅರ್ಬನ್ ಏರಿಯಾದಲ್ಲಿ ಇದನ್ನು ಜಾರಿಗೆ ತಂದಿಲ್ಲ. ನಾವು ಕಂಡ ಹಾಗೆ ಅರ್ಬನ್ ಏರಿಯಾದಲ್ಲಿ ಯಾರಿಗೂ ಫ್ರೀ ಸೈಟ್ಸ್ ಕೊಟ್ಟಿಲ್ಲ. ಅರ್ಬನ್ ಏರಿಯಾದಲ್ಲಿ ಕೂಡ ತುಂಬಾ ಬಡವರು ಇದ್ದಾರೆ. ಆದ್ದರಿಂದ ಅರ್ಬನ್ ಏರಿಯಾದಲ್ಲಿ ಕೂಡ ಫ್ರೀ ಸೈಟ್ಸ್ ಕೊಡತಕ್ಕಂಥಾ ಯೋಜನೆಯನ್ನು ಜಾರಿಗೆ ತರಬೇಕು.

ಇನ್ನು ಮುನಿಸಿಪಾಲಿಟಿ ವಿಷಯದಲ್ಲಿ ನಮ್ಮ ಮಾನ್ಯ ಸದಸ್ಯರಾದ ಶ್ರೀಮಹಾನ್ ಪುಟ್ಟಸ್ವಾಮಿಯವರು ಹೇಳಿದ್ದಾರೆ. ಮುನಿಸಿಪಾಲಿಟಿಗಳನ್ನು ಸೂಪರ್‌ಸೀಡ್ ಮಾಡಿ ಅಡ್ಮಿನಿಸ್ಟ್ರೇಟರನ್ನು ನೇಮಕ ಮಾಡಿರುವುದರಿಂದ ಏನೇನು ತೊಂದರೆಗಳಾಗುತ್ತಿವೆ ಎನ್ನುವ ಬಗ್ಗೆ ನಮ್ಮ ಅನೇಕ ಸ್ನೇಹಿತರು ಹೇಳಿದ್ದಾರೆ. ಈಗ ಉದಾಹರಣೆಗೆ ನಮ್ಮ ಮೈಸೂರು ಮುನಿಸಿಪಾಲಿಟಿಯ ವಿಷಯನ್ನು ಹೇಳುವುದಾದರೆ ಮೈಸೂರು ಮುನಿಸಿಪಾಲಿಟಿಯನ್ನು ಕಾರ್ಪೊರೇಷನ್ ಮಾಡುತ್ತೇವೆ ಎಂದು ಹೇಳಿ ಒಂದು ಏರಿಯಾ ಪ್ರಪೋಜಲ್ ತರಿಸಿಕೊಂಡಿದ್ದಾರೆ. ಅಲ್ಲಿ ಅಡ್ವೈಸರಿ ಕೌನ್ಸಿಲ್ ಮಾಡಿದ್ದಾರೆ. ಅವರು ಯಾರಿಗೂ ಇನ್‌ಸ್ಪೆಕ್ಷನ್ ಮಾಡುವುದಕ್ಕೆ ಅವಕಾಶ ಕೊಡದೆ ಮುನಿಸಿಪಾಲಿಟಿಗೆ ೨೫ ಹಳ್ಳಿಗಳನ್ನು ಸೇರಿಸಿದ್ದಾರೆ. ಇವುಗಳು ಯಾವು ಎಂಬುದನ್ನು ನೋಡುವುದಕ್ಕೆ ಅವಕಾಶ ಕೊಡದೆ ಸರ್ಕಾರಿ ಹುಕುಂ ಹೊರಡಿಸಿ ತಕ್ಷಣ ಕಳುಹಿಸಬೇಕು ಎಂದು ಅಡ್ಮಿನಿಸ್ಟ್ರೇಟರಿಗೆ ಹೇಳಿದ್ದಾರೆ. ಈ ರೀತಿ ಏತಕ್ಕೆ ಮಾಡಿದ್ದಾರೆ ಎಂಬುದು ಗೊತ್ತಾಗಲಿಲ್ಲ. ಮಂತ್ರಿಗಳಿಗೆ ಬೇಕಾಗಿರತಕ್ಕ ಅಧಿಕಾರಿಗಳು ಇದ್ದರೆ ಇತರಹ ಹೇಳಿ ಮಾಡಿಸುವುದಕ್ಕೆ ಅವಕಾಶವಾಗುತ್ತದೆ ಎಂದು ನಾನು ಹೇಳುತ್ತೇನೆ. ಮೈಸೂರು ಮುನಿಸಿಪಾಲಿಟಿಯ ಆಡಳಿತ ಹೇಗಿದೆ ಎಂದರೆ ಮೈಸೂರು ಸಿಟಿಯಲ್ಲಿ ೩೫-೪೦ ಪರ್ಸೆಂಟ್ ಲೈಟ್ ಇಲ್ಲ. ಯಾವ ರಸ್ತೆಯೂ ಕೂಡ ಸರಿಯಾದ ರೀತಿಯಲ್ಲಿ ಇಲ್ಲ. ಮುನಿಸಿಪಾಲಿಟಿಯಲ್ಲಿ ಲಂಚರುಷುವತ್ತುಗಳು ಜಾಸ್ತಿಯಾಗಿವೆ. ಇಂಜಿನಿಯರಿಂಗ್ ಲೈಸೆನ್ಸ್ ತೆಗೆದುಕೊಳ್ಳಬೇಕಾದರೆ, ಹೆಲ್ತ್ ಲೈಸೆನ್ಸ್, ತೆಗೆದುಕೊಳ್ಳಬೇಕಾದರೆ ಖಾತೆ ಬದಲಾವಣೆ ಮಾಡಬೇಕಾದರೆ ಮಾಮೂಲು ದುಡ್ಡು ಕೊಟ್ಟ ಹೊರತು ಯಾವ ಲೈಸೆನ್ಸ್ ಕೊಡುವುದಿಲ್ಲ. ಖಾತೆ-ಬದಲಾವಣೆ ಆಗುವುದಿಲ್ಲ. ಇದು ತುಂಬಾ ಅನ್ಯಾಯ. ಮುನಿಸಿಪಾಲಿಟಿಗೆ ಚುನಾವಣೆಯಾಗಿ ಜನತಾ ಪ್ರತಿನಿಧಿಗಳು ಮುನಿಸಿಪಾಲಿಟಿಯಲ್ಲಿ ಇದ್ದರೆ ಈ ರೀತಿ ಆಗುತ್ತಾ ಇರಲಿಲ್ಲ. ಒಂದು ಹೆಲ್ತ್ ಲೈಸೆನ್ಸ್ ಅನ್ನು ಹೋಟಲಿಗೆ ತೆಗೆದುಕೊಳ್ಳಬೇಕಾದರೆ ೨೦೦-೩೦೦ ರೂಪಾಯಿಗಳನ್ನು ಸಂಬಂಧಪಟ್ಟ ಅಧಿಕಾರಿಗಳಿಗೆ ಕೊಡಬೇಕಾಗುತ್ತದೆ. ಅವರಿಗೆ ಏತಕ್ಕೆ ಲಂಚ ಕೊಡುತ್ತೀರಿ ಕೊಡಬೇಡಿ ನಾವು ಲೈಸೆನ್ಸ್ ಕೊಡಿಸುತ್ತೇವೆ ಎಂದು ಹೇಳಿದರು ಅವರು ಹೆದರಿಕೊಂಡು ನೀವು ಹೇಳಿ ಇವೊತ್ತು ನಮಗೆ ಲೈಸೆನ್ಸ್ ಕೊಡಿಸಿದರೆ ನಾಳೆ ಆಫೀಸರು ತನಿಖೆ ಮಾಡಿ ಯಾವುದೋ ಒಂದು ಕಾರಣವನ್ನು ಹೇಳಿ ಹೋಟಲನ್ನು ಮುಚ್ಚುವ ತನಕ ಬಿಡುವುದಿಲ್ಲ. ಅದಕ್ಕಾಗಿ ೨೦೦-೩೦೦ ರೂಪಾಯಿ ಲಂಚ ಕೊಟ್ಟರೂ ಚಿಂತೆಯಿಲ್ಲ ನಾವು ಅವರಿಂದಲೇ ಲೈಸನ್ಸ್ ತೆಗೆದುಕೊಳ್ಳುತ್ತೇವೆ ಎಂದು ಹೇಳುತ್ತಾರೆ. ಮುನಿಸಿಪಾಲಿಟಿಯಲ್ಲಿ ಯಾವ ರೀತಿಯ ಕಿರುಕುಳ ಇದೆ ಎಂಬುದನ್ನು ನಾನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ಮುನಿಸಿಪಾಲಿಟಿಗೆ ೨೫ ಹಳ್ಳಿಗಳನ್ನು ಸೇರಿಸಬೇಕೆಂದು ಪ್ರಪೋಜಲ್ಸ್ ತರಿಸಿಕೊಂಡಿದ್ದಾರೆ ಅದರ ಬಗ್ಗೆ ಇನ್‌ಸ್ಪೆಕ್ಷನ್ ಆಗುವವರೆಗೂ, ಯಾವ ಯಾವ ಏರಿಯಾ ಸೇರಬೇಕು ಎಂದು ಒಪೀನಿಯನ್ ಕೊಡುವವರೆಗೂ ಕಾರ್ಪೊರೇಷನ್ ಏರಿಯಾ ಡಿಕ್ಲೇರ್ ಮಾಡಕೂಡದು ಎಂದು ನಾನು ಹೇಳುತ್ತೇನೆ.

ಮತ್ತು ತೆರಿಗೆಗಳನ್ನು ಹಾಕುವ ಬಗ್ಗೆ ೨೦ ಪರ್ಸೆಂಟ್ ತೆರಿಗೆಯನ್ನು ಹೆಚ್ಚಿಗೆ ಹಾಕುತ್ತೇವೆ ಎಂದು ಹೇಳಿದ್ದಾರೆ. ಎಲೆಕ್ಟೆಡ್ ಬಾಡಿ ಬರುವವರೆಗೂ ಈ ತೆರಿಗೆಯನ್ನು ಹಾಕಕೂಡದು, ಇದನ್ನು ಹಾಗೆಯೇ ಇಡಬೇಕು ಎಂದು ಹೇಳುತ್ತೇನೆ. ಅನೇಕ ಮುನಿಸಿಪಾಲಿಟಿಗಳ ಟರ್ಮ್ ಮುಗಿದರೂ ಕೂಡ ಚುನಾವಣೆಯನ್ನು ಮಾಡದೇ ಟರ್ಮ್ ಎಕ್ಸ್‌ಟೆಂಡ್ ಮಾಡಿ ಅಡ್ಮಿನಿಸ್ಟ್ರೇಟರನ್ನು ನೇಮಕ ಮಾಡುತ್ತಾ ಹೋಗುತ್ತಾರೆ. ನೆನ್ನೆ ಅರಸೀಕೆರೆಯ ಮುನಿಸಿಪಾಲಿಟಿಯ ಟರ್ಮ್ ಎಕ್ಸ್‌ಟೆಂಡ್ ಮಾಡಿದ ವಿಷಯ ಬಂದಿತು. ಅದರಲ್ಲಿಯೂ ಕೂಡ ಅವಧಿ ಮುಗಿದ ಮೇಲೆ ಮತ್ತು ಟರ್ಮ್ ಎಕ್ಸ್‌ಟೆಂಡ್ ಮಾಡಿ ಅಡ್ಮಿನಿಸ್ಟ್ರೇಟರನ್ನು ನೇಮಕ ಮಾಡಿದ್ದಾರೆ. ಚುನಾವಣೆ ಮುಂದೂಡಿಕೆ ಕಾನೂನು ಪಾಸಾಗುವವರೆಗೂ ಟೆರಿಟೋರಿಯಲ್ ಡಿವಿಜನ್ ಮಾಡಿರಲಿಲ್ಲವೇ ? ೩ ತಿಂಗಳು ಟೈಮ್ ಇದ್ದರೂ ಎಮರ್ಜೆನ್ಸಿ ಹೋದ ಮೇಲೆ ಏತಕ್ಕೆ ಅದನ್ನು ಮಾಡಲಿಲ್ಲ ಯಾವುದೋ ಒಂದೊಂದು ಕಾರಣವನ್ನು ಹೇಳಿಕೊಂಡು ಎಲೆಕ್ಷನ್ ಮುಂದೂಡಿಕೊಂಡು ಮುನಿಸಿಪಾಲಿಟಿಗಳ ಟರ್ಮ್ ಎಕ್ಸ್‌ಟೆಂಡ್ ಮಾಡಿಕೊಂಡು ಅಡ್ಮಿನಿಸ್ಟ್ರೇಟರನ್ನು ನೇಮಕ ಮಾಡುತ್ತಾ ಹೋಗಿದ್ದಾರೆ. ಮುನಿಸಿಪಾಲಿಟಿಯ ಎಲೆಕ್ಷನ್ ನಡೆಸದೆ ಜನತಾ ಪ್ರತಿನಿಧಿಗಳು ಬರುವುದಕ್ಕೆ ಅವಕಾಶವನ್ನು ಕೊಡದೆ ಅವಧಿಯನ್ನು ಮುಂದುವರಿಸಿಕೊಂಡು ಹೋಗಿದ್ದಾರೆ. ಇದು ಸರಿಯಲ್ಲ ಆದ್ದರಿಂದ ಎಲ್ಲಾ ಮುನಿಸಿಪಾಲಿಟಿಗಳ ಎಲೆಕ್ಷನ್ ನಡೆಸಿ ಮುನಿಸಿಪಾಲಿಟಿಗಳಿಗೆ ಜನತಾ ಪ್ರತಿನಿಧಿಗಳು ಬರುವುದಕ್ಕೆ ಅವಕಾಶ ಮಾಡಿಕೊಡಬೇಕೆಂದು ಹೇಳಿ ನನಗೆ ಮಾತನಾಡುವುದಕ್ಕೆ ಅವಕಾಶ ಕೊಟ್ಟಿದ್ದಕ್ಕಾಗಿ ಮಾನ್ಯ ಅಧ್ಯಕ್ಷರಿಗೆ ವಂದಿಸಿ ನಾನು ನನ್ನ ಮಾತನ್ನು ಮುಗಿಸುತ್ತೇನೆ.

MADAM SPEAKER.—Now the Discussions is concluded. Tomorrow there will be no Question Hour.

The House will adjourn now and meet tomorrow at 1 P. M.

The House adjourned at Ten minutes past Seven of the Clock to meet again at One of the Clock on Tuesday the 30th June 1977.

WD 7122—GPB.